ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 7 ಮಂಗಳವಾರ 2022

ಸಂಪುಟ: 43 | ಸಂಚಿಕೆ: 52 | ಪುಟಗಳು: 10

₹4


ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

ಕೊರೊನಾ ನಿಯಂತ್ರಣದಲ್ಲಿದೆ; ಆತಂಕಪಡುವ ಅಗತ್ಯವಿಲ್ಲ

- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಯ
- ಜಿಲ್ಲೆಗಳಿಂದ ಮಾಹಿತಿ ಸಂಗ್ರಹಿಸಿ ಮುಂದಿನ ನಿರ್ಧಾರ

ಬೆಂಗಳೂರು, ಜೂ.6(ಕೆಎಂಶಿ)– ಕೋವಿಡ್ ಸಂಪೂರ್ಣ ನಿಯಂತ್ರಣದಲ್ಲಿದ್ದು, ಅನಗತ್ಯವಾಗಿ ಯಾರೂ ಗಾಬರಿಯಾಗುವ ಅವಶ್ಯಕತೆ ಇಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.






ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ಕೋವಿಡ್ ನಿರ್ವಹಣೆ ಬಗ್ಗೆ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳ ಸಭೆ ನಡೆಸಿ, ಜಿಲ್ಲೆಗಳಲ್ಲಿನ ಪರಿಸ್ಥಿತಿಯ ಬಗ್ಗೆ ವರದಿ ಸಲ್ಲಿಸಲಿದ್ದಾರೆ. ಅದರ ಆಧಾರದ ಮೇಲೆ 2–3 ದಿನಗಳಲ್ಲಿ ತೀರ್ಮಾನಿಸಲಾಗುವುದು ಎಂದರು.

ಗೊಂದಲ ಸೃಷ್ಟಿ: ಪಠ್ಯ ಪರಿಷ್ಕರಣೆ ಸಮಿತಿ ವಿಸರ್ಜನೆ ಮೊದಲ ಬಾರಿ ಆಗುತ್ತಿಲ್ಲ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲದರಲ್ಲೂ ರಾಜಕಾರಣ ಮಾಡುತ್ತಾರೆ. ರಾಜ್ಯದಲ್ಲಿ ಈ ಬಗ್ಗೆ ಹಲವಾರು ಬಾರಿ ಬದಲಾವಣೆಗಳಾಗಿವೆ. ಅವರ ಕಾಲದಲ್ಲಿಯೂ ಹೀಗೆ ಆಗಿದೆ. ಆಗೇನು ಅವರು ಪಠ್ಯ ಪುಸ್ತಕ ಪರಿಷ್ಕರಣೆ ಹಿಂತೆಗೆದುಕೊಂಡರೆ? ಸುಮ್ಮನೆ ಗೊಂದಲ ಸೃಷ್ಟಿ ಮಾಡಬಾರದು. ನಾವು ಈ ಬಗ್ಗೆ ▸ 8ನೇ ಪುಟಕ್ಕೆ

KERC ಅಧ್ಯಕ್ಷರಾಗಿ ನಿವೃತ್ತ ಸಿಎಸ್ ರವಿಕುಮಾರ್ ನೇಮಕ



ಬೆಂಗಳೂರು, ಜೂ. 6–ರಾಜ್ಯದ ನಿವೃತ್ತ ಮುಖ್ಯ ಕಾರ್ಯದರ್ಶಿ ರವಿಕುಮಾರ್ ಅವರನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ)ದ ಅಧ್ಯಕ್ಷರನ್ನಾಗಿ 5 ವರ್ಷದ ಅವಧಿಗೆ ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ರವಿಕುಮಾರ್ ಅವರು, ಮೇ 31ರಂದು ಸೇವೆಯಿಂದ ನಿವೃತ್ತಿ ಹೊಂದಿದ್ದರು.

ಜೂನ್ ಮೂರನೆ ವಾರ ಸಂಪುಟ

ಪುನಾರಚನೆ

- ಹೊಸ ಮುಖಗಳಿಗೆ ಸ್ಥಾನ ಸಿಗುವ ಸಾಧ್ಯತೆ
- ಜಿಲ್ಲೆ, ಜಾತೀವಾರು ಪ್ರಾತಿನಿಧ್ಯಕ್ಕೆ ನಿರ್ಧಾರ



ಬೆಂಗಳೂರು: ಚುನಾವಣಾ ನೀತಿ ಸಂಹಿತೆ ಅಂತ್ಯಗೊಂಡ ಬಳಿಕ ಜೂನ್ ಮೂರನೇ ವಾರ ಬಿಜೆಪಿಯ ಬಹು ನಿರೀಕ್ಷಿತ ಸಂಪುಟ ಪುನಾರಚನೆ ನಡೆಯಲಿದೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ.

ಸಚಿವ ಸ್ಥಾನಕ್ಕೆ ಸಾಕಷ್ಟು ಆಕಾಂಕ್ಷಿಗಳಿದ್ದರೂ, ಜಾತಿ ಹಾಗೂ ಪ್ರಾದೇಶಿಕತೆಗೆ ಹೆಚ್ಚಿನ ಆದ್ಯತೆ ನೀಡಿ ಸಮಸ್ಯೆಗಳ ಪರಿಹರಿಸಲು ಪಕ್ಷವು ನಿರ್ಧರಿಸಿದೆ. ಇದರಂತೆ ಈ ಬಾರಿ ಸಚಿವ ಸಂಪುಟಕ್ಕೆ ಹೊಸ ಮುಖಗಳಿಗೆ ಅವಕಾಶಗಳು ಸಿಗಲಿದೆ ಎಂದು ಮೂಲಗಳು ತಿಳಿಸಿವೆ.



ರವಿಕುಮಾರ್

ಪಕ್ಷದ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ಮಾತನಾಡಿ, ಎಲ್ಲಾ ಸಮಸ್ಯೆಗಳನ್ನು ಸಾಧ್ಯವಾದಷ್ಟು ಪರಿಹರಿಸಲು ಪಕ್ಷವು ಎಲ್ಲಾ ಪ್ರಯತ್ನಗಳನ್ನು ಮಾಡಲಿದೆ ಎಂದು ಹೇಳಿದ್ದಾರೆ. ಜೂನ್ 16–17ರಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರು ರಾಜ್ಯಕ್ಕೆ ಆಗಮಿಸುತ್ತಿದ್ದು, ಈ ವೇಳೆ ಸಚಿವ ಸಂಪುಟ ವಿಸ್ತರಣೆಯಾಗಲಿದೆ. ಇದಕ್ಕಾಗಿ ಈಗಾಗಲೇ ಸಿದ್ಧತೆಗಳೂ ಆರಂಭವಾಗಿದೆ ಎಂದು ಮೂಲಗಳು ತಿಳಿಸಿವೆ. ಜೂನ್ 10 ರಂದು ರಾಜ್ಯಸಭೆ ಚುನಾವಣೆ ಹಾಗೂ ಜೂನ್ 13ರಂದು ರಾಜ್ಯ ವಿಧಾನಪರಿಷತ್‌ಗೆ ಚುನಾವಣೆ ನಡೆಯಲಿದೆ. ಈ ಚುನಾವಣೆಗಳ ಬಳಿಕ ಬಿಬಿಎಂಪಿ, ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಚುನಾವಣೆಗಳು ನಡೆಯಲಿವೆ. ಹೀಗಾಗಿ ಸರಣಿ ಚುನಾವಣೆಗಳು ಇರುವ ಹಿನ್ನೆಲೆಯಲ್ಲಿ ರಾಜ್ಯಸಭೆ ಹಾಗೂ ವಿಧಾನಪರಿಷತ್ ಚುನಾವಣೆ ಪೂರ್ಣಗೊಂಡ ಬಳಿಕ, ಜೂನ್ 15–17ರಂದೇ ಸಂಪುಟ ವಿಸ್ತರಣೆ ಮಾಡಲು ನಾಯಕರು ನಿರ್ಧರಿಸಿದ್ದಾರೆ. ಈ ಸಂದರ್ಭದಲ್ಲಿ ಚುನಾವಣಾ ನೀತಿ ಸಂಹಿತೆ ಕೂಡ ಸಡಿಲಗೊಂಡಿರಲಿದ್ದು, ಈ ಹಿನ್ನೆಲೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ.

> 2023ರ ವಿಧಾನಸಭಾ ಚುನಾವಣೆಗೆ ಮುನ್ನ ಇದು ಕೊನೇ ಸಂಪುಟ ಪುನರ್‌ರಚನೆಯಾಗಿರುವುದರಿಂದ ಪ್ರತಿ ಗುಂಪು, ಸಮುದಾಯ ಮತ್ತು ಆಸಕ್ತಿಗೆ ಹೆಚ್ಚಿನ ಆದ್ಯತೆ ನೀಡಲು ಪಕ್ಷ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

2019ರಿಂದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಹೆಚ್ಚಿನ ಸಂಖ್ಯೆಯ ಜಿಲ್ಲೆಗಳಿಗೆ ಪ್ರಾತಿನಿಧ್ಯಗಳಿಲ್ಲ. ಹೀಗಾಗಿ ಈ ನಿಟ್ಟಿನಲ್ಲಿ ಪಕ್ಷ ನಿರ್ಧಾರ ಕೈಗೊಳ್ಳಲಿದೆ ಎಂದು ರವಿಕುಮಾರ್ ಹೇಳಿದ್ದಾರೆ.

ಬಿ.ವೈ.ವಿಜಯೇಂದ್ರ ಅವರನ್ನು ಸಂಪುಟದಿಂದ ಹೊರಗಿಟ್ಟಿರುವುದು ಪಕ್ಷದ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳಿವೆ ಎನ್ನಲಾಗುತ್ತಿದೆ. ಈಗಾಗಲೇ ಮಾಜಿ ಸಿಎಂ ಯಡಿಯೂರಪ್ಪ ▸ 8ನೇ ಪುಟಕ್ಕೆ

ಮೈಸೂರು-ಚಾ.ನಗರ ಸ್ಥಳೀಯ ಸಂಸ್ಥೆಗಳಿಂದ ಪರಿಷತ್ ಚುನಾವಣೆ-2021

ರಘು ಕೌಟಿಲ್ಯ ತಕರಾರು ಅರ್ಜಿ ವಿಚಾರಣೆ: ಡಾ.ತಿಮ್ಮಯ್ಯ, ಮಂಜೇಗೌಡರಿಗೆ ಸಮನ್ಸ್



ರಘು ಕೌಟಿಲ್ಯ

ಬೆಂಗಳೂರು, ಜೂ.6– ಮೈಸೂರು–ಚಾಮರಾಜನಗರ ಸ್ಥಳೀಯ ಸಂಸ್ಥೆಗಳಿಂದ ನಡೆದ ವಿಧಾನಪರಿಷತ್ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಕೆ ವೇಳೆ ಕಾಂಗ್ರೆಸ್ ಮತ್ತು ಜೆಡಿಎಸ್ ಅಭ್ಯರ್ಥಿಗಳು ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಬಿಜೆಪಿ ಅಭ್ಯರ್ಥಿ ರಘು ಕೌಟಿಲ್ಯ ಸಲ್ಲಿಸಿದ ತಕರಾರು ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿರುವ ಹೈಕೋರ್ಟ್, ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದ ಕಾಂಗ್ರೆಸ್‌ನ ಡಾ.ಡಿ.ತಿಮ್ಮಯ್ಯ ಮತ್ತು ಜೆಡಿಎಸ್‌ನ ಸಿ.ಎನ್.ಮಂಜೇಗೌಡ ಅವರಿಗೆ ಸಮನ್ಸ್ ಜಾರಿ ಮಾಡಿದೆ. ಕಾಂಗ್ರೆಸ್ ಅಭ್ಯರ್ಥಿ ಡಾ.ತಿಮ್ಮಯ್ಯ ಮತ್ತು ಜೆಡಿಎಸ್ ಅಭ್ಯರ್ಥಿ ಸಿ.ಎನ್. ಮಂಜೇಗೌಡ ಅವರು ಚುನಾವಣೆಗೆ ನಾಮಪತ್ರ ಸಲ್ಲಿಸುವ ವೇಳೆ ಘೋಷಿತ ▸ 8ನೇ ಪುಟಕ್ಕೆ

ಅಂತರರಾಷ್ಟ್ರೀಯ ಯೋಗ ದಿನಾಚರಣೆ ನಂತರ ಮೈಸೂರಲ್ಲಿ

ಯೋಗಕ್ಕೆ ವೇಗ!

- 2014ರ ನಂತರ ಯೋಗ ಮಾಡುವವರ ಸಂಖ್ಯೆ ಶೇ.20ರಷ್ಟು ಹೆಚ್ಚಳ
- ಮನೆಮನೆಯಲ್ಲಿ ಯೋಗದ ಮಹತ್ವ ಮನವರಿಕೆ
- ಯೋಗಾಭ್ಯಾಸಕ್ಕೆ ಬರುವ ವಿದೇಶಿಗರ ಸಂಖ್ಯೆಯಲ್ಲೂ ಹೆಚ್ಚಳ



ಮೈಸೂರು,ಜೂ.6(ಎಂಟಿವೈ)– ಅಂತರರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಪ್ರತಿ ವರ್ಷ ಶೇ.20ರಷ್ಟು ಯೋಗಪಟುಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಮನೆ ಮನೆಯಲ್ಲೂ ಯೋಗಾಭ್ಯಾಸ ಮಾಡುವವರ ಸಂಖ್ಯೆ ಹೆಚ್ಚುತ್ತಿರುವ ಅಂಶ ಬೆಳಕಿಗೆ ಬಂದಿದೆ.

ಹಲವು ಆರೋಗ್ಯ ಸಮಸ್ಯೆ ನಿವಾರಣೆಗೆ ಯೋಗವೇ ಮದ್ದಾಗಿರುವ ನಿಟ್ಟಿನಲ್ಲಿ ವಿದೇಶಿಗರು ಯೋಗಾಭ್ಯಾಸಕ್ಕೆ ಮುಗಿಬೀಳುತ್ತಿದ್ದಾರೆ. ಅದರಲ್ಲೂ 2014ರಲ್ಲಿ ವಿಶ್ವಸಂಸ್ಥೆ, ಜೂ.21ರಂದು ಅಂತರರಾಷ್ಟ್ರೀಯ ಯೋಗ ದಿನವೆಂದು ಘೋಷಿಸಿದ ಬಳಿಕ ಜಾಗತಿಕ ಮಟ್ಟದಲ್ಲಿ ಯೋಗಕ್ಕೆ ಹೆಚ್ಚಿನ ಪ್ರಾಮುಖ್ಯತೆ ದೊರೆಯುತ್ತಿದೆ. ವರ್ಷದಿಂದ ವರ್ಷಕ್ಕೆ ಮೈಸೂರು ಸೇರಿದಂತೆ ವಿವಿಧೆಡೆ ಯೋಗ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿರುವುದು ಯೋಗ ಶಿಕ್ಷಣ ಸಂಸ್ಥೆಗಳ ಉತ್ಸಾಹ ಇಮ್ಮಡಿಗೊಳಿಸಿದೆ. 8 ವರ್ಷದ ಹಿಂದೆ ಅಂದಾಜು 10 ಸಾವಿರ ಮಂದಿ ದಿನನಿತ್ಯ ಯೋಗಾಭ್ಯಾಸ ಮಾಡುತ್ತಿದ್ದರು. ಈಗ ಅವರ ಸಂಖ್ಯೆ 75 ಸಾವಿರಕ್ಕೆ ಏರಿಕೆ ಕಂಡಿದೆ.

> ಯೋಗವು ಆರೋಗ್ಯ ಕ್ಷೇತ್ರ ಮಾತ್ರವಲ್ಲದೆ ಕೆಲವರಿಗೆ ವೃತ್ತಿಯಾಗಿ ಮಾರ್ಪಟ್ಟಿದೆ. ಯೋಗ ಶಿಕ್ಷಣದ ತರಬೇತುದಾರರಾಗಿ ಯೋಗ ಕೋರ್ಸ್ ಪಡೆದಿರುವ ಸಾವಿರಕ್ಕೂ ಹೆಚ್ಚು ಮಂದಿ ಯೋಗ ಶಿಕ್ಷಣ ನೀಡುವ ಮೂಲಕ ತಮ್ಮ ಆದಾಯ ಕಂಡುಕೊಂಡಿದ್ದರೆ, ಇನ್ನಷ್ಟು ಮಂದಿ ಯೋಗ ಶಿಕ್ಷಣ ಸಂಸ್ಥೆಗಳಲ್ಲಿ ಯೋಗ ಶಿಕ್ಷಕರಾಗಿ ಸೇವೆ ಸಲ್ಲಿಸುವ ಮೂಲಕ ಯೋಗವನ್ನೇ ವೃತ್ತಿಯಾಗಿಸಿಕೊಂಡಿದ್ದಾರೆ. ಮತ್ತಷ್ಟು ಮಂದಿ ತಮ್ಮ ಮನೆಗಳಲ್ಲೇ ಸುತ್ತಮುತ್ತಲಿನ ಆಸಕ್ತರಿಗೆ ಯೋಗ ಕಲಿಸುವ ಮೂಲಕ ಆದಾಯ ಗಳಿಸುತ್ತಿದ್ದಾರೆ. ಇವೆಲ್ಲಕ್ಕೂ ಅಂತರರಾಷ್ಟ್ರೀಯ ಯೋಗ ದಿನಾಚರಣೆಯೇ ಪ್ರೇರಣೆಯಾಗಿದ್ದು, ಯೋಗಕ್ಕೆ ವೇಗ ನೀಡಿದೆ.

ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಹಾಗೂ ಜಿಎಸ್‌ಎಸ್ ಫೌಂಡೇಷನ್ ಮುಖ್ಯಸ್ಥ ಶ್ರೀಹರಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, 8 ವರ್ಷದ ಹಿಂದೆ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲು ಆರಂಭಿಸಿದಂದಿನಿಂದ ಯೋಗಕ್ಕೆ ವೇಗ ಬಂದಿದೆ. ಯೋಗ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅದರೊಂದಿಗೆ ಔಪಚಾರಿಕ ಯೋಗ ತರಬೇತುದಾರರ ಸಂಖ್ಯೆ ಹೆಚ್ಚಾಗಿದೆ. ಯೋಗಾಭ್ಯಾಸ ಮಾಡುತ್ತಲೇ ಕಲಿತವರು ಇಂದು ಯೋಗ ಶಿಕ್ಷಣ ನೀಡುತ್ತಿದ್ದಾರೆ. ಇದರೊಂದಿಗೆ ಯೋಗ ಕೋರ್ಸ್ ಮಾಡಿರುವವರು ವಿವಿಧ ಯೋಗ ಶಿಕ್ಷಣ ಸಂಸ್ಥೆಗಳಲ್ಲಿ ಯೋಗ ಕಲಿಸುತ್ತಿದ್ದಾರೆ. ಈ ಮೊದಲು 100ರಿಂದ120 ಯೋಗ ತರಬೇತುದಾರರು ಇರುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಬಹುತೇಕ ಶಾಲೆಗಳಲ್ಲೂ ಯೋಗ ಕಲಿಸಲು ಮುಂದಾಗಿದ್ದಾರೆ. ಜಿಲ್ಲೆಯಲ್ಲಿ 700ರಿಂದ 800 ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಯೋಗ ಕಲಿಸಲಾಗುತ್ತಿದೆ. ▸ 8ನೇ ಪುಟಕ್ಕೆ

ಮೈಸೂರು ಮಿತ್ರ

ನಾಳೆ ಚಿತಾಗಾರದಲ್ಲಿ ದ್ರಾವಿಡರು, ಮುಸ್ಲಿಮರು, ಕ್ರೈಸ್ತರ ಸೌಹಾರ್ದ ಕೂಟ

ಮೈಸೂರು, ಜೂ.6(ಪಿಎಂ)–ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಜೂ.8ರಂದು ಚಾಮುಂಡಿಬೆಟ್ಟದ ಪಾದದ ಚಿತಾಗಾರದಲ್ಲಿ ಸಾಮರಸ್ಯಕ್ಕಾಗಿ ದ್ರಾವಿಡರು, ಮುಸ್ಲಿಮರು, ಕ್ರೈಸ್ತರ ಸೌಹಾರ್ದ ಕೂಟ ಹಾಗೂ ಸಹಪಂಕ್ತಿ ಭೋಜನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ತಿಳಿಸಿದರು.


ಕೆ.ಎಸ್.ಶಿವರಾಮು

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾನವನ ಹುಟ್ಟು ಮತ್ತು ಸಾವಿನ ನಡುವೆ ಪರಸ್ಪರ ಸಾಮರಸ್ಯ, ಸಹಬಾಳ್ವೆ ಮುಖ್ಯ. ಅಂತಿಮವಾಗಿ ಎಲ್ಲರೂ ಸ್ಮಶಾನವನ್ನೇ ಸೇರಬೇಕು ಎಂಬ ಸಂದೇಶ ಸಾರಲು ನನ್ನ ಜನ್ಮದಿನದ ಅಂಗವಾಗಿ ವಿವಿಧ ಸಮುದಾಯದ ಮುಖಂಡರು ಈ ಕಾರ್ಯಕ್ರಮ ಆಯೋಜಿಸಿದ್ದಾರೆ ಎಂದರು.

ಎಲ್ಲಾ ಜಾತಿ–ಧರ್ಮದವರೂ ಸಾಮರಸ್ಯದಿಂದ ಬದುಕಬೇಕು ಎಂಬ ಸಂದೇಶವನ್ನು ಈ ಕಾರ್ಯಕ್ರಮ ನೀಡಲಿದೆ. ಅಂದು ಬೆಳಗ್ಗೆ 11.30ಕ್ಕೆ ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಗಾಂಧಿನಗರದ ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಪ್ರಗತಿಪರ ಚಿಂತಕರಾದ ಪ್ರೊ.ಶಬೀರ್ ಮುಸ್ತಾಫ, ಪ್ರೊ.ಕೆ.ಎಸ್.ಭಗವಾನ್, ಪ್ರೊ.ಬಿ.ಪಿ.ಮಹೇಶ್‌ಚಂದ್ರಗುರು, ಪ್ರೊ.ಕಾಳೇಗೌಡ ನಾಗವಾರ, ಮುಸ್ಲಿಂ ಮತ್ತು ಕ್ರೈಸ್ತ ಧರ್ಮ ಗುರುಗಳು, ಹಿಂದುಳಿದ ಸಮುದಾಯಗಳ ಮುಖಂಡರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಹಪಂಕ್ತಿ ಭೋಜನದಲ್ಲಿ ಮಾಂಸಾಹಾರ ಮತ್ತು ಸಸ್ಯಾಹಾರ ಎರಡೂ ಇರಲಿದೆ ಎಂದರು. ಶೋಷಿತರು, ಹಿಂದುಳಿದವರನ್ನು ಈಗ ಹಿಂದೂ ಎಂದು ಹಣೆಪಟ್ಟಿ ಕಟ್ಟಲಾಗಿದೆ. ಇದಕ್ಕೂ ಪೂರ್ವದಲ್ಲಿ ಅವರನ್ನು 'ದ್ರಾವಿಡರು' ಎಂದೇ ಕರೆಯಲಾಗುತ್ತಿತ್ತು. ದ್ರಾವಿಡರು ಎಂದು ಕರೆದುಕೊಳ್ಳಲು ನಮಗೆ ಹೆಮ್ಮೆ ಇದೆ. ನಮ್ಮ ಯುವಪೀಳಿಗೆಗೆ ದ್ರಾವಿಡರ ಇತಿಹಾಸ ಏನೆಂದು ಕುತೂಹಲ ಮೂಡಿಸಬೇಕಿದೆ. ಈ ಕಾರಣಕ್ಕಾಗಿ 'ದ್ರಾವಿಡರು' ಎಂಬ ಪದ ಬಳಕೆ ಮಾಡಿದ್ದೇವೆ. ಸಮಾನತೆ, ಸಾಮರಸ್ಯ, ಸಹಬಾಳ್ವೆ ಬಗ್ಗೆ ನಂಬಿಕೆ ಹೊಂದಿರುವ ಮೇಲ್ವರ್ಗದವರೂ ಸೇರಿದಂತೆ ಯಾವುದೇ ಸಮುದಾಯದವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದು ಎಂದು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ಜಿಲ್ಲಾ ಉಪ್ಪಾರರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಮುಸ್ಲಿಂ ಸಮುದಾಯದ ಮುಖಂಡ ಕಲೀಂ, ಕ್ರೈಸ್ತ ಸಮುದಾಯದ ಮುಖಂಡ ಅಭಿಲಾಷ್, ವೇದಿಕೆ ಮುಖಂಡ ಲೋಕೇಶ್‌ಕುಮಾರ್ ಮಾದಾಪುರ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.


ಮೈಸೂರಿನ ಶ್ರೀ ಲಕ್ಷ್ಮೀಕಾಂತ ದೇವಸ್ಥಾನದಲ್ಲಿ ಹೆಬ್ಬಾಳು ಸಾಮ್ರಾಜ್ಯೋತ್ಸವದ ಲೋಗೋವನ್ನು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಪೀಠಾಧೀಶರಾದ ಶ್ರೀ ಸೋಮನಾಥೇಶ್ವರ ಸ್ವಾಮೀಜಿ ಭಾನುವಾರ ಲೋಕಾರ್ಪಣೆಗೊಳಿಸಿದರು. ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ ಮೈಸೂರು ಕೈಗಾರಿಕಾ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್‌ಕುಮಾರ್ ಜೈನ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಉದ್ಯಮಿಗಳಾದ ಎನ್.ಲಿಂಗರಾಜೇಗೌಡ, ನಾರಾಯಣ್, ಬೆಳಗೊಳ ಸುಬ್ರಹ್ಮಣ್ಯ, ಪ್ರೊ. ಕೆ.ಪಿ.ಬಸವೇಗೌಡ, ಮಾ.ವೆಂಕಟೇಶ ಇನ್ನಿತರರು ಉಪಸ್ಥಿತರಿದ್ದರು.

ರೈಲ್ವೆ ಇಲಾಖೆಯಲ್ಲಿ ಕೆಲಸದ ಆಮಿಷ: 3.10 ಲಕ್ಷ ವಂಚನೆ

ಮೈಸೂರು, ಜೂ.6– ರೈಲ್ವೆ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಚಾಲಕನೊಬ್ಬನಿಗೆ 3.10 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಸಿ. ಭರತ್‌ಕುಮಾರ್ (26) ಎಂಬಾತನಿಗೆ ವರುಣ್ ಎಂದು ಪರಿಚಯಿಸಿಕೊಂಡು 2 ಮೊಬೈಲ್ ಸಂಖ್ಯೆಗಳಿಂದ ಕರೆ ಮಾಡಿದ ವಂಚಕ, ತಾನು ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವುದಾಗಿಯೂ ಭರತ್‌ಕುಮಾರ್‌ಗೂ ಕೂಡ ಕೆಲಸ ಕೊಡಿಸುವುದಾಗಿ ನಂಬಿಸಿದ್ದಾನೆ. ಹಲವಾರು ಕಾರಣಗಳನ್ನು ಹೇಳಿ ತನ್ನ ಖಾತೆಗೆ ಹಂತಹಂತವಾಗಿ 3.10 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿದ್ದಾನೆ ಎಂದು ಮೈಸೂರು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಮೈಸೂರು ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ನಾಗರಿಕ ವೇದಿಕೆಯ ಪೂರ್ಣಪ್ರಜ್ಞಾ ವಿದ್ಯಾ ಕೇಂದ್ರ ಶಾಲೆ ವತಿಯಿಂದ 47ನೇ ವಾರ್ಡಿನ ಸುಮಸೋಪಾನ ಉದ್ಯಾನವನದಲ್ಲಿ ವಿಶ್ವ ಪರಿಸರ ದಿನವನ್ನು ಶಾಲಾ ಮಕ್ಕಳಿಗೆ ಪರಿಸರದ ಬಗ್ಗೆ ಜಾಗೃತಿ ಮೂಡಿಸಿ, ಸಸಿ ನೆಟ್ಟು ಆಚರಿಸಲಾಯಿತು. ಶಾಲಾ ಸಮಿತಿ ಅಧ್ಯಕ್ಷ ಲಯನ್ ಜೆ.ಲೋಕೇಶ್, ಕಾರ್ಯದರ್ಶಿ ಕುಳ್ಳೇಗೌಡ, ಮುಖ್ಯೋಪಾಧ್ಯಾಯಿನಿ ಶ್ಯಾಮಲಾದೇವಿ, ಶಿಕ್ಷಕಿಯರಾದ ಮಾಲತಿ, ಯಮುನಾ ರಾಣಿ, ಸಂಧ್ಯಾ, ರಾಜೀವ್ ಸ್ನೇಹ ಬಳಗದ ಕುಮಾರ್ ಹಾಗೂ ವಿದ್ಯಾರ್ಥಿಗಳು ಇದ್ದರು.

ವಿಶೇಷಚೇತನರ ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.6– ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ವತಿಯಿಂದ 2022–23ನೇ ಸಾಲಿಗೆ ಸಂಬಂಧಿಸಿದಂತೆ ಮೈಸೂರಿನಲ್ಲಿ ವಿಶೇಷಚೇತನರಿಗೆ ಡಿಪ್ಲೊಮಾ ಮಟ್ಟದಲ್ಲಿ ತಾಂತ್ರಿಕ ಶಿಕ್ಷಣ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಜಿಲ್ಲೆಯ ವ್ಯಾಪ್ತಿಯಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ವಿಶೇಷಚೇತನ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಠ ಶೇ.35 ಅಂಕಗಳೊಂದಿಗೆ ತೇರ್ಗಡೆ ಆಗಿರಬೇಕು. ಮೂಳೆ ಮತ್ತು ಕೀಲು ಅಂಗವಿಕಲತೆ ಶೇ.40 ಮೇಲ್ಪಟ್ಟು, ಕಿವುಡು ಮತ್ತು ಮೂಗು ಅಂಗವಿಕಲತೆ 60 ಡಿಬಿ ಮತ್ತು ಮೇಲ್ಪಟ್ಟು ಮತ್ತು ಪೂರ್ಣ ಅಂಧತ್ವವಿರುವ ವಿದ್ಯಾರ್ಥಿಗಳು ಜೂ.20ರೊಳಗೆ ಕಚೇರಿಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ www.jsspda.org ವೆಬ್‌ಸೈಟನ್ನು ಅಥವಾ ಇ–ಮೇಲ್ jsspda@gmail.com ಅಥವಾ ಮೊ.ಸಂ 9686677236 ಸಂಪರ್ಕಿಸಿ.

ನಿಧನ

ಪ್ರೊ. ಇ.ಜೆ. ಏಕಾಂಬರಮ್



ಮೈಸೂರು, ಜೂ. 6– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಇಂಗ್ಲಿಷ್ ಅಧ್ಯಯನ ವಿಭಾಗದ ನಿವೃತ್ತ ಮುಖ್ಯಸ್ಥ ಮತ್ತು ಗಂಗೋತ್ರಿ ಬಡಾವಣೆ ನಿವಾಸಿ ಪ್ರೊ. ಇ.ಜೆ. ಏಕಾಂಬರಮ್ (86) ಭಾನುವಾರ ನಿಧನರಾದರು. ಮೃತರು ಪತ್ನಿ ಜ್ಯೋತಿ ಏಕಾಂಬರಮ್, ಪುತ್ರಿ ಡಾ. ಅನಿತಾ, ಅಳಿಯ ಕಣ್ಣನ್, ಪುತ್ರ ಆನಂದ್, ಸೊಸೆ ಅನಿತಾ, ಮೊಮ್ಮಕ್ಕಳಾದ ಶ್ವೇತಾ, ದಿವ್ಯ ಮತ್ತು ಆದಿತ್ಯ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅವರ ಪುತ್ರಿ ಅಮೇರಿಕಾದಿಂದ ಬಂದ ಬಳಿಕ ಅಂತ್ಯಕ್ರಿಯೆ ನಾಳೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮ್ಯಾಥ್ಯೂ ಜಾರ್ಜ್



ಮೈಸೂರಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ಎಸ್‌ಬಿಎಂ), ಕ್ರಾಫರ್ಡ್ ಹಾಲ್ ಶಾಖೆಯ ನಿವೃತ್ತ ಅಧಿಕಾರಿ ಮ್ಯಾಥ್ಯೂ ಜಾರ್ಜ್ (79) ಸೋಮವಾರ ಬೆಳಗ್ಗೆ ಕೇರಳದ ತ್ರಿಶೂರ್‌ನಲ್ಲಿ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ತ್ರಿಶೂರ್‌ನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭಾನುವಾರ ರಾತ್ರಿ ಭಾರೀ ಗಾಳಿ ಮಳೆಗೆ ಮೈಸೂರಿನ ಹಲವೆಡೆ ಧರೆಗುರುಳಿದ ಮರಗಳು; ಕಾರಿಗೆ ಹಾನಿ





ಮೈಸೂರು, ಜೂ.6(ಆರ್‌ಕೆಬಿ)– ಭಾನುವಾರ ರಾತ್ರಿ ಭಾರೀ ಗಾಳಿ ಸಹಿತ ಬಿದ್ದ ಮಳೆಗೆ ಮೈಸೂರಿನ ಹಲವೆಡೆ ಮರಗಳು ಧರೆಗುರುಳಿವೆ. ಹಲವೆಡೆ ರಂಬೆ ಕೊಂಬೆಗಳು ಕಡಿದು ಬಿದ್ದಿವೆ. ಮರ ಬಿದ್ದ ಪರಿಣಾಮ ಕೆಲವು ವಿದ್ಯುತ್ ಕಂಬಗಳಿಗೂ ಹಾನಿಯಾಗಿದೆ.

ಮೈಸೂರಿನ ಗೋಕುಲಂ ಟ್ಯಾಂಕ್ ಬಳಿ ದೊಡ್ಡಮರವೊಂದು ಬಿದ್ದು, ಕಾರು ಜಖಂಗೊಂಡಿದೆ. ಕೆಲವೆಡೆ ಮರದ ಕೊಂಬೆಗಳು ರಸ್ತೆಗಳ ಮೇಲೆ ಬಿದ್ದು, ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು. ನಂತರ ನಗರಪಾಲಿಕೆಯ ಅಭಯ ತಂಡಗಳು ಮರಗಳನ್ನು ತೆರವುಗೊಳಿಸಿವೆ.

ವಿದ್ಯಾರಣ್ಯಪುರಂ ಬಳಿ ಮರವೊಂದು ಬುಡಸಹಿತ ಧರೆಗುರುಳಿದೆ. ಅಲ್ಲಲ್ಲಿ ಸಣ್ಣಪುಟ್ಟ ರಂಬೆ ಕೊಂಬೆಗಳು ಕಡಿದು ಬಿದ್ದಿವೆ ನಂತರ ಅಭಯ ಒಂದನೇ ತಂಡದ ಶ್ರೇಯಸ್ ಮತ್ತು ಸಿಬ್ಬಂದಿ ತೆರವುಗೊಳಿಸಿದರು. ರಾಜೀವ್‌ನಗರ, ಎನ್.ಆರ್.ಪೊಲೀಸ್ ಸ್ಟೇಷನ್, ಮೃಗಾಲಯದ ಬಳಿ ಒಂದೊಂದು ಚಿಕ್ಕಪುಟ್ಟ ರಂಬೆ–ಕೊಂಬೆಗಳು ಗಾಳಿಯ ಹೊಡೆತಕ್ಕೆ ಸಿಲುಕಿ ಕಡಿದು ಬಿದ್ದಿವೆ. ನಂತರ ಮೈಸೂರು ಮಹಾನಗರಪಾಲಿಕೆಯ ಅಭಯ ಮೂರನೇ ತಂಡದ ಮೊಹಮ್ಮದ್ ರಿಯಾಜ್ ಮತ್ತು ಸಿಬ್ಬಂದಿ ತೆರವುಗೊಳಿಸಿದರು. ಗುಡುಗು–ಮಿಂಚಿನ ಅಬ್ಬರದ ನಡುವೆ ಭಾರೀ ಗಾಳಿ ಮಳೆಗೆ ಮೈಸೂರು ನಗರದ ಹಲವು ರಸ್ತೆಗಳು ಜಲಾವೃತಗೊಂಡಿದ್ದವು. ಒಳಚರಂಡಿಗಳು, ಮ್ಯಾನ್‌ಹೋಲ್‌ಗಳು ಉಕ್ಕಿ ಹರಿದವು. ಹೀಗಾಗಿ ರಸ್ತೆ ತುಂಬ ಒಂದು ಅಡಿಗೂ ಹೆಚ್ಚಿನ ನೀರು ಹರಿಯಿತು. ತಗ್ಗು ಪ್ರದೇಶದ ಕೆಲವು ಮನೆಗಳಿಗೂ ನೀರು ನುಗ್ಗಿರುವುದಾಗಿ ಹಲವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ವಕೀಲ ವೃತ್ತಿಗೆ ಸಂಸದರಿಂದ ಅಪಮಾನ: ಕ್ರಮಕ್ಕೆ ಆಗ್ರಹಿಸಿ ವಕೀಲರಿಂದ ವಕೀಲರ ಸಂಘಕ್ಕೆ ಮನವಿ

ಮೈಸೂರು, ಜೂ.6(ಆರ್‌ಕೆಬಿ)– ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರು ವಕೀಲರ ವೃತ್ತಿಗೆ ಅವಮಾನವಾಗುವಂತಹ ಮಾತುಗಳನ್ನು ಆಡುವ ಮೂಲಕ ವಕೀಲ ವೃಂದಕ್ಕೆ ಅಪಮಾನ ಮಾಡಿದ್ದಾರೆ. ಅವರ ಹೇಳಿಕೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಮೈಸೂರಿನ ಹಲವು ವಕೀಲರು ಮೈಸೂರು ವಕೀಲರ ಸಂಘಕ್ಕೆ ಮನವಿ ಮಾಡಿದ್ದಾರೆ.



ಬಿಎ., ಎಲ್‌ಎಲ್‌ಬಿ ಮಾಡಿಕೊಂಡು ತಾಲೂಕು ನ್ಯಾಯಾಲಯದಲ್ಲಿ ವಕೀಲಗಿರಿ (ಪ್ರಾಕ್ಟೀಸ್) ಮಾಡಿಕೊಂಡಿದ್ದ ಸಿದ್ದರಾಮಯ್ಯಗೆ ದೇಶದ ಆರ್ಥಿಕತೆ ಬಗ್ಗೆ ಹೇಗೆ ಗೊತ್ತಾಗಬೇಕು. ತಾಲೂಕು ಕೋರ್ಟ್‌ನಲ್ಲಿ ಪ್ರಾಕ್ಟೀಸ್ ಮಾಡ್ತಿದ್ದವರಿಗೆ ದೇಶದ ಎಕಾನಮಿ ಬಗ್ಗೆ ಏನ್ರೀ ಗೊತ್ತು? ಎಂದು ಪ್ರಶ್ನಿಸುವ ಮೂಲಕ ವಕೀಲರ ವೃತ್ತಿಗೆ ಅವಮಾನವಾಗುವಂತಹ ಮಾತುಗಳನ್ನು ಸಂಸದ ಪ್ರತಾಪ್‌ಸಿಂಹ ಆಡಿದ್ದಾರೆ ಎಂದು ಮನವಿ ಪತ್ರದಲ್ಲಿ ದೂರಿದ್ದಾರೆ.

ಅತೀ ದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲೂ ಆಡಳಿತ ಮತ್ತು ವಿರೋಧ ಪಕ್ಷಗಳ ರಾಜಕೀಯ ಕೆಸರೆರಚಾಟದಲ್ಲಿ ವಕೀಲ ವೃತ್ತಿಯನ್ನು ತೇಜೋವಧೆ ಮಾಡುವಂತಹ ಮಾತುಗಳನ್ನು ಅತ್ಯಂತ ಜವಾಬ್ದಾರಿಯುತ ಸ್ಥಾನದಲ್ಲಿರುವ ಸಂಸದರು ಆಡಿರುವುದು ಅತ್ಯಂತ ಖಂಡನೀಯ. ಇದು ವಕೀಲ ವೃಂದದವರಿಗೆ ಮಾಡಿದ ಅವಮಾನವಾಗಿದೆ. ಇದು ವಕೀಲಿ ವೃತ್ತಿ ಮಾಡುವ ಪ್ರತಿಯೊಬ್ಬರೂ ಖಂಡಿಸಬೇಕಾದ ಜವಾಬ್ದಾರಿ ಆಗಿದೆ. ಹಾಗಾಗಿ ಸಂಸದ ಪ್ರತಾಪ್‌ಸಿಂಹ ಹೇಳಿಕೆ ವಿರುದ್ಧ ಮುಂದಿನ ಕ್ರಮ ವಹಿಸು ವಂತೆ ಅವರು ಒತ್ತಾಯಿಸಿದ್ದಾರೆ.

ಮೈಸೂರು ರೈಲ್ವೆ ಆಸ್ಪತ್ರೆಯಲ್ಲಿ 75 ಗಿಡ ನೆಟ್ಟು ಪರಿಸರ ದಿನಾಚರಣೆ

ಮೈಸೂರು,ಜೂ.6(ಪಿಎಂ)–ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ವತಿಯಿಂದ ಸೋಮವಾರ ಮೈಸೂರಿನ ರೈಲ್ವೆ ಆಸ್ಪತ್ರೆ ಆವರಣದಲ್ಲಿ ವಿವಿಧ ಜಾತಿಯ 75 ಗಿಡಗಳನ್ನು ನೆಡಲಾಯಿತು.


ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್ವಾಲ್, ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಗಿಡವೊಂದನ್ನು ನೆಟ್ಟು ನೀರೆರೆಯುವ ಮೂಲಕ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್ವಾಲ್, ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಪರಿಸರ ಸಂರಕ್ಷಣೆ ಕುರಿತಂತೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅಧಿಕಾರಿಗಳು, ಸಿಬ್ಬಂದಿ, ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ವಿಭಾಗೀಯ ರೈಲ್ವೆ ವ್ಯವಸ್ಥಾಪಕರು ಪ್ರತಿಜ್ಞಾವಿಧಿ ಬೋಧಿಸಿದರು.

ಇದೇ ವೇಳೆ ಮಾತನಾಡಿದ ಅವರು, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಅವುಗಳ ಸುಸ್ಥಿರ ನಿರ್ವಹಣೆ ನಮ್ಮ ಹೊಣೆಯಾಗಬೇಕು. ಜೊತೆಗೆ ಈ ಬಗ್ಗೆ ನಮ್ಮ ಸುತ್ತಮುತ್ತಲಿನ ಜನತೆಗೂ ಅರಿವು ಮೂಡಿಸಬೇಕು. ಹಸಿರು ಮತ್ತು ಸ್ವಚ್ಛತೆಯತ್ತ ನಮ್ಮ ಜೀವನಶೈಲಿ ಮುಖ ಮಾಡಬೇಕು. ಆ ಮೂಲಕ ಪ್ರಕೃತಿಯೊಂದಿಗೆ ಸಹಜೀವನ ನಡೆಸುವುದನ್ನು ನಾವು ರೂಢಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಅಲ್ಲದೆ, ಏಕಕಾಲದಲ್ಲಿ ವಿಭಾಗದ ವಿವಿಧೆಡೆ ರೈಲ್ವೆ ಆವರಣಗಳಲ್ಲಿ 275 ಸಸಿಗಳನ್ನು ನೆಡಲಾಯಿತು. ಜೊತೆಗೆ ಮೈಸೂರು ಮತ್ತು ದಾವಣಗೆರೆ ರೈಲ್ವೆ ನಿಲ್ದಾಣಗಳನ್ನು ಭಾನುವಾರ ರಾತ್ರಿ ಹಸಿರು ಮತ್ತು ನೀಲಿ ದೀಪಗಳಿಂದ ಅಲಂಕರಿಸಿ, ಪರಿಸರ ಪ್ರಜ್ಞೆಯ ಸಂದೇಶ ಸಾರಲಾಯಿತು. ಮೈಸೂರು ರೈಲ್ವೆ ಆಸ್ಪತ್ರೆ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ದೇವಸಹಾಯಂ ಅಕಾಸಿ, ಬುಡತಿ ಶ್ರೀನಿವಾಸುಲು, ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಡಾ.ಮಂಜುನಾಥ್ ಕನಮಡಿ ಮತ್ತಿತರರು ಹಾಜರಿದ್ದರು.

ಕೈಗಾರಿಕಾ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ

ಮೈಸೂರು, ಜೂ.6– ಮೈಸೂರಿನ ದಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್‌ನಲ್ಲಿ ಆಯೋಜಿಸಿದ್ದ ಕೈಗಾರಿಕಾ ಪ್ರಶಸ್ತಿ ಪುರಸ್ಕೃತರ ಅಭಿನಂದನಾ ಸಮಾರಂಭದಲ್ಲಿ ಶಾಸಕ ಎಲ್.ನಾಗೇಂದ್ರ ಪ್ರಶಸ್ತಿ ಪುರಸ್ಕೃತರನ್ನು ಸನ್ಮಾನಿಸಿದರು.



ಮೈಸೂರು ಕೈಗಾರಿಕೆಗಳ ಸಂಘ, ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘ, ಹೆಬ್ಬಾಳು ಕೈಗಾರಿಕಾ ವಸಾಹತು ಉತ್ಪಾದಕರ ಸಂಘ, ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಪರಿಷತ್ ವತಿಯಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಪ್ರಶಸ್ತಿ ಪುರಸ್ಕೃತರಾದ ನೇಚರ್ ಫ್ರೆಶ್ ಮತ್ತು ನಮನ್ ಸಂಸ್ಥಾಪಕ ಪಾಲುದಾರರು, ವುಮೆನ್ ಟ್ರಾನ್ಸ್ ಫಾರ್ಮಿಂಗ್ ಇಂಡಿಯಾ ಅವಾರ್ಡ್ ನೀತಿ ಆಯೋಗದ ಶ್ರೀಮತಿ ಛಾಯಾ ನಂಜಪ್ಪ, ಎಜಿಟೆಲ್ ಕ್ಯಾಡ್ ಇಂಜಿನಿಯರಿಂಗ್ ಸಿಇಓ ಎನ್. ಸತೀಶ್ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಐಎಂಎಸ್ ಫೌಂಡೇಷನ್ ಅಧ್ಯಕ್ಷ ಹೆಚ್.ವಿ.ಎಸ್.ಕೃಷ್ಣ, ಮೈಸೂರು ವಲಯ ಲಘು ಉದ್ಯೋಗ ಭಾರತಿ ಅಧ್ಯಕ್ಷ ಡಾ.ಎಂ.ಮಹೇಶ್ ಶೆಣೈ, ಎಂಡಿಎಸ್‌ಎಸ್‌ಎ ಅಧ್ಯಕ್ಷ ಎ.ಎಸ್. ಸತೀಶ್, ಹಿಮಾ ಅಧ್ಯಕ್ಷ ಜಯಂತ್, ಎಂಎಸ್‌ಎಂಇಸಿ ಅಧ್ಯಕ್ಷ ರವಿಕೋಟಿ ಮತ್ತಿತರರು ಉಪಸ್ಥಿತರಿದ್ದರು.

ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಮಾತನಾಡುವವರು ದಡ್ಡರಾಗುತ್ತಾರೆ

ಮೈಸೂರು,ಜೂ 6(ಜಿಎ)–ಸಿದ್ದರಾಮಯ್ಯ ಅವರ ವಿರುದ್ಧ ಮಾತನಾಡಿದರೆ ದೊಡ್ಡವರಾಗುವುದಿಲ್ಲ ದಡ್ಡರಾಗುತ್ತಾರೆ ಎಂದು ಸಂಸದ ಪ್ರತಾಪ್ ಸಿಂಹ ವಿರುದ್ಧ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ವಾಗ್ದಾಳಿ ನಡೆಸಿದರು.



ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ವಿರುದ್ಧ ಮಾತನಾಡಿದರೆ ಮಾತನಾಡಿದರೆ ದೊಡ್ಡವರು ಆಗುವುದಿಲ್ಲ, ದಡ್ಡ ಆಗ್ತಿರಾ ಎಂದ ಅವರು, ಸಿದ್ದರಾಮಯ್ಯ 14 ಜನಪ್ರಿಯ ಬಜೆಟ್ ಮಂಡನೆ ಮಾಡಿರುವುದು ಎಲ್ಲರಿಗೂ ಗೊತ್ತಿದೆ. ತಾಲೂಕು ನ್ಯಾಯಾಲಯದಲ್ಲಿ ಇರುವವರು ಪರಿಪೂರ್ಣ ವಕೀಲರಲ್ಲವೇ? ವಕೀಲರಿಗೆ ಅವಮಾನ ಮಾಡಿದ್ದಿರಿ. ರಾಜ್ಯ ಹಾಗೂ ಜಿಲ್ಲಾ ವಕೀಲರ ಸಂಘ ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಕಿಡಿಕಾರಿದರು.

'ತಾಲೂಕು ಕೋರ್ಟ್‌ನಲ್ಲಿ ಸಿದ್ದರಾಮಯ್ಯ ಪ್ರಾಕ್ಟಿಸ್ ಮಾಡ್ತಾ ಇದ್ದರು, ಎಕಾನಮಿ ಏನ್ ಗೊತ್ತು' ಅಂತ ಪ್ರತಾಪಸಿಂಹ ಹೇಳಿದ್ದಾರೆ. ತಾಲೂಕು ಕೇಂದ್ರದಲ್ಲಿ ಪ್ರಾಕ್ಟಿಸ್ ಮಾಡಿರುವವರು ಲಾಯರ್ಸ್ ಅಲ್ವ, ತಾಲೂಕು ಕೇಂದ್ರದಲ್ಲಿ ಜಡ್ಜ್ ಆಗಿರುವವರು ಜಡ್ಜ್ ಅಲ್ವ, ಕೇಂದ್ರ ಸರ್ಕಾರವೇ ಎಂಬಿಬಿಎಸ್ ಮುಗಿಸಿದವರು ಹಳ್ಳಿಗೆ ಹೋಗಿ ಸೇವೆ ಮಾಡಿ ಅಂತ ಕಳುಹಿಸುತ್ತಿಲ್ಲವೇ? ಅವರೆಲ್ಲ ವೈದ್ಯರಲ್ಲವೆ? ಎಂದು ಪ್ರಶ್ನಿಸಿದರು.

ನರ್ಮ್ 1800 ಕೋಟಿ, 300 ಕೋಟಿ ಏರ್‌ಪೋರ್ಟ್, ಉಂಡುವಾಡಿ 400 ಕೋಟಿ, ಕಬಿನಿ ಕುಡಿಯುವ ನೀರಿನ ಯೋಜನೆ 200 ಕೋಟಿ, ಮೈಸೂರು–ಬೆಂಗಳೂರು ದಶಪಥದ ರಸ್ತೆಯೂ ಕಾಂಗ್ರೆಸ್ ಕೊಡುಗೆ ಆಗಿದೆ. 2015ರಂದು ಅನುಮೋದನೆ ದೊರೆತ ಯೋಜನೆ ಇದಾಗಿದೆ. ನಿಮ್ಮ ಕೊಡುಗೆ ಏನು? ಎಂದು ಪ್ರಶ್ನಿಸಿದರು. ಕುಮಾರಸ್ವಾಮಿ ಅವರು ಮಾನಸಿಕ ಸ್ಥಿಮಿತ ಕಳೆದುಕೊಂಡು ಮಾತನಾಡುತ್ತಿದ್ದಾರೆ. ಎಚ್.ಡಿ.ದೇವೇಗೌಡರ ಆಯ್ಕೆ ವೇಳೆ ಏನು ಹೇಳಿದ್ದಿರಿ ಎಂದು ತಿಳಿಸಿ. ರಾಜ್ಯಸಭಾ ಚುನಾವಣೆ ಯಲ್ಲಿ ಮನ್ಸೂರು ಖಾನ್ ಸೋತರೆ ಅದಕ್ಕೆ ನೀವೇ ಕಾರಣ ಆಗುತ್ತೀರಿ. ಜಾತ್ಯತೀತ ಪದ ಬಳಸುತ್ತಿರುವ ನೀವೂ ಅದಕ್ಕೆ ಅನುಗುಣವಾಗಿ ನಿಮ್ಮ ಅಭ್ಯರ್ಥಿ ದೂರ ಇಟ್ಟು ನಮ್ಮ ಪಕ್ಷದ ಅಭ್ಯರ್ಥಿ ಪರವಾಗಿ ಕೆಲಸ ಮಾಡಿ ಎಂದು ಲಕ್ಷ್ಮಣ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ ಇನ್ನಿತರರು ಉಪಸ್ಥಿತರಿದ್ದರು.


ಮೈಸೂರಿನ ಹೆಬ್ಬಾಳ ರಿಂಗ್ ರಸ್ತೆಯಲ್ಲಿರುವ ಬಸವ ಮಾರ್ಗ ಫೌಂಡೇಷನ್ ಕಚೇರಿ ಆವರಣದಲ್ಲಿ ಏರ್ಪಡಿಸಿದ್ದ ಮದ್ಯವರ್ಜನ ಶಿಬಿರವನ್ನು ನರರೋಗ ತಜ್ಞ ಅನಿಲ್ ಸಾಂಗ್ಲಿ ಉದ್ಘಾಟಿಸಿದರು. ಈ ವೇಳೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಮಾಲಿನಿ, ಫೌಂಡೇಷನ್ ಅಧ್ಯಕ್ಷ ಎಸ್.ಬಸವರಾಜು ಇನ್ನಿತರರು ಉಪಸ್ಥಿತರಿದ್ದರು.

ಮರು ಎಣಿಕೆಯಲ್ಲಿ 625 ಅಂಕ ಪಡೆದ ಇಂಚರ ರಾಜ್ಯಕ್ಕೆ ಪ್ರಥಮ



ಮೈಸೂರು, ಜೂ.6– 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶದ ಮರು ಎಣಿಕೆಯಲ್ಲಿ ಸದ್ವಿದ್ಯಾ ಶಾಲೆಯ ವಿದ್ಯಾರ್ಥಿನಿ ಎಂ.ಇಂಚರ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಈ ಮೊದಲು ಈಕೆ ತೃತೀಯ ಭಾಷೆ ಕನ್ನಡದಲ್ಲಿ 100ಕ್ಕೆ 96 ಅಂಕ ಪಡೆದು ಒಟ್ಟಾರೆ 625ಕ್ಕೆ 621 ಅಂಕ ಪಡೆದಿದ್ದರು. ಆದರೆ, ಕನ್ನಡ ಭಾಷೆ 100ಕ್ಕೆ 100 ಪಡೆಯುವ ದೃಢ ನಂಬಿಕೆ ಹಿನ್ನೆಲೆಯಲ್ಲಿ ಮರು ಎಣಿಕೆ ಮೊರೆ ಹೋಗಿದ್ದರು. ತದನಂತರ ನಡೆದ ಮರು ಎಣಿಕೆಯಲ್ಲಿ ಕನ್ನಡದಲ್ಲಿ ಶೇ.100 ರಷ್ಟು ಅಂಕ ಪಡೆಯುವ ಮೂಲಕ 625ಕ್ಕೆ 625 ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಈಕೆ ಶಿಕ್ಷಕ ದಂಪತಿ ಎಸ್.ಮಹದೇವಸ್ವಾಮಿ ಮತ್ತು ಎಸ್.ಮಂಜುಳ ಅವರ ಪುತ್ರಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.06.2022 ಮಂಗಳವಾರ, ಮಳೆ ನಕ್ಷತ್ರ : ರೋಹಿಣಿ 25.05.2022 ರಿಂದ 7.06.2022 ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ ತಿಥಿ: ಅಷ್ಟಮೀ, ನಕ್ಷತ್ರ : ಪೂಷ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್** : 80ನೇ ಜಯಂತ್ಯುತ್ಸವ, ಬೆಳಗ್ಗೆ 9ಕ್ಕೆ ರುದ್ರಹೋಮ, ಸ್ಥಳ: ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ** : ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮದಿನೋತ್ಸವ, ಲಕ್ಷ ಶ್ರೀಸೂಕ್ತ ಮಹಾಯಾಗ ಮತ್ತು ಕೋಟಿ ದತ್ತ ಹೋಮ, ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 23ನೇ ಬ್ರಹ್ಮೋತ್ಸವ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ** : ವಿಮಾನಗೋಪುರ ಮತ್ತು ರಾಜಗೋಪುರ ಮಹಾ ಕುಂಭಾಭಿಷೇಕ ಮಹೋತ್ಸವ, ಮೂಲದೇವತಾ ಪ್ರಾರ್ಥನೆ, ಶ್ರೀ ಮಹಾಗಣಪತಿ ಪೂಜಾ, ಆಚಾರ್ಯದಿ ಋತ್ವಗ್ವರಣ, ಪುಣ್ಯಾಹವಾಚನ, ಪಂಚಗವ್ಯಾ ಸಾದನ ವಾಸ್ತುಪೂಜಾ, ವಾಸ್ತುಹೋಮ, ಬಲಿಹರಣ, ಪರ್ಯಗ್ನಿಕರಣ, ಅಂಕುರಾರ್ಪಣ, ಸ್ಥಳ: ದೇವಸ್ಥಾನ, ವಿಶ್ವೇಶ್ವರನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ–ಮಾಲಿಕೆ, ಲೇಖನ ಪ್ರಸ್ತುತಿ– ಡಾ. ಎ.ಎಸ್.ಚಂದ್ರಶೇಖರ್, 6.35 ಮತ್ತು 5.00 ಅಕ್ಷರ ಮೈಸೂರು ಅನ್ನದ ಸೂರು –ಮೈಸೂರಿನ ಪರಂಪರೆಯಲ್ಲಿ ಅನ್ನ ಅಕ್ಷರಗಳ ನೆನಪು, ಪ್ರಸ್ತುತಿ– ಡಾ. ವಿ. ರಂಗನಾಥ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಅಂಬಯ್ಯ ನುಲಿ, ಎಂ. ರಾಘವೇಂದ್ರ ಮತ್ತು ಟಿ.ಎಸ್. ಸ್ನೇಹಾ, ವ್ಯಾಖ್ಯಾನ– ಡಾ.ಹೆಚ್.ಎನ್. ಮಂಜುರಾಜ್, 7.15 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್, 9.00 ವೃತ್ತಿ ಮಾರ್ಗದರ್ಶನ–ಯೋಗ ಮತ್ತು ಪ್ರಕೃತಿ ಚಿಕಿತ್ಸೆ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಬಿ.ಸಿ. ನಟರಾಜ್ ಅವರೊಡನೆ ಸಂದರ್ಶನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 11.15 ಯೋಗದತ್ತ ಜಗತ್ತು–ವಿಶೇಷ ಸರಣಿ ಯೋಗಶಿಕ್ಷಕಿ ಪ್ರಭಾ ಸತೀಶ್ ಅವರೊಂದಿಗೆ ಸಂದರ್ಶನ–ದಿವಾಕರ ಹೆಗಡೆ **ಮಧ್ಯಾಹ್ನ:** 12.30 ದೇವರನಾಮ–ಡಾ.ಎಂ.ಎಲ್.ವಸಂತಕುಮಾರಿ, ರಘು ಹೆಗಡೆ, 12.45 ಅಂತರ್ಜಲ ಶೋಧ, ಪರಂಪರೆ–ವರ್ತಮಾನ ಕುರಿತು ಶ್ರೀಧರ ಹೆಗಡೆ ಅವರೊಡನೆ ಸಂದರ್ಶನ. ಸಂದರ್ಶಕರು– ದಿವಾಕರ ಹೆಗಡೆ, 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ 'ಯೋಗ ಸುಯೋಗ' ಬಾನುಲಿ ಸರಣಿ, 3.00 ಜಾನ್ ಬಿ.ಹಿಗ್ಗಿನ್ಸ್–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ 'ಗಜಗೌರಿ ವ್ರತ' ಪ್ರಸ್ತುತಿ– ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ–ಕಿಸಾನ್‌ವಾಣಿ, ಮಿಶ್ರ ಕೃಷಿಯಲ್ಲಿನ ಅನುಭವ ಕುರಿತು ಹೆಚ್.ಎಂ.ರವಿಕುಮಾರ್ ಅವರೊಡನೆ ಸಂದರ್ಶನ, 9.30 ಡಿ. ಬಾಲಕೃಷ್ಣ –ವೀಣಾವಾದನ, 10.00 ಯಕ್ಷ ಸಂಪದ–ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪಾತ್ಯಕ್ಷಿಕೆ, ನಿರ್ಮಾಣ–ದಿವಾಕರ್ ಹೆಗಡೆ, 10.30 ಸವಿನೆನಪು

■ **ಮೈಸೂರು ವಿಶ್ವವಿದ್ಯಾನಿಲಯ ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಜಿಯೋಇನ್‌ಫರ್‌ಮ್ಯಾಟಿಕ್ಸ್ ಟೆಕ್ನಾಲಜಿ ಸೆಂಟರ್**: ವಿಶ್ವ ಪರಿಸರ ದಿನಾಚರಣೆ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವ ಪ್ರೊ.ಶಿವಪ್ಪ, ಮುಖ್ಯ ಅತಿಥಿಗಳು: ಉಪ ಅರಣ್ಯ ಸಂರಕ್ಷಣಾಧಿಕಾರಿ ಪಿ.ಶ್ರೀಧರ್, ಅಧ್ಯಕ್ಷತೆ: ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ.ಜಯಶ್ರೀ, ಸ್ಥಳ: ಆರ್.ಪಿ.ಮಿಶ್ರಾ ಹಾಲ್, ಮಾನಸಗಂಗೋತ್ರಿ, ಬೆಳಗ್ಗೆ 10ರಿಂದ.

ನಮ್ಮವರು ನಮ್ಮ ವಿರುದ್ಧ ಕೆಲಸ ಮಾಡುವುದು ಮಾಮೂಲು

● ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ವ್ಯಂಗ್ಯೋಕ್ತಿ ● ಅದನ್ನೆಲ್ಲಾ ಮೆಟ್ಟಿ ನಿಂತು ಕೆಲಸ ಮಾಡುವ ಸವಾಲು ● ಸಿದ್ದರಾಮಯ್ಯ 'ಆತ್ಮಸಾಕ್ಷಿ'ಗೆ ಎದಿರೇಟು: ನಾವೇನು ಗುತ್ತಿಗೆ ಕೊಟ್ಟಿದ್ದೀವಾ!



ಮೈಸೂರು, ಜೂ.6(ಎಸ್‌ಬಿಡಿ)– ನಮ್ಮ ಪಕ್ಷದವರೇ ನಮ್ಮ ವಿರುದ್ಧವಾಗಿ ಕೆಲಸ ಮಾಡುವುದೆಲ್ಲಾ ಮಾಮೂಲಿ, ಅದನ್ನೆಲ್ಲಾ ಮೆಟ್ಟಿನಿಂತು ಕೆಲಸ ಮಾಡುತ್ತೇವೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯುತ್ತಿರುವ ಚುನಾವಣಾ ಪ್ರಚಾರಕ್ಕಾಗಿ ಸೋಮವಾರ ಮೈಸೂರಿಗೆ ಆಗಮಿಸಿರುವ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಶಾಸಕ ಸಾ.ರಾ.ಮಹೇಶ್ ನೇತೃತ್ವದಲ್ಲೇ ಉತ್ತಮವಾದ ಪ್ರಚಾರ ನಡೆಯುತ್ತಿದ್ದು, ಮತದಾರರು ಜೆಡಿಎಸ್ ಪರ ಇದ್ದಾರೆ. ನಾನೂ 2 ದಿನ ಈ ಭಾಗದಲ್ಲೇ ಪ್ರಚಾರದಲ್ಲಿ ಭಾಗಿಯಾಗಲಿದ್ದು, ಸಾಧ್ಯವಾದರೆ ಜೂ.9ರಂದು ಮತ್ತೆ ಬರುತ್ತೇನೆ. ನಮ್ಮ ಪಕ್ಷದ ಅಭ್ಯರ್ಥಿ ಬಗ್ಗೆ ಲಘುವಾಗಿ ಪ್ರಶ್ನಿಸುವವರಿಗೆ ಪದವೀಧರ ಮತದಾರರ ಮೂಲಕವೇ ಉತ್ತರ ಕೊಡಿಸಬೇಕು ಎನ್ನುವುದು ನನ್ನ ಉದ್ದೇಶ ಎಂದರು.

ಜೆಡಿಎಸ್ ಪಕ್ಷದ ಶಾಸಕರೇ ಅಭ್ಯರ್ಥಿ ವಿರುದ್ಧ ಕೆಲಸ ಮಾಡುತ್ತಿದ್ದಾರೆ ಎಂಬ ಮಾತು ಕೇಳಿಬಂದಿರುವ ಬಗ್ಗೆ ಪ್ರತಿಕ್ರಿಯಿಸಿದ ಹೆಚ್‌ಡಿಕೆ, ಇದೆಲ್ಲಾ ನಮ್ಮ ಪಕ್ಷದಲ್ಲಿ ಮಾಮೂಲಿ ಅಲ್ಲವೇ? ಇದು ಹಿಂದಿನಿಂದಲೂ ರೂಢಿಗತವಾಗಿ ಬಂದಿದೆ. ಇದನ್ನೆಲ್ಲಾ ಮೆಟ್ಟಿ ನಿಂತೇ ನಾವೆಲ್ಲಾ ಕೆಲಸ ಮಾಡಬೇಕು ಎಂದು ಹೇಳಿದರು.

ಜೂ.10ರಂದು ಉತ್ತರ: ಜೆಡಿಎಸ್‌ನ ಆತ್ಮಸಾಕ್ಷಿ ಮತಗಳು ಕಾಂಗ್ರೆಸ್‌ಗೆ ಬರುತ್ತವೆ ಎಂಬ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ, ಏನು ಅವರಿಗೊಬ್ಬರಿಗೇನಾ ಆತ್ಮಸಾಕ್ಷಿ ಇರೋದು? ನಮಗ್ಯಾರಿಗೂ ಇಲ್ಲವಾ? ಅವರೊಬ್ಬರಿಗೇ ಗುತ್ತಿಗೆ ಕೊಟ್ಟಿದ್ದೀವಾ? ಎಲ್ಲರಲ್ಲೂ ಆತ್ಮಸಾಕ್ಷಿ ಇರುತ್ತದೆ. ಜೂ.10ರ ಫಲಿತಾಂಶದಲ್ಲಿ ಎಲ್ಲದಕ್ಕೂ ಉತ್ತರ ಸಿಗಲಿದೆ ಎಂದು ಕಿಡಿಕಾರಿದರು.

ಜಿಟಿಡಿ ಸ್ಪಷ್ಟ: ಕಾಂಗ್ರೆಸ್ ಶಾಸಕ ಜಮೀರ್ ಅಹಮದ್, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಸಂಪರ್ಕದಲ್ಲಿದ್ದಾರೆ ಎನ್ನುವ ವಿಚಾರದ ಬಗ್ಗೆ ಮಾತನಾಡಿ, ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗೆ ಮತ ನೀಡುವುದಾಗಿ ಈಗಾಗಲೇ ಜಿ.ಟಿ.ದೇವೇಗೌಡರು ಸ್ಪಷ್ಟವಾಗಿ ಹೇಳಿದ್ದಾರೆ. ಹೀಗಿರುವಾಗ ಅವರ್‍ಯಾರೋ ಹೇಳುವ ಮಾತಿಗೆ ಉತ್ತರ ಕೊಡುವ ಅವಶ್ಯಕತೆ ಇಲ್ಲ ಎಂದರು.

ವಿಸ್ತಾರವಾಗಿ ತಿಳಿಸುತ್ತೇನೆ: ಕಳೆದ ರಾಜ್ಯಸಭಾ ಚುನಾವಣೆಯಲ್ಲಿ ಹೆಚ್.ಡಿ. ದೇವೇಗೌಡರನ್ನು ಗೆಲ್ಲಿಸಿದ್ದೇವೆ ಎಂಬ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯರ ಹೇಳಿಕೆಗೆ ತಿರುಗೇಟು ನೀಡಿದ ಹೆಚ್‌ಡಿಕೆ, ಆ ಚುನಾವಣೆಯಲ್ಲಿ ದೇವೇಗೌಡರ ವಿರುದ್ಧ ಅಭ್ಯರ್ಥಿ ಹಾಕುವುದು ಬೇಡ ಎಂದು ಮೊದಲು ಬಿಜೆಪಿಯವರು ನಿರ್ಧಾರ ಮಾಡಿದರು. ಆ ಬೆಳವಣಿಗೆಯಿಂದ ಕಾಂಗ್ರೆಸ್‌ನವರೂ ಮೌನವಾದರು. ಈ ಕಾರಣಕ್ಕೆ ದೇವೇಗೌಡರನ್ನು ನಾವೇ ಗೆಲ್ಲಿಸಿದ್ದೇವೆ ಎಂಬ ಬಡಾಯಿ ಬೇಡ. ಅಯ್ಯೋ ಪಾಪ ಲೋಕಸಭಾ ಚುನಾವಣೆಯಲ್ಲಿ ಸೋತಿದ್ದೀರಿ. ಸಿದ್ದರಾಮಯ್ಯ ನಿಮ್ಮನ್ನು ಸೋಲಿಸಿದ್ದಾರೆ, ನಿಮ್ಮನ್ನು ರಾಜ್ಯಸಭೆಗೆ ಕಳಿಸ್ತೀವಿ ಅಂತ ಯಾರೂ ಬಂದಿರಲಿಲ್ಲ. ಈ ವಿಚಾರವಾಗಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಧ್ರುವನಾರಾಯಣ್ ಆಡಿರುವ ಮಾತುಗಳನ್ನೆಲ್ಲಾ ಕೇಳಿದ್ದೇನೆ. ಎಲ್ಲದಕ್ಕೂ ನಾಳೆ ವಿಸ್ತಾರವಾಗಿ ಉತ್ತರ ಕೊಡುತ್ತೀನಿ. ನಮ್ಮಲ್ಲಿ 32 ಮತಗಳಿವೆ, ಕೊರತೆ ಮತಗಳನ್ನು ತುಂಬಿಸುವ ಪ್ರಯತ್ನ ಮಾಡ್ತಿದ್ದೀವಿ. ಇದಕ್ಕಾಗಿ ಯಾವುದೇ ಆಪರೇಷನ್ ಮಾಡಲ್ಲ ಎಂದು ಸ್ಪಷ್ಟಪಡಿಸಿದರು.

ದಲಿತ ಸಿಎಂ ಮಾಡಲಿ: ದಲಿತ ವ್ಯಕ್ತಿ ಸಿಎಂ ಆಗಬೇಕಾದರೆ ಅದು ಬಿಜೆಪಿಯಿಂದ ಸಾಧ್ಯ ಎಂದು ವಿಧಾನಪರಿಷತ್ ಸದಸ್ಯ ನಾರಾಯಣಸ್ವಾಮಿ ಹೇಳಿಕೆಗೆ ಬಿಜೆಪಿಯವರು ದಲಿತ ಮುಖ್ಯಮಂತ್ರಿಯನ್ನು ಮಾಡಲಿ ಎಂದು ಸವಾಲು ಹಾಕಿದರು. ಇದೇ ವೇಳೆ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡರ ಹೆಸರು ಪ್ರಸ್ತಾಪಿಸಿ ಅವರ ನಡೆಯ ಬಗ್ಗೆ ಪ್ರತಿಕ್ರಿಯೆ ಕೇಳಿದಾಗ ಏನೂ ಮಾತನಾಡದೆ ಸಿಟ್ಟಿನಿಂದಲೇ ಸ್ಥಳದಿಂದ ತೆರಳಿದರು.

ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ಹಿನ್ನೆಲೆ: ಭದ್ರತೆಗೆ ಸಿದ್ಧತೆ

ಮೈಸೂರು, ಜೂ. 6(ಆರ್‌ಕೆ)– ಪ್ರಧಾನಮಂತ್ರಿ ನರೇಂದ್ರಮೋದಿ ಅವರು ಮೈಸೂರಿಗೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಭಾರೀ ಭದ್ರತೆಯೊಂದಿಗೆ ಕಟ್ಟೆಚ್ಚರ ವಹಿಸಲು ಪೊಲೀಸ್ ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಜೂನ್ 20ರಂದು ಸಂಜೆ ವಿಶೇಷ ವಿಮಾನದಲ್ಲಿ ದೆಹಲಿಯಿಂದ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿರುವ ಪ್ರಧಾನಿಗಳು, ಅಲ್ಲಿಂದ ಕಾರಿನಲ್ಲಿ ರಾಡಿಸನ್ ಬ್ಲ್ಯೂ ಪ್ಲಾಜಾ ಹೋಟೆಲ್‌ಗೆ ಆಗಮಿಸಿ ವಾಸ್ತವ್ಯ ಹೂಡುವರು. ಮರುದಿನ (ಜೂನ್ 21) ಬೆಳಗ್ಗೆ ಅರಮನೆ ಆವರಣದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳುವರು ಎಂದು ಪ್ರಧಾನಮಂತ್ರಿಗಳ ತಾತ್ಕಾಲಿಕ ಪ್ರವಾಸ ಕಾರ್ಯಕ್ರಮ ನಿಗದಿಯಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಧಾನಿಗಳ ವಿಮಾನ ಲ್ಯಾಂಡಿಂಗ್‌ನಿಂದ ಹಿಡಿದು, ಸಾಗುವ ರಸ್ತೆ, ವಾಸ್ತವ್ಯ ಸ್ಥಳ, ಅವರು ಪಾಲ್ಗೊಳ್ಳುವ ಕಾರ್ಯಕ್ರಮ ಸ್ಥಳ ಹಾಗೂ ವಿಮಾನ ಟೇಕ್‌ಆಫ್ ಆಗಿ ಹಾಗೂ ದೆಹಲಿ ತಲುಪಿದ ಬಗ್ಗೆ ಖಚಿತವಾಗುವವರೆಗೂ ಕೇಂದ್ರ ಸರ್ಕಾರದ ಎಸ್‌ಪಿಜಿ ಮತ್ತು ಎನ್‌ಎಸ್‌ಜಿ ಅಧಿಕಾರಿಗಳು ಹಾಗೂ ಕೇಂದ್ರ ಗೃಹ ಸಚಿವಾಲಯದ ನಿರ್ದೇಶನ ಹಾಗೂ ಶಿಷ್ಟಾಚಾರದನ್ವಯ ಮೈಸೂರಲ್ಲಿ ಪೊಲೀಸ್ ಭದ್ರತಾ ಯೋಜನೆ ರೂಪಿಸಲು ತಯಾರಿ ನಡೆಸಲಾಗುತ್ತಿದೆ.

ರಾಜ್ಯ ಗೃಹ ಇಲಾಖೆ ಪೊಲೀಸ್ ಮಹಾನಿರ್ದೇಶಕರೂ ಪ್ರಧಾನಿಗಳ ಭದ್ರತೆ ಕುರಿತಂತೆ ಈಗಾಗಲೇ ಬೆಂಗಳೂರಲ್ಲಿ ಸಭೆ ನಡೆಸಿ ಯೋಜನೆಯ ರೂಪು–ರೇಷೆ ಸಿದ್ಧಪಡಿಸುತ್ತಿದ್ದು, ಹೆಚ್ಚುವರಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ನಿಯೋಜಿಸುವ ಬಗ್ಗೆ ತಯಾರಿ ಮಾಡಿದ್ದಾರೆ. ಮೈಸೂರು ನಗರ ಪೊಲೀಸ್ ಘಟಕದಿಂದ ಪ್ರಧಾನಮಂತ್ರಿಗಳ ಭೇಟಿ ಬಂದೋಬಸ್ತ್ ಅಗತ್ಯವಿರುವ ಹೆಚ್ಚುವರಿ ಸಿಬ್ಬಂದಿಗೆ ಬೇಡಿಕೆ ಸಲ್ಲಿಸಿದ ನಂತರ ನೆರೆ ಜಿಲ್ಲೆಗಳು ಹಾಗೂ ರಾಜ್ಯದ ವಿವಿಧ ಭಾಗಗಳಿಂದ ಮೈಸೂರಿಗೆ ನಿಯೋಜಿಸುವ ಬಗ್ಗೆ ಪ್ರಕ್ರಿಯೆಗಳು ನಡೆಯುತ್ತಿವೆ.

ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸ್ ಘಟಕಗಳಲ್ಲಿ ಲಭ್ಯವಿರುವ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಜೊತೆಗೆ ಬೇರೆ ಯಾವ ಜಿಲ್ಲೆಗಳಿಂದ ಹೆಚ್ಚುವರಿ ಪೊಲೀಸರನ್ನು ಬಂದೋಬಸ್ತ್ ಕರ್ತವ್ಯಕ್ಕೆ ಮಂಜೂರು ಮಾಡಬೇಕೆಂಬುದರ ಕುರಿತಂತೆ ಚರ್ಚೆ ನಡೆಸುತ್ತಿದ್ದು ಪ್ರಧಾನಮಂತ್ರಿಗಳ ಅಧಿಕೃತ ಪ್ರವಾಸ ಕಾರ್ಯಕ್ರಮ ಹೊರಬೀಳುತ್ತಿದ್ದಂತೆಯೇ ಪೂರ್ಣ ಪ್ರಮಾಣದ ಬಂದೋಬಸ್ತ್ ಯೋಜನೆ ಸಿದ್ಧವಾಗುತ್ತದೆ.

ಸಿಟಿ ಸಿವಿಲ್, ಟ್ರಾಫಿಕ್, ಕೆಎಸ್‌ಆರ್‌ಪಿ, ಸಿಎಆರ್, ಮೌಂಟೆಡ್, ಜಿಲ್ಲಾ ಪೊಲೀಸ್, ಡಿಎಆರ್ ಘಟಕಗಳ ಅಧಿಕಾರಿಗಳು, ಸಿಬ್ಬಂದಿಯ ಲಭ್ಯತಾ ಪ್ರಮಾಣ ನೋಡಿಕೊಂಡು ಶಿಷ್ಟಾಚಾರದನ್ವಯ ಹೆಚ್ಚುವರಿ ಪೊಲೀಸರನ್ನು ಕರೆಸಿಕೊಂಡು ಭದ್ರತಾ ಕರ್ತವ್ಯದ ರೂಪುರೇಷೆ ಅಂತಿಮಗೊಳಿಸಲು ಸಿದ್ಧತೆ ತೀವ್ರವಾಗಿ ನಡೆಯುತ್ತಿದೆ. ಒಟ್ಟಾರೆ ಪ್ರಧಾನಮಂತ್ರಿಗಳ ಭೇಟಿ ಸಂದರ್ಭ ಯಾವುದೇ ಲೋಪದೋಷವಾಗದಂತೆ ನಿಗಾ ವಹಿಸಿ ಕಟ್ಟೆಚ್ಚರದೊಂದಿಗೆ ಭದ್ರತೆ ಮಾಡಲು ಮೈಸೂರು ನಗರ ಪೊಲೀಸರು ಪೂರ್ವ ತಯಾರಿ ಮಾಡಿಕೊಳ್ಳುತ್ತಿದ್ದಾರೆ.

ಪ್ರಕೃತಿ ಮೂಲ ಸ್ವರೂಪಕ್ಕೆ ಧಕ್ಕೆಯಾದರೆ ವಿನಾಶ ಖಚಿತ




ಮೈಸೂರು, ಜೂ.6– ಪ್ರಕೃತಿಯ ಮೂಲ ಸ್ವರೂಪಕ್ಕೆ ಧಕ್ಕೆ ಮಾಡುವುದು ವಿನಾಶಕ್ಕೆ ಕಾರಣವಾಗುತ್ತಿದೆ ಎಂದು ಹೆಚ್.ಡಿ.ಕೋಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪಪ್ರಾಂಶುಪಾಲ ಶ್ರೀಕಂಠೇಶ್ ಅಭಿಪ್ರಾಯಿಸಿದರು. ಮೈಸೂರು ಬೋಗಾದಿ ಸಮೀಪದ ಶಾರದಾನಗರ ರೈಲ್ವೆ ಬಡಾವಣೆಯ ಶರಣು ಕುಟೀರದಲ್ಲಿ ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಏರ್ಪಡಿಸಿದ್ದ ವಿಶ್ವಪರಿಸರ ದಿನಾಚರಣೆಯಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಉತ್ತಮ ಪರಿಸರ ಮನುಷ್ಯನ ಆರೋಗ್ಯ ವೃದ್ಧಿಸುತ್ತದೆ. ಆದರೆ ಪ್ರಕೃತಿಯ ಕೊಡುಗೆಯಾದ ಬೆಟ್ಟಗುಡ್ಡ, ನದಿ, ಮರಗಳನ್ನು ಭಕ್ತಿ ಹಾಗೂ ನಾಗರಿಕತೆ ನೆಪದಲ್ಲಿ ಹಾಳು ಮಾಡುತ್ತಿದ್ದೇವೆ. ಪ್ರಕೃತಿಯ ಮೂಲ ಸ್ವರೂಪಕ್ಕೆ ಧಕ್ಕೆ ತರುವ ಮೂಲಕ ತಮ್ಮ ನಾಶಕ್ಕೆ ತಾವೇ ಕಾರಣವಾಗುತ್ತಿದ್ದೇವೆ. ಇದಕ್ಕೆ ಕೊಡಗು ಮತ್ತು ಕೇರಳ ರಾಜ್ಯದಲ್ಲಿ ಸಂಭವಿಸಿದ್ದ ವಿಕೋಪಗಳೇ ಜ್ವಲಂತ ಸಾಕ್ಷಿ ಎಂದರು.

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಮಾತನಾಡಿ, ಮರಗಿಡಗಳನ್ನು ನೆಡುವ ಲಕ್ಷಾಂತರ ಜನರಿದ್ದಾರೆ. ಆದರೆ ನೆಟ್ಟ ಗಿಡಗಳನ್ನು ಸಂರಕ್ಷಿಸಿ ಪೋಷಿಸುವಂತಹವರು ಬೆರಳೆಣಿಕೆಯಷ್ಟು ಜನ ಮಾತ್ರ ಅಂತಹ ಅತೀ ವಿರಳ ವ್ಯಕ್ತಿಗಳಲ್ಲಿ ಶ್ರೀಕಂಠೇಶ್ ಅವರೂ ಒಬ್ಬರು. ವೃತ್ತಿಯಲ್ಲಿ ಉಪಪ್ರಾಂಶುಪಾಲರಾದರೂ ಪ್ರವೃತ್ತಿಯಲ್ಲಿ ಪ್ರಕೃತಿ ಪ್ರೇಮಿ. ನೆಟ್ಟ ಸಾವಿರಾರು ಗಿಡಗಳನ್ನು ಪೋಷಿಸಿ ಅವುಗಳನ್ನು ಹೆಮ್ಮರವಾಗಿಸಿದ್ದಾರೆ ಎಂದು ಶ್ಲಾಘಿಸಿದರು.

ಸಹ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ಪ್ರತಿಯೊಬ್ಬರೂ ಲಭ್ಯವಿರುವ ಸ್ಥಳದಲ್ಲಿ ಸಾಧ್ಯವಾದಷ್ಟು ಗಿಡಗಳನ್ನು ನೆಡುವ ಮೂಲಕ ಪ್ರಕೃತಿಯನ್ನು ಸಂರಕ್ಷಿಸಬೇಕು ಎಂದು ಮನವಿ ಮಾಡಿದರು. ವಚನ ಚೂಡಾಮಣಿ ಪರಿಸರ ಸಂಬಂಧಿತ ವಚನಗಳನ್ನು ಸುಶ್ರಾವ್ಯವಾಗಿ ಹಾಡಿದರು. ಫೌಂಡೇಷನ್ ಮೈಸೂರು ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ವಾಜಂತ್ರಿ, ಕೇಂದ್ರೀಯ ಸಂಚಾಲಕ ವಿ.ಲಿಂಗಣ್ಣ, ಕಾವೇರಿ ವಾಜಂತ್ರಿ, ಗೌರವಾಧ್ಯಕ್ಷ ಚೆನ್ನಬಸಪ್ಪ, ಲಲಿತ ಶಿವಣ್ಣ, ಮಂಜುಳ, ಕಸ್ತೂರಿ, ಅಕ್ಕಮಹಾದೇವಿ, ವಚನ, ನಿಜಗುಣ, ತನು, ಚಿರಂತ್, ಧನ್ಯಶ್ರೀ, ಆರ್ತೀಶ್ ಮತ್ತಿತರರು ಉಪಸ್ಥಿತರಿದ್ದರು.

ಸಂಗೀತ ವಿವಿ ಬೋಧಕೇತರ ಸಿಬ್ಬಂದಿಯ ಸಂಕಷ್ಟಕ್ಕೆ ಸ್ಪಂದನೆ ಇಲ್ಲ

ಮುಖ್ಯಮಂತ್ರಿ ಮೈಸೂರು ಭೇಟಿ ವೇಳೆ ಪರಿಹಾರದ ನಿರೀಕ್ಷೆ



ಮೈಸೂರು, ಜೂ.6(ಎಸ್‌ಬಿಡಿ)– ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿ ಹತ್ತಾರು ವರ್ಷ ದುಡಿದು, ಈಗ ಕೆಲಸವಿಲ್ಲದೆ ವೇತನವೂ ಇಲ್ಲದೆ ಕಾಂಪೌಂಡ್ ಬಳಿ ಧರಣಿ ನಡೆಸುತ್ತಿರುವ ತಾತ್ಕಾಲಿಕ ಸಿಬ್ಬಂದಿಯ ಆರ್ತನಾದ ಇನ್ನೂ ಸರ್ಕಾರದ ಕಣ್ತೆರೆಸದಿರುವುದು ವಿಪರ್ಯಾಸ.

ವಿವಿಯ ಬೋಧಕೇತರ ಸಿಬ್ಬಂದಿಗಳ ಸಂಘ ಪ್ರತಿಭಟನೆ ಆರಂಭಿಸಿ 108 ದಿನಗಳಾಯ್ತು, ಅಲ್ಲದೆ 50 ದಿನಗಳಿಂದ ಉಪವಾಸ ಸತ್ಯಾಗ್ರಹದ ಮೂಲಕವೂ ತಮ್ಮೊಡಲ ಹಸಿವಿನ ಆಕ್ರಂದನ ಹೊರ ಹಾಕುತ್ತಿದ್ದಾರೆ. 14 ತಿಂಗಳಿಂದ ವೇತನವಿಲ್ಲದೆ ಕುಟುಂಬ ನಿರ್ವಹಣೆಗೆ ಎಡತಾಕುತ್ತಿದ್ದಾರೆ. ಪ್ರತಿಭಟನೆ ನಡೆಸುತ್ತಿರುವ 21 ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗೆ 2017ರಿಂದ ಜಾರಿಗೆ ಬರುವಂತೆ ಕ್ರೋಢೀಕೃತ ವೇತನ ನೀಡುವಂತೆ ಉನ್ನತ ಶಿಕ್ಷಣ ಇಲಾಖೆ ನೀಡಿದ್ದ ನಿರ್ದೇಶನ ಈಗ ಹಳತಾಗಿದೆ ಎಂಬಂತೆ ಏಕಾಏಕಿ ಇವರನ್ನೆಲ್ಲಾ ಹೊರದಬ್ಬಲಾಗಿದೆ.

ಬಿಎಸ್‌ವೈ ಸಿಎಂಗೆ ಪತ್ರ: ಸದರಿಯವರ ಮನವಿಯಲ್ಲಿ ಕಳೆದ 8–10 ವರ್ಷಗಳಿಂದ ಸಂಗೀತ ವಿವಿಯಲ್ಲಿ ನಿರಂತರವಾಗಿ ಸೇವೆ ಸಲ್ಲಿಸಿಕೊಂಡು ಬಂದಿರುವ 21 ಜನ ತಾತ್ಕಾಲಿಕ ಕ್ರೋಢೀಕೃತ ವೇತನದ ಆಧಾರದ ಮೇಲೆ ನೇಮಕಗೊಂಡಿರುವ ಬೋಧಕೇತರ ಸಿಬ್ಬಂದಿಗೆ ಕಳೆದ ಒಂದು ವರ್ಷದಿಂದ ವೇತನ ನೀಡದೆ ಕೆಲಸದಿಂದ ತೆಗೆದುಹಾಕಿರುವುದರಿಂದ ಇವರ ಕುಟುಂಬ ನಿರ್ವಹಣೆ ಕಷ್ಟಕರವಾಗಿದೆ. ಮಾನವೀಯತೆ ದೃಷ್ಟಿಯಿಂದ ಅವರಿಗೆ ಬಾಕಿ ವೇತನ ಪಾವತಿಸಿ, ಸೇವೆಯಲ್ಲಿ ಮುಂದುವರೆಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು 2 ದಿನಗಳ ಹಿಂದೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ಜನಪ್ರತಿನಿಧಿಗಳ ಮನವಿ: ಇದಕ್ಕೂ ಮುನ್ನ ವಸತಿ ಸಚಿವ ವಿ.ಸೋಮಣ್ಣ, ಸಂಸದ ಪ್ರತಾಪ್ ಸಿಂಹ, ಶಾಸಕ ಹರ್ಷವರ್ಧನ್ ಸೇರಿದಂತೆ ಅನೇಕ ಜನಪ್ರತಿನಿಧಿಗಳು ಸಂಗೀತ ವಿವಿ ಬೋಧಕೇತರ ಸಿಬ್ಬಂದಿಯನ್ನು ಸೇವೆಯಲ್ಲಿ ಮುಂದುವರೆಸಿ, ಬಾಕಿ ವೇತನ ನೀಡುವಂತೆ ಸರ್ಕಾರಕ್ಕೆ ಪತ್ರದ ಮೂಲಕ ಮನವಿ ಮಾಡಿದ್ದಾರೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತಿತರ ಸಂಘ–ಸಂಸ್ಥೆಗಳೂ ನೊಂದ ಸಿಬ್ಬಂದಿಯ ಕೈ ಬಿಡದಂತೆ ಕೋರಿಕೊಂಡಿವೆ. ಅನೇಕ ಸಾಮಾಜಿಕ ಹೋರಾಟಗಾರರು, ಸಂಘಟನೆಗಳೂ ಪ್ರತಿಭಟನೆಗೆ ಬೆಂಬಲ ಸೂಚಿಸಿ, ವ್ಯವಸ್ಥೆ ಬಗ್ಗೆ ಅತೀವ ಅಸಮಾಧಾನ ವ್ಯಕ್ತಪಡಿಸಿವೆ.

ಸಂಗೀತ ದಿನ ಎದುರು: ಜೂ.21 ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಂದು ಪ್ರಧಾನಿ ಮೋದಿ ಅವರು ಮೈಸೂರಿನಲ್ಲಿ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳಲಿದ್ದು, ಅದಕ್ಕಾಗಿ ಸರ್ವ ರೀತಿಯ ಸಿದ್ಧತೆಯೂ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರೂ ಮೈಸೂರಿನಲ್ಲಿ ಉನ್ನತ ಮಟ್ಟದ ಸಭೆ ನಡೆಸುವ ಸಾಧ್ಯತೆ ಇದೆ. ಜೂ.21 ವಿಶ್ವ ಸಂಗೀತ ದಿನವೂ ಆಗಿದ್ದು ಅಂದು ತಮ್ಮ ಕಷ್ಟದ ದಿನಗಳೂ ಅಂತ್ಯವಾಗಬಹುದು ಎನ್ನುವ ನಿರೀಕ್ಷೆ ಧರಣಿ ನಿರತ ಸಿಬ್ಬಂದಿಯದ್ದಾಗಿದೆ.

ಪುಟ್ಟ ಮಕ್ಕಳಿಂದ ಪರಿಸರ ಜಾಗೃತಿ



ಮೈಸೂರು, ಜೂ. 6– ಕುವೆಂಪುನಗರದ ಬಿಗ್ ನರ್ಸ್ ಬೆಂಚ್ ಪ್ರಿ ಸ್ಕೂಲ್ ಮತ್ತು ಡೇ ಕೇರ್ ವತಿಯಿಂದ ಪರಿಸರ ದಿನಾಚರಣೆ ಅಂಗವಾಗಿ ಕುವೆಂಪುನಗರ ಶಾಲೆಯ ಸುತ್ತಮುತ್ತ ಪುಟಾಣಿ ಮಕ್ಕಳು ಪರಿಸರ ಜಾಗೃತಿ ಬಗ್ಗೆ ಭಿತ್ತಿಪತ್ರ ಹಿಡಿದು ಜಾಥಾ ನಡೆಸುವ ಮೂಲಕ ಸಾರ್ವಜನಿಕರ ಗಮನ ಸೆಳೆದರು. ಆನಂತರ ಶಾಲೆಯ ಆವರಣದಲ್ಲಿ ವಿವಿಧ ಜಾತಿಯ ಗಿಡಗಳನ್ನು ನೆಡಲಾಯಿತು

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಟ್ರಸ್ಟ್‌ನ ಅಧ್ಯಕ್ಷೆ ಶ್ರೀಮತಿ ರಶ್ಮಿ ಕಾವೇರಮ್ಮ, ನಮ್ಮ ಸುತ್ತಮುತ್ತಲಿನ ಪರಿಸರವನ್ನು ಹಸಿರು ಮತ್ತು ಸ್ವಚ್ಛವಾಗಿಡುವುದು ಒಂದು ಪ್ರಮುಖ ಕಾರ್ಯಕ್ರಮವಾಗಿದೆ. ಮನೆಯಿಂದ ಪರಿಸರ ಜಾಗೃತಿ ಪ್ರಾರಂಭವಾಗಬೇಕು ಮತ್ತು ಪರಿಸರ ಸಂರಕ್ಷಿಸಲು ಶಾಲೆಯ ಜೊತೆಗೆ ಪೋಷಕರು ಜವಾಬ್ದಾರಿಯನ್ನು ಹೊಂದಿರಬೇಕು.


ನಿಸರ್ಗ ಪ್ರೇಮಿ ಶ್ರೀಮತಿ ರಾಜೇಶ್ವರಿ ದೇಣಿಗೆ ನೀಡಿದರು. ಇದೇ ಸಂದರ್ಭದಲ್ಲಿ ಡಾ. ಪ್ರಶಾಂತ್ ಹಾಗೂ ನಗರ ಪಾಲಿಕೆ ಸದಸ್ಯ ಎಂ.ಸಿ. ರಮೇಶ್ ಹಾಗೂ ಶಾಲೆಯ ಸಿಬ್ಬಂದಿಗಳು ಹಾಜರಿದ್ದರು

ಮೈಸೂರು ಅರಮನೆಗೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಕೃಷ್ಣ ಮುರಾರಿ ಭೇಟಿ



ಮೈಸೂರು ಅರಮನೆಗೆ ಸೋಮವಾರ ಭೇಟಿ ನೀಡಿದ್ದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಕೃಷ್ಣ ಮುರಾರಿ ದಂಪತಿಯನ್ನು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ಸ್ವಾಗತಿಸಿ, ಅವರಿಗೆ ಮೈಸೂರು ಪೇಟ, ಗಂಧದ ಹಾರದೊಂದಿಗೆ ಸತ್ಕರಿಸಿದರು. ಮೂರನೇ ಬಾರಿ ಅರಮನೆ ವೀಕ್ಷಿಸಿದ ನ್ಯಾಯಮೂರ್ತಿ ಕೃಷ್ಣ ಮುರಾರಿ, ಭವ್ಯವಾದ ಮೈಸೂರು ಅರಮನೆ ಸಾಂಸ್ಕೃತಿಕ, ಪಾರಂಪರಿಕ ಹೆಗ್ಗುರುತು ಹಾಗೂ ಹೆಮ್ಮೆ. ಇಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ತಂಡ ಅತ್ಯುತ್ತಮವಾಗಿ ನಿರ್ವಹಣೆ ಮಾಡಿದ್ದಾರೆ ಎಂದು ಸಂದರ್ಶಕರ ಪುಸ್ತಕದಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಭಿಕ್ಷಾಟನೆ ತಡೆಗಟ್ಟುವ ಸಂಬಂಧ ಪೊಲೀಸರ ಜಾಗೃತಿ



ಮೈಸೂರು, ಜೂ.6(ಎಂಕೆ)– ಮೈಸೂರಿನ ಎಲ್ಲಮ್ಮ ಮತ್ತು ಸಾಯಿಬಾಬ ಕಾಲೋನಿಯಲ್ಲಿ ನಗರ ಪೊಲೀಸ್ ವತಿಯಿಂದ ಭಿಕ್ಷಾಟನೆ ತಡೆಗಟ್ಟುವ ಕುರಿತು ಜಾಗೃತಿ ಮೂಡಿಸಲಾಯಿತು.

ಮಹಿಳಾ ಪೊಲೀಸ್ ಠಾಣೆ, ಮಾನವ ಕಳ್ಳಸಾಗಣಿಕೆ ನಿಷೇದ ಘಟಕ ಮತ್ತು ಮಕ್ಕಳ ವಿಶೇಷ ಪೊಲೀಸ್ ಘಟಕದ ವತಿಯಿಂದ ಆಯೋಜಿಸಿದ್ದ ಜಾಗೃತಿ ಸಭೆಯಲ್ಲಿ ದೇವರಾಜ ವಿಭಾಗದ ಎಸಿಪಿ ಎಂ.ಎನ್.ಶಶಿಧರ್ ಮಾತನಾಡಿ, ಮೈಸೂರು ನಗರ ವ್ಯಾಪ್ತಿಯ ಟ್ರಾಫಿಕ್ ಸಿಗ್ನಲ್‌ಗಳ ಬಳಿ, ಪ್ರಮುಖ ವೃತ್ತಗಳಲ್ಲಿ ಮತ್ತು ಮುಖ್ಯ ಬೀದಿಗಳಲ್ಲಿ ಮಹಿಳೆಯರು ಮತ್ತು ಮಕ್ಕಳು ಭಿಕ್ಷೆ ಬೇಡುವುದು ಹೆಚ್ಚಾಗಿದೆ. ಭಿಕ್ಷಾಟನೆ ತಡೆಗಟ್ಟುವ ನಿಟ್ಟಿನಲ್ಲಿ ಮೈಸೂರು ನಗರ ಪೊಲೀಸ್ ವತಿಯಿಂದ ರಕ್ಷಣಾ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿದ್ದು, ಭಿಕ್ಷಾಟನೆ ಮಾಡಿದವರ ವಿರುದ್ಧ ಕಾನೂನಾತ್ಮಕವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಭಿಕ್ಷಾಟನೆ ಮಾಡುವ ಮಹಿಳೆಯರು ಮತ್ತು ಮಕ್ಕಳ ರಕ್ಷಣೆ, ಮೂಲ ಸೌಲಭ್ಯಗಳನ್ನು ದೊರಕಿಸುವ ವಿವಿಧ ಇಲಾಖೆಗಳ ಮಾಹಿತಿ, ಆರ್ಥಿಕ ನೆರವು ನೀಡುವ ಸರ್ಕಾರದ ವಿವಿಧ ಯೋಜನೆಗಳು, ನಿರಾಶ್ರಿತ ಕೇಂದ್ರಗಳಲ್ಲಿರುವ ಸೌಲಭ್ಯಗಳು, ಶಿಕ್ಷಣದ ಮಹತ್ವ, ಶಿಕ್ಷಣ ಇಲಾಖೆಯಿಂದ ಮಕ್ಕಳಿಗೆ ಸಿಗುವ ಸೌಲಭ್ಯಗಳು ಬಗ್ಗೆ ಮಾಹಿತಿ ನೀಡಿದ ಅವರು, ಭಿಕ್ಷಾಟನೆ ತಡೆಗಟ್ಟುವಿಕೆಗೆ ಇರುವ ಕಾನೂನು ಮತ್ತು ನಿಯಮಗಳು, ಭಿಕ್ಷಾಟನೆ ಮಾಡುವವರ ವಿರುದ್ಧ ಕೈಗೊಳ್ಳುವ ಕಾನೂನಾತ್ಮಕ ಕ್ರಮಗಳ ಬಗ್ಗೆ ತಿಳಿಸಿದರು. ಮಹಿಳಾ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಅರುಣ ಕುಮಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅರುಂಧತಿ, ಅಪೇಕ್ಷಿತ, ಬಿಆರ್‌ಪಿ ಶಂಕರ್, ಸಂಗನವಾಡಿ ಸೂಪರ್‌ವೈಸರ್ ಸುಮಿತ್ರ, ನಿರಾಶ್ರಿತರ ಕೇಂದ್ರ ಮುಖ್ಯ ಪಾಲಕ ಶಿವಕುಮಾರ್, ಚೈಲ್ಡ್ ಲೈನ್–1098 ಸಂಯೋಜಕ ಶಶಿಕುಮಾರ್, ಕಾನ್‌ಸ್ಟೇಬಲ್ ಜಿ.ಎಸ್.ಪ್ರಸನ್ನಕುಮಾರ್ ಉಪಸ್ಥಿತರಿದ್ದರು.




ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕ (ಎನ್‌ಎಸ್‌ಎಸ್) ಹಾಗೂ ಭೂಗೋಳ ಶಾಸ್ತ್ರ ಅಧ್ಯಯನ ವಿಭಾಗದ ವತಿಯಿಂದ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆಯನ್ನು ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಗಿಡ ನೆಡುವ ಮೂಲಕ ಉದ್ಘಾಟಿಸಿದರು. ಎನ್‌ಎಸ್‌ಎಸ್ ಯೋಜನಾಧಿಕಾರಿಗಳಾದ ಡಾ.ಜಿ.ದೊಡ್ಡರಸಯ್ಯ, ಸಿ.ಎಸ್.ಸಿದ್ದರಾಜು, ಸಹಾಯಕ ಪ್ರಾಧ್ಯಾಪಕ ಡಾ.ಕೆ.ಕೆ.ಸೋಮಶೇಖರ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ 'ವನ್ಯ ಜೀವಿ ಹಾಗೂ ಭೂಗ್ರಹ ಸಂರಕ್ಷಿಸುವಲ್ಲಿ ಇಂದಿನ ನಾಗರಿಕರ ಪಾತ್ರ' ಕುರಿತು ಫ್ರಾನ್ಸ್‌ನ ಮೀರೋ ಕಂಪನಿ ಉದ್ಯೋಗಿ, ಪರಿಸರಪ್ರೇಮಿ, ವನ್ಯಜೀವಿ ಛಾಯಾಗ್ರಾಹಕ ಬಿ.ಉಮೇಶ್ ಮಾತನಾಡಿದರು. ಶಾಲೆಯ ಪ್ರಭಾರ ಮುಖ್ಯೋಪಾಧ್ಯಾಯ ಮಹದೇವಪ್ಪ ಸೇರಿದಂತೆ ಶಿಕ್ಷಕರು, ಸಿಬ್ಬಂದಿ, ಪೋಷಕರು ಉಪಸ್ಥಿತರಿದ್ದರು.





ನಕ್ಕರೆ ಅದೇ ಸ್ವರ್ಗ

ವೈದ್ಯರು : "ನಿಮ್ಮ ಗಂಡ ನಿದ್ದೆಯಲ್ಲಿ ಮಾತಾಡ್ತಾ ಇದ್ದರು ಅಂತ ಏನು ಗ್ಯಾರಂಟಿ?"
ಆಕೆ : "ಎಚ್ಚರವಾಗಿದ್ರೆ ಅಂತ ಪದಗಳಿಂದ ಬೈಯ್ಯುವ ಧೈರ್ಯ ನಮ್ಮ ಯಜಮಾನರಿಗೆ ಎಲ್ಲಿಂದ ಬರ್ಬೇಕು ಡಾಕ್ಟ್ರೆ?!"

ಮೈಸೂರು ಮಿತ್ರ
ಮಂಗಳವಾರ, 7 ಜೂನ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಜಯದ ರಹಸ್ಯ ಕೈ ಹಾಕಿದ ಕಾರ್ಯದಲ್ಲಿ ನೆಲೆಯಾಗಿ ನಿಲ್ಲುವುದೇ ಆಗಿದೆ.
–ಡಿಸ್ರೇಲಿ


ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಊರ್ನೋಡು ಅಂದ್ರೆ ತಡಿ ಮೊದಲು ಸೂರ್ನೋಡ್ತೀನಿ ಅಂದ್ನಂತೆ

ನಿಮ್ಮ ಪತ್ರಗಳು

ಗ್ರಾಮೀಣ ಮಹಿಳಾ ಕಾಲೇಜು ಹಾಸ್ಟೆಲ್ ಮುಂದೆ ಮುಜುಗರ ವಾತಾವರಣ

ಮಾನ್ಯರೆ,



ಮೈಸೂರಿನ ಚಾಮರಾಜ ಜೋಡಿರಸ್ತೆಯಲ್ಲಿ ಅಂಬಳೆ ಅಣ್ಣಯ್ಯ ಪಂಡಿತರ ಹೆಸರಲ್ಲಿ ಗ್ರಾಮೀಣ ಪ್ರದೇಶದ ಕಾಲೇಜು ಹೆಣ್ಣುಮಕ್ಕಳ ಹಾಸ್ಟೆಲ್ ಇದೆ. ಹಾಸ್ಟೆಲ್‌ನ ಮುಖ್ಯ ಗೇಟ್ ಪಕ್ಕ ಮದ್ಯದ ಅಂಗಡಿ ಇರುವುದರಿಂದ ಹೆಣ್ಣು ಮಕ್ಕಳ ಓಡಾಟಕ್ಕೆ ಕುಡುಕರ ಕಿರಿಕಿರಿ, ಕಾಟ ತಪ್ಪಿಸಲು ಬೀಗ ಹಾಕಲಾಗಿದ್ದು, ಈ ಹೆಣ್ಣು ಮಕ್ಕಳು ಹಾಸ್ಟೆಲ್ ಹಿಂಭಾಗದ ಸೌದೆ ಡಿಪೋ ಆವರಣದ ಭಾಗದ ಗೇಟ್ ಮೂಲಕವೇ ಓಡಾಡುತ್ತಾರೆ. ಹಾಸ್ಟೆಲ್ ಹಿಂಭಾಗದ ಅವರಣದಲ್ಲಿಯೇ ಅವರು ಕುಳಿತು ಓದುವುದು, ಬಟ್ಟೆ ತೊಳೆಯುವುದು, ವಿಶ್ರಾಂತಿ ಪಡೆಯುವುದು ಮಾಡುತ್ತಾರೆ. ಹಾಸ್ಟೆಲ್ ಆವರಣದ ಎದುರಿಗೆ ಒಂದು ದೊಡ್ಡ ಚರಂಡಿಯಿದ್ದು, ಅದರ ಪಕ್ಕದಲ್ಲಿ ಒಂದು ಹಳೆಯ ಸಿಮೆಂಟ್ ಓಣಿ ಚರಂಡಿಯ ಉದ್ದಕ್ಕೂ ಇದೆ. ಬಹಳ ವರ್ಷಗಳಿಂದ ಈ ಓಣಿಯನ್ನು ಇಲ್ಲಿನ ನಿವಾಸಿಗಳು ಓಡಾಡಲು ಬಳಸುತ್ತಿಲ್ಲ. ಕಾರಣ ಈ ಓಣಿ ಕುಡುಕರ, ದಾರಿ ಹೋಕರ, ನಿರಾಶ್ರಿತರ ಮಲ ಮೂತ್ರ ವಿಸರ್ಜನೆ ತಾಣವಾಗಿದೆ. ಅಲ್ಲದೇ ಎಲ್ಲಾ ತರದ ಕಟ್ಟಡ ತ್ಯಾಜ್ಯಗಳನ್ನು ಜನ ಇಲ್ಲಿ ತಂದು ಸುರಿಯುತ್ತಾರೆ. ಪಾಪ ಈ ಹಾಸ್ಟೆಲ್ ಹೆಣ್ಣು ಮಕ್ಕಳಿಗೆ ಎದುರಿಗೆ ಎಷ್ಟು ಅಸಹ್ಯ, ಮುಜುಗರದ, ಗಬ್ಬು ವಾಸನೆ, ಅನಾರೋಗ್ಯದ ವಾತಾವರಣವಿದೆ. ಈ ಹಾಸ್ಟೆಲ್ ಅನ್ನು ಮೈಸೂರು ನಗರ ಪಾಲಿಕೆ ನಡೆಸುತ್ತಿದ್ದು, ಮಹಿಳಾ ಮೇಯರ್ ಅವರು ಆಡಳಿತ ಮಂಡಳಿ ಅಧ್ಯಕ್ಷರಾಗಿದ್ದಾರೆ ಹಾಗೂ ಇದು ವಾರ್ಡ್ 23ಕ್ಕೆ ಸೇರುತ್ತದೆ. ನಾವು ಹಲವು ಬಾರಿ ಈ ಹಾಸ್ಟೆಲ್ ಹೆಣ್ಣು ಮಕ್ಕಳಿಗೆ ಇರುವ ಅಸಹ್ಯ, ಕೊಳಕು ವಾತಾವರಣ, ಪರಿಸರದ ಬಗ್ಗೆ ವಾರ್ಡ್ 23ರ ಮಹಿಳಾ ಕಾರ್ಪೊರೇಟರ್ ಗಮನಕ್ಕೆ ತಂದು ಈ ಮಲಮೂತ್ರ ವಿಸರ್ಜನೆಗೆ ಬಳಸುವ ಓಣಿಗೆ ಎತ್ತರದ ಕಾಂಪೌಂಡ್ ಹಾಕಿಸಿ, ಈ ಹೆಣ್ಣು ಮಕ್ಕಳ ಹಿತಾಸಕ್ತಿ ಕಾಪಾಡಬೇಕು ಹಾಗೂ ಪರಿಸರ ಸ್ವಚ್ಛತೆ ಕಾಪಾಡಬೇಕು ಎಂದು ವಾರ್ಡ್ 23 ನಾಗರಿಕ ಸಮಿತಿಯಲ್ಲಿ ಮನವಿ ಮಾಡಿದ್ದೆವು. ಅವರೂ ಕಾಂಪೌಂಡ್ ಹಾಕಿಸುವುದಾಗಿ ಭರವಸೆ ಕೊಟ್ಟು 2 ವರ್ಷ ವಾಯಿತು. ಆಮೇಲೆ ಇದರ ಬಗ್ಗೆ ಅವರು ಆಸಕ್ತಿ, ಕಾಳಜಿ ತೋರಿಲ್ಲ. ಈ ಓಣಿ ಮಹಿಳಾ ಹಾಸ್ಟೆಲ್ ಅವರಣದ ಹೊರಗೆ ಇದೆ. ಆದ್ದರಿಂದ ಮಹಿಳಾ ಮಣಿಗಳಾದ ವಾರ್ಡ್ 23 ನಗರ ಪಾಲಿಕೆ ಸದಸ್ಯರು ಹಾಗೂ ಮೇಯರ್ ಅವರು ಹೆಣ್ಣುಮಕ್ಕಳ ಮಾನ, ಸನ್ಮಾನ ಕಾಪಾಡಲು ಹೆಚ್ಚಿನ ಕಾಳಜಿ ವಹಿಸಿ ಈ ದುರುಪಯೋಗದ ಓಣಿಗೆ ನಗರಪಾಲಿಕೆ ಆಯುಕ್ತರ ಒಪ್ಪಿಗೆ ಪಡೆದು, ಶೀಘ್ರವಾಗಿ ಎತ್ತರದ ಕಾಂಪೌಂಡ್ ಹಾಕಿಸಿ ಅಸಹ್ಯ ಕೊಳಕು ಪರಿಸರ, ವಾತಾವರಣಕ್ಕೆ ಮುಕ್ತಿ ಕೊಡಿಸಬೇಕೆಂದು ವಾರ್ಡ್ 23ರ ನಾಗರಿಕರ ಪರವಾಗಿ ಕೇಳಿಕೊಳ್ಳುತ್ತಿದ್ದೇನೆ. ಅಧಿಕಾರದಲ್ಲಿ ಇರುವ ಹೆಣ್ಣು ಮಕ್ಕಳು, ಹೆಣ್ಣುಮಕ್ಕಳಿಗೆ ಆಗುವ ಅಸಹ್ಯ, ಮುಜುಗರ ವಾತಾವರಣದಿಂದ ಅವರನ್ನು ರಕ್ಷಿಸುವುದು, ಅವರ ಆದ್ಯ ಕರ್ತವ್ಯ, ಧರ್ಮ ಅಲ್ಲವೇ?

– ಪ್ರೊ. ಶರ್ಮ MSS, ಸಮಾಜ ಸೇವಕರು, ಮೈಸೂರು.

ಎಂಜಿ ರಸ್ತೆ, ದೊಡ್ಡಗಡಿಯಾರದ ಸುತ್ತಮುತ್ತ ರಸ್ತೆ ಬದಿ ಅಂಗಡಿ ತೆರವುಗೊಳಿಸಿ

ಮಾನ್ಯರೆ,

ಮೈಸೂರಿನ ಹೃದಯಭಾಗದಲ್ಲಿರುವ ಮಹಾತ್ಮ ಗಾಂಧಿ ವೃತ್ತ ಮತ್ತು ದೊಡ್ಡ ಗಡಿಯಾರದ ಸುತ್ತಮುತ್ತ ರಸ್ತೆ ಬದಿಯಲ್ಲಿ ನಾನಾ ರೀತಿಯ ವಸ್ತ್ರ (ಪ್ಯಾಂಟ್, ಸ್ವೆಟರ್, ಮಹಿಳೆಯರ ಉಡುಪು ಇತ್ಯಾದಿ), ಹಣ್ಣಿನ, ಸೂಟ್‌ಕೇಸ್ ಅಂಗಡಿಗಳು ದಿನ ಬಳಕೆಯ ವಸ್ತುಗಳ ಮಾರಾಟದ ತಳ್ಳು ಗಾಡಿಗಳು, ವಾಹನ ಪಾರ್ಕಿಂಗ್ ಜಾಗವನ್ನು ಕಬಳಿಸಿ ದ್ವಿಚಕ್ರ ವಾಹನ ನಿಲ್ಲಿಸಲು ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ಕೆಎಸ್‌ಆರ್‌ಟಿಸಿ ಬಸ್‌ಗಳು ಅದೇ ಮಾರ್ಗದಲ್ಲಿ ಸಂಚರಿಸುವುದರಿಂದ ಮಹಾತ್ಮಗಾಂಧಿ ವೃತ್ತದಿಂದ ದೊಡ್ಡ ಗಡಿಯಾರ ರಸ್ತೆಯಲ್ಲಿ ಎರಡು ಕಡೆ ದ್ವಿಮುಖ ವಾಹನ ಸಂಚಾರವಿರುವ ಕಾರಣ ಹಾಗೂ ಈ ಎರಡು ಸರ್ಕಲ್‌ಗಳಲ್ಲೂ ಆಗಾಗ್ಗೆ ಮುಷ್ಕರಗಳು ನಡೆಯುವ ಕಾರಣ ಜನನಿಬಿಡ ಸರ್ಕಲ್‌ಗಳಾಗಿವೆ. ಈ ಎರಡು ಸರ್ಕಲ್‌ಗಳಲ್ಲಿಯೂ ವಾಹನ ಸಂಚರಿಸಲು ಹಾಗೂ ರಸ್ತೆ ದಾಟಲು ಹರಸಾಹಸ ಪಡಬೇಕು. ಈ ಬಗ್ಗೆ ಪೊಲೀಸ್ ಇಲಾಖೆ ಗಮನ ಹರಿಸದೇ ಇರುವುದು ಕಂಡು ಕಾಣದಂತೆ ಜಾಣ ಕುರುಡು ತೋರುತ್ತಿರುವುದು ಪೊಲೀಸರ ಬಗ್ಗೆ ಸಾರ್ವಜನಿಕರಲ್ಲಿ ಬೇಸರ ತರಿಸಿದೆ. ಕೆಲವು ಕಾಲ ತೆರವುಗೊಳಿಸುತ್ತಾರೆ. ಬೆಳಗ್ಗೆ ನೋಡಿದರೆ ಮತ್ತೆ ಆಯಕಟ್ಟಿನ ಸ್ಥಳಗಳಲ್ಲಿ ಅಂಗಡಿ ಹಾಕಿ ರಾಜಾರೋಷವಾಗಿ ರಸ್ತೆಯನ್ನೇ ಆಕ್ರಮಿಸಿಕೊಂಡು ಕುಳಿತಿರುತ್ತಾರೆ. ಇದಕ್ಕೆ ನಗರ ಪಾಲಿಕೆ ಅನುಮತಿ ಇದೆಯೇ ಇದ್ದಲ್ಲಿ ಈ ರಸ್ತೆ ಬದಿ ಅಂಗಡಿಗಳನ್ನು ತೆರವುಗೊಳಿಸಲು ಮೈಸೂರು ಮಹಾನಗರ ಪಾಲಿಕೆ ಆಯುಕ್ತರು ಮತ್ತು ಮೈಸೂರು ನಗರ ಪೊಲೀಸ್ ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳಬೇಕು ಹಾಗೂ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಈ ಮೂಲಕ ಮನವಿ.

– ಬಿ.ಜಿ. ರಂಗೇಗೌಡ, ಮೈಸೂರು.

ಈ ಮಾರ್ಗದಲ್ಲಿ ಬಸ್ಸುಗಳು ಮತ್ತೆ ಸಂಚರಿಸಲಿ

ಮಾನ್ಯರೆ,

ಈ ಹಿಂದೆ ಸಿಟಿ ಬಸ್ ಮಾರ್ಗ ಸಂಖ್ಯೆ 72 ಬಿಇಎಂಎಲ್ ನಗರದಿಂದ ಮೇಟಗಳ್ಳಿ ರೂಟ್ ನಂ. 135 ಸಿಬಿಎಸ್ ಮಾರ್ಗ ಲಕ್ಷ್ಮೀ ಟಾಕೀಸ್, ಬಲ್ಲಾಳ್ ವೃತ್ತ, ಅಕ್ಷಯ ಭಂಡಾರ, ಕುವೆಂಪುನಗರ ಡಿಪೋ, ಎಸ್‌ಜೆಸಿಇ ಕಾಲೇಜು, ಒಂಟಿಕೊಪ್ಪಲು, ರೈಲ್ವೆ ನಿಲ್ದಾಣ, ಸಿಬಿಎಸ್ ಮಾರ್ಗ ಸಂಖ್ಯೆ 501ಎ ಸಿಬಿಎಸ್–ಕೊಲಂಬಿಯಾ ಏಷಿಯಾ ಆಸ್ಪತ್ರೆ ಮಾರ್ಗ ಬೋಗಾದಿ ರಿಂಗ್ ರಸ್ತೆ, ಮೇಟಗಳ್ಳಿ ರಿಂಗ್ ರಸ್ತೆ ಈ ಬಸ್‌ಗಳನ್ನು ಕೋವಿಡ್ ಕಾರಣದಿಂದ ರದ್ದುಗೊಳಿಸಲಾಗಿತ್ತು ಈ ಬಸ್‌ಗಳು ನೇರವಾಗಿ ಸಂಚರಿಸುವುದರಿಂದ ಹಿರಿಯ ನಾಗರಿಕರಿಗೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಕಾರ್ಮಿಕರಿಗೆ ಹಣ ಮತ್ತು ಸಮಯದ ಉಳಿತಾಯವಾಗುತ್ತಿತ್ತು. ಈಗ ಜನಜೀವನ ಸಹಜ ಸ್ಥಿತಿಗೆ ತಲುಪಿರುವುದರಿಂದ ಈ ಬಸ್‌ಗಳು ಮತ್ತೆ ಸಂಚರಿಸಲಿ.

–ನೊಂದ ಪ್ರಯಾಣಿಕರು, ಮೈಸೂರು.

ಮಾತು ಮನ ಮುಟ್ಟುವಂತಿರಬೇಕು ಮನೆ ಮುರಿಯುವಂತಿರಬಾರದು...!



ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು
ಮಾತು ಆಡಿದರೆ ಹೋಯಿತು. ಮುತ್ತು ಒಡೆದರೆ ಹೋಯಿತು
ಮಾತೇ ಮುತ್ತು, ಮಾತೇ ಮೃತ್ಯು
ನುಡಿದರೆ ಮುತ್ತಿನ ಹಾರದಂತಿರಬೇಕು
ಮಾತು ಬೆಳ್ಳಿ, ಮೌನ ಬಂಗಾರ
ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ

ಮಾತಿನ ಮಹತ್ವವನ್ನು ಸಾರುವಂತಹ ಗಾದೆ ಮಾತುಗಳಿವು. ಹೀಗೆ ಮಾತಿನ ಬಗ್ಗೆ ಇರುವ ಹಲವು ಗಾದೆ ಮಾತುಗಳನ್ನು ನಾವು ಗಮನಿಸಿದಾಗ ಮಾತಿಗೆ ಇರುವ ಮಾನ್ಯತೆ, ಶಕ್ತಿ ನೆನಪಾಗುತ್ತದೆ. ಎಷ್ಟೋ ಜಗಳಗಳ ಮೂಲ ಮಾತೇ ಆಗಿರುತ್ತದೆ.

ಹಾಗಾದರೆ, ಮಾತು ಹೇಗಿದ್ರೆ ಚೆಂದ, ಯಾವ ರೀತಿ ಮಾತುಗಳನ್ನಾಡಬೇಕು, ಎಲ್ಲಿ–ಹೇಗೆ ಮಾತನಾಡಬೇಕು, ಎಂಬುದನ್ನೂ ಜೀವನದ ಉದ್ದಕ್ಕೂ ಕಲಿಯಬೇಕಿದೆ. ಏಕೆಂದರೆ ನಮ್ಮಲ್ಲಿ ಕೆಲವರಿಗೆ ಎಲ್ಲಿ, ಹೇಗೆ ಮಾತನಾಡಬೇಕು, ಎಲ್ಲಿ ಮಾತನಾಡದೇ ಮೌನವಾಗಿರಬೇಕು. ಯಾವುದನ್ನು ಮಾತನಾಡಬೇಕು, ಯಾವುದನ್ನು ಮಾತನಾಡಬಾರದು ಎಂಬ ಸಂಗತಿಗಳೇ ತಿಳಿದಿರುವುದಿಲ್ಲ. ಈ ಮಾತನ್ನಾಡುವಾಗ ಚಂದನ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ, ಭಾರತದ ದೂರದರ್ಶನದ ಇತಿಹಾಸದಲ್ಲೇ ಒಂದು ಹೊಸ ದಾಖಲೆಯನ್ನು ಸೃಷ್ಟಿಸಿದ ಥಟ್ ಅಂತ ಹೇಳಿ ರಸ ಪ್ರಶ್ನೆ ಕಾರ್ಯಕ್ರಮದ ರೂವಾರಿ ಡಾ. ನಾ. ಸೋಮೇಶ್ವರ ಅವರು ಹೇಳಿದ ಕಥೆ ನೆನಪಾಗುತ್ತದೆ.

ಇದೋ ಕಥೆ...

ಒಮ್ಮೆ ರಾಜನ ಸಿಪಾಯಿಯೊಬ್ಬ ಕುದುರೆಯ ಸವಾರಿ ಮಾಡಿ, ದಣಿವಾಗಿ ಮರದ ಹತ್ತಿರ ಬಂದು ವಿಶ್ರಾಂತಿ ಪಡೆಯಲು ಇಚ್ಛಿಸಿದ. ತನ್ನ ಕುದುರೆಯನ್ನು ಆ ಮರದ ಪಕ್ಕದಲ್ಲಿದ್ದ ಖಾಲಿ ಜಾಗದಲ್ಲಿ ಕಟ್ಟಲು ಹೋದಾಗ ಅಲ್ಲೇ ಇದ್ದ ರೈತನೊಬ್ಬ ಆ ಸಿಪಾಯಿಗೆ ಹೇಳಿದ: ನೋಡಪ್ಪಾ, ನಿನ್ನ ಕುದುರೆಯನ್ನು ಇಲ್ಲಿ ಕಟ್ಟಬೇಡ, ನನ್ನ ಎತ್ತು ಸ್ವಲ್ಪ ಒರಟು ಸ್ವಭಾವ ಹೊಂದಿರುವುದರಿಂದ ನಿನ್ನ ಕುದುರೆಗೆ ಹಾನಿ ಮಾಡಬಹುದು. ಆದ್ದರಿಂದ ಆ ಕಡೆ ದೂರದಲ್ಲಿ ಕಟ್ಟಿ ಹಾಕು ಎಂದು ಹೇಳಿದ. ರೈತನ ಮಾತುಗಳನ್ನು ಕೇಳದ ಆ ಸಿಪಾಯಿ ಉದ್ಧಟತನದಿಂದ ತನ್ನ ಕುದುರೆಯನ್ನು ಅಲ್ಲೇ ಕಟ್ಟಿ, ಮರದ ಕೆಳಗೆ ಹೋಗಿ ನಿದ್ರಿಸಿದ. ನಿದ್ದೆ ಮುಗಿದು ಎದ್ದ ಸಿಪಾಯಿ ಕುದುರೆಯ ಬಳಿ ಬಂದಾಗ ಕುದುರೆಯ ಕಾಲಿಗೆ ಎತ್ತು ತಿವಿದು ಗಾಯ ಆಗಿತ್ತು. ಸಿಪಾಯಿಗೆ ಕೋಪ ಬಂದು ರಾಜನಿಗೆ ದೂರು ನೀಡಿದ. ರೈತನ ಎತ್ತು ನಮ್ಮ ಕುದುರೆಯನ್ನು ಗಾಯಗೊಳಿಸಿದೆ. ಆದ್ದರಿಂದ ಆ ರೈತನಿಗೆ ತಕ್ಕ ಶಿಕ್ಷೆ ನೀಡಬೇಕೆಂದು ವಾದಿಸಿದ. ಸಿಪಾಯಿಯ ಮಾತನ್ನು ಕೇಳಿದ ರಾಜ ರೈತನ ವಾದವನ್ನು ಕೇಳಬಯಸಿದ. ಆದರೆ ಆ ರೈತ ಏನೂ ಮಾತನಾಡಲಿಲ್ಲ. ನಿನ್ನ ಎತ್ತು ನಮ್ಮ ಕುದುರೆಗೆ ಹಾನಿ ಮಾಡಿತೇ ಎಂದು ರಾಜ ಕೇಳಿದ. ರೈತ ಮೌನವಾಗಿಯೇ ಇದ್ದ.

ಮತ್ತೆ, ಮತ್ತೆ ರಾಜ ಪ್ರಶ್ನೆಗಳನ್ನು ಕೇಳಿದರೂ ರೈತ ಏನೂ ಉತ್ತರ ನೀಡದೆ ಮೌನವಾಗಿ ನಿಂತಿದ್ದ. ಕೊನೆಗೆ ರಾಜ ಬಹುಶಃ ರೈತ ಮೂಗನಿರಬೇಕು, ಏನೂ ಮಾತನಾಡುತ್ತಿಲ್ಲ ಎಂದು ಹೇಳಿ, ಈ ಪಂಚಾಯಿತಿಯನ್ನು ಇಲ್ಲಿಗೆ ಮುಗಿಸುವೆ ಎಂದು ತೀರ್ಮಾನ ನೀಡಿದ. **ಕೂಡಲೇ ಅಲ್ಲೇ ಇದ್ದ ಸಿಪಾಯಿ, ಇಲ್ಲ ಸ್ವಾಮಿ, ಈತನಿಗೆ ಮಾತು ಬರುತ್ತದೆ. ನಾನು ಕುದುರೆ ಕಟ್ಟುವ ಮೊದಲೇ ಎಚ್ಚರಿಕೆ ನೀಡಿದ್ದ ಎಂಬ ವಿಷಯವನ್ನು ತಿಳಿಸಿದ.** ವಿಷಯ ತಿಳಿಸಿ ಸಿಕ್ಕಿ ಬಿದ್ದ ಸಿಪಾಯಿಗೆ ರಾಜ ಶಿಕ್ಷೆ ಕೊಟ್ಟ. ರೈತನಿಗೆ ಬಹುಮಾನ ನೀಡಿ ಕಳುಹಿಸಿದ. ಈ ಕಥೆಯ ಸಾರಾಂಶ ಇಷ್ಟೇ, ಬಹುಶಃ ಆ ರೈತ ಮಾತನಾಡಿದ್ದರೆ ಅವನಿಗೆ ಮತ್ಯಾವುದೇ ಸಾಕ್ಷಿ ಇರದ ಕಾರಣ ಅವನಿಗೆ ಶಿಕ್ಷೆ ಆಗುತ್ತಿತ್ತು. ಆದರೆ ರೈತ ಬುದ್ಧಿವಂತ, ಏನೂ ಮಾತನಾಡದೇ ಮೌನವಾಗಿದ್ದು ಎಲ್ಲವನ್ನೂ ಸಿಪಾಯಿಯ ಬಾಯಿಂದಲೇ ಹೇಳಿಸಿ ಬಹುಮಾನ ಪಡೆದ. ಎಲ್ಲಿ ಮಾತನಾಡಬೇಕು. ಎಲ್ಲಿ ಮೌನವಾಗಿರಬೇಕು, ಮಾತನಾಡುವ ಕಡೆ ಮೌನವಾಗಿರುವುದು, ಮೌನವಾಗಿ ಇರುವ ಕಡೆ ಮಾತನಾಡುವುದು ಎಷ್ಟರ ಮಟ್ಟಿಗೆ ಸರಿ ಎಂಬ ತಿಳುವಳಿಕೆಗೆ ಈ ಕಥೆ ಅತ್ಯಂತ ಔಚಿತ್ಯಪೂರ್ಣವಾಗಿದೆ.

ನಾವಾಡುವ ಮಾತುಗಳು ಕೆಲವೊಮ್ಮೆ ಕೆಲವರಿಗೆ ನೋವನ್ನು ಉಂಟು ಮಾಡುತ್ತದೆ. ಮಾತನಾಡಲೇಬೇಕೆಂಬ ಬಾಯಿ ಚಪಲದಿಂದ ಮಾತನಾಡುತ್ತೇವೆ. ಆದರೆ ನಮ್ಮ ಮಾತಿನಿಂದ ಬೇರೆಯವರಿಗಾಗುವ ನೋವಿನ ಅನುಭವವೇ ನಮಗೆ ತಿಳಿಯುವುದಿಲ್ಲ. ಮಾತನಾಡುವುದು ನಮ್ಮ ಅಭಿಪ್ರಾಯಗಳನ್ನು ಮತ್ತೊಬ್ಬರಿಗೆ ತಿಳಿಸಬೇಕೇ ವಿನಃ, ಮತ್ತೊಬ್ಬರಿಗೆ ನೋವುಂಟು ಮಾಡುವಂತಿರಬಾರದು.

> **ನಾಲ್ಕು ಜನ ಕುಳಿತುಕೊಂಡು ಇಲ್ಲದ ವ್ಯಕ್ತಿಯ ಬಗ್ಗೆ ಮಾತನಾಡುತ್ತಾ ಸಮಯ ವ್ಯರ್ಥ ಮಾಡುವ ಬದಲು, ಆ ಸಮಯದಲ್ಲಿ ಒಳ್ಳೆಯ ವಿಚಾರಗಳನ್ನು ಉಪಯೋಗಕ್ಕೆ ಬರುವ ಅಗತ್ಯವಾದ ಮಾಹಿತಿಗಳನ್ನು ಪರಸ್ಪರ ವಿನಿಯೋಗ ಮಾಡಿಕೊಂಡರೆ ವಿಚಾರ ಶಕ್ತಿ ಬೆಳೆಯುತ್ತದೆ. ನಮ್ಮ ಮಾತು ನಮ್ಮ ನಡವಳಿಕೆಯನ್ನು, ನಮ್ಮ ವ್ಯಕ್ತಿತ್ವವನ್ನು ತೋರಿಸುತ್ತದೆ. ನಮ್ಮ ಮಾತುಗಳು ನಾಲ್ಕು ಜನರಿಗೆ ಮಾದರಿಯಾಗಿದ್ದರೆ, ಉಪಯೋಗಕ್ಕೆ ಬರುವಂತಿದ್ದರೆ ಆ ಮಾತಿಗೆ ಸಾರ್ಥಕತೆ ಬಂದಂತಾಗುತ್ತದೆ.**

ಪ್ರಸ್ತುತ ದಿನಗಳಲ್ಲಿ ಅವಿಭಕ್ತ ಕುಟುಂಬಗಳು ಮರೆಯಾಗಿ ವಿಭಕ್ತ ಕುಟುಂಬಗಳು ಹೆಚ್ಚಾಗುತ್ತಿರುವುದಕ್ಕೆ ಮಾತುಗಳೇ ಕಾರಣ. ತುಂಬಿದ ಕುಟುಂಬದಲ್ಲಿದ್ದಾಗ ಒಬ್ಬರನ್ನೊಬ್ಬರು ಅನುಸರಿಸಿಕೊಂಡು ಬಾಳಬೇಕಾಗುತ್ತದೆ. ಸಾಮಾನ್ಯವಾಗಿ ಹಿರಿಯರು ಲೌಕಿಕ ಜ್ಞಾನ ತಿಳಿದವರು ಒಂದೆರಡು ಮಾತು ಹೆಚ್ಚಿಗೆ ಹೇಳಬಹುದು. ಬೈಯ್ಯಲೂಬಹುದು. ಆದರೆ ಅದನ್ನೇ ನೆಪವಾಗಿಟ್ಟುಕೊಂಡು ಬೇರ್ಪಟ್ಟ ಮನೆಗಳೂ, ಬೇರ್ಪಟ್ಟ ಮನಸ್ಸುಗಳಿವೆ.

ಓಹ್, ಆಗಿದ್ರೆ ಯಾರು ಏನೇ ಅಂದ್ರು ನಾವು ಹಿಂತಿರುಗಿಸಿ ಮಾತನಾಡಬಾರದಾ, ಅವರು ಅಂದ ಹಾಗೆ ಬೈಯಿಸಿಕೊಂಡು ಇರಬೇಕಾ ಎಂದರೆ ಇಲ್ಲ. ಖಂಡಿತವಾಗಿಯೂ ನಾನು ಹಾಗೆ ಹೇಳಲಾರೆ. ಯಾರೋ, ಏನೋ ಮಾತನಾಡಿ ನಮ್ಮ ಮನಸ್ಸಿಗೆ ನೋವುಂಟು ಮಾಡುವ ಮಾತುಗಳನ್ನಾಡಿದರೂ ಅಂತ ನಾವು ಅವರ ಹಾಗೆ ನೋವುಂಟು ಮಾಡುವ ಮಾತುಗಳನ್ನಾಡಬೇಕಿಲ್ಲ. ಚುಚ್ಚಿ ಮಾತನಾಡುವುದು, ಹೀಯ್ಯಾಳಿಸಿ ಮಾತನಾಡುವುದು ಕೆಲವರ ಗುಣವಾಗಿರುತ್ತದೆ. ಹೀಗೆಂದ ಮಾತ್ರಕ್ಕೆ ನಾವು ಹಾಗೆ ಮಾಡುವ ಅಗತ್ಯವಿಲ್ಲ. ಅದು ಅವರವರ ಸ್ವಭಾವ. ನಾವು ನಮ್ಮಂತಾಗಬೇಕು ಬೇರೊಬ್ಬರಂತಲ್ಲ. ಚಿನ್ನಕ್ಕೂ – ಹಿತ್ತಾಳೆಗೂ ವ್ಯತ್ಯಾಸ ಉಂಟು. ನಾವು ಅವರಂತೆ ಹಿತ್ತಾಳೆಯಾಗುವ ಅಗತ್ಯವಿಲ್ಲ.

ನಾವಾಡುವ ಮಾತುಗಳು ಮನಮುಟ್ಟುವಂತಿರಬೇಕು ಮನೆ ಮುರಿಯುವಂತಿರಬಾರದು. ಕೆಲವೊಮ್ಮೆ ಬೇಡದ ಮಾತುಗಳು, ಜಗಳಗಳು, ಮನಸ್ತಾಪಗಳು ಮನೆಯವರೊಂದಿಗೆ, ಸ್ನೇಹಿತರೊಂದಿಗೆ ಆಗುವುದುಂಟು. ಆಗ ಒಂದು ಕ್ಷಣ ನಮ್ಮ ಕೋಪವನ್ನು ನಿಯಂತ್ರಿಸಿಕೊಂಡರೆ, ಮಾತನ್ನಾಡದೇ ಮೌನವಾಗಿದ್ದರೆ, ಮಾತುಗಳಿಂದ ತೊಂದರೆಯಾಗಲಾರದು. ಯಾರೇ ಆಗಲಿ, ಎಲ್ಲಿಯೇ ಆಗಲಿ ಕುಳಿತು ನಮಗಾಗುವ ತೊಂದರೆಗಳನ್ನು, ಮನಸ್ತಾಪಗಳನ್ನು ನಿಧಾನವಾಗಿ ಚರ್ಚಿಸಿದರೆ ಖಂಡಿತವಾಗಿಯೂ ಪರಿಹಾರ ದೊರೆಯುತ್ತದೆ.

ಸಾಮಾನ್ಯವಾಗಿ ಮನೆ ಎಂದ ಮೇಲೆ, ಕುಟುಂಬ ಎಂದ ಮೇಲೆ ಒಂದೆರಡು ಮಾತು ಬಂದು ಹೋಗುವುದು ಸಹಜ. ಆದರೆ ಅದಕ್ಕಾಗಿ ದ್ವೇಷ ಮಾಡುವ ಅಗತ್ಯವಿಲ್ಲ ಎಂಬುದು ನನ್ನ ಅನಿಸಿಕೆ. ವ್ಯಕ್ತಿ ಬದುಕಿದ್ದಾಗ ಇಲ್ಲಸಲ್ಲದ ಮಾತುಗಳನ್ನಾಡಿ, ಛೇಡಿಸಿ, ಅಣಕಿಸಿ, ಹೀಯ್ಯಾಳಿಸಿ, ನಿಂದಿಸಿ ಆ ವ್ಯಕ್ತಿ ಸತ್ತಾಗ ಸಂತಾಪವನ್ನು ಸೂಚಿಸುವ, ಅಯ್ಯೋ ಹೀಗಾಗಬಾರದಿತ್ತು ಎಂದು ಕಣ್ಣೀರು ಹಾಕುವ ಬದಲು, ವ್ಯಕ್ತಿ ಬದುಕಿರುವಾಗಲೇ ಒಳ್ಳೆಯ ಮಾತುಗಳನ್ನಾಡಿ ಪ್ರೋತ್ಸಾಹ ನೀಡಿದರೆ ಖಂಡಿತವಾಗಿಯೂ ಯಾವ ವ್ಯಕ್ತಿಯೇ ಆದರೂ ಏನಾದರೂ ಸಾಧನೆ ಮಾಡಬಹುದು.

ನಾಲ್ಕು ಜನ ಕುಳಿತುಕೊಂಡು ಇಲ್ಲದ ವ್ಯಕ್ತಿಯ ಬಗ್ಗೆ ಮಾತನಾಡುತ್ತಾ ಸಮಯ ವ್ಯರ್ಥ ಮಾಡುವ ಬದಲು, ಆ ಸಮಯದಲ್ಲಿ ಒಳ್ಳೆಯ ವಿಚಾರಗಳನ್ನು ಉಪಯೋಗಕ್ಕೆ ಬರುವ ಅಗತ್ಯವಾದ ಮಾಹಿತಿಗಳನ್ನು ಪರಸ್ಪರ ವಿನಿಯೋಗ ಮಾಡಿಕೊಂಡರೆ ವಿಚಾರ ಶಕ್ತಿ ಬೆಳೆಯುತ್ತದೆ. ನಮ್ಮ ಮಾತು ನಮ್ಮ ನಡವಳಿಕೆಯನ್ನು, ನಮ್ಮ ವ್ಯಕ್ತಿತ್ವವನ್ನು ತೋರಿಸುತ್ತದೆ. ನಮ್ಮ ಮಾತುಗಳು ನಾಲ್ಕು ಜನರಿಗೆ ಮಾದರಿಯಾಗಿದ್ದರೆ, ಉಪಯೋಗಕ್ಕೆ ಬರುವಂತಿದ್ದರೆ ಆ ಮಾತಿಗೆ ಸಾರ್ಥಕತೆ ಬಂದಂತಾಗುತ್ತದೆ.

ಇನ್ನು ಮುಂದಾದರೂ ಒಳ್ಳೆಯ ನುಡಿಗಳನ್ನಾಡುತ್ತಾ ಬದುಕೋಣ. ಬಸವಣ್ಣ ಹೇಳಿದಂತೆ ಲಿಂಗ ಮೆಚ್ಚಿ ಅಹುದು ಅಹುದೆನ್ನುವಂತೆ ಮಾತನಾಡದಿದ್ದರೂ, ಯಾರಿಗೂ ನೋವುಂಟು ಮಾಡದ ಹಾಗೇ, ಒಂದು ಸಣ್ಣ ಬದಲಾವಣೆ ತರುವಂತಹ ಮಾತನಾಡೋಣ. ನಾವಾಡುವ ಮಾತು ಮನಮುಟ್ಟುವಂತಿದ್ದು, ಮನೆ ಮುರಿಯದಂತಿದ್ದರೆ ನಿಜಕ್ಕೂ ನಮಗೂ, ನಮ್ಮ ಮಾತಿಗೂ ಮನ್ನಣೆ ಬರುವುದರಲ್ಲಿ ಸಂದೇಹವಿಲ್ಲ.

–ರಾಘವೇಂದ್ರ ಸಿ.ಎಸ್.
ಸಹಾಯಕ ಪ್ರಾಧ್ಯಾಪಕರು
ಹಿಂದೂಸ್ಥಾನ್ ಕಾಲೇಜು, ಮೈಸೂರು

ಪಿಯು ಕಾಲೇಜು ಉಪನ್ಯಾಸಕರಿಂದ ಹಿಂಬಾಕಿ ವಸೂಲಿ ಕೈಬಿಡಲು ಒತ್ತಾಯ

ಮೈಸೂರು, ಜೂ.6(ಎಸ್‌ಪಿಎನ್)– 2013ರಲ್ಲಿ ಪಿಯು ಕಾಲೇಜು ಉಪನ್ಯಾಸಕರಾಗಿ ನೇಮಕಗೊಂಡವರಿಂದ ವಾರ್ಷಿಕ ವೇತನ ಬಡ್ತಿಯನ್ನು ಹಿಂಬಾಕಿ ರೂಪದಲ್ಲಿ ವಸೂಲಿ ಮಾಡುವಂತೆ ಶಿಕ್ಷಣ ಇಲಾಖೆ ಹೊರಡಿಸಿರುವ ಆದೇಶ ಅವೈಜ್ಞಾನಿಕ ವಾಗಿದ್ದು, ಸರ್ಕಾರ ಕೂಡಲೇ ಹಿಂಪಡೆಯುವಂತೆ ಎಂದು ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಸರ್ಕಾರವನ್ನು ಒತ್ತಾಯಿಸಿದ್ದಾರೆ.




ಬಿ.ಇಡಿ ಮುಗಿಸಲು 991 ಮಂದಿ ಪಿಯು ಉಪನ್ಯಾಸಕರಿಗೆ 2 ವರ್ಷಗಳ ಅವಧಿಯಲ್ಲಿ ಶೇಕಡ 80% ರಷ್ಟು ಮಂದಿಗೆ ನೀಡಲಾಗಿದ್ದ ವಾರ್ಷಿಕ ವೇತನ ಬಡ್ತಿಯನ್ನು ಹಿಂಬಾಕಿ ರೂಪದಲ್ಲಿ ವಸೂಲಿ ಮಾಡಲು ಶಿಕ್ಷಣ ಇಲಾಖೆ ಹೊರಡಿಸಿರುವ ಆದೇಶ ಅವೈಜ್ಞಾನಿಕ ಎಂದು ಟೀಕಿಸಿದ್ದಾರೆ.

ಕೆಸಿಎಸ್‌ಆರ್ ನಿಯಮ ಪಾಲಿಸದೆ ಅಂದಿನ ಕೆಲವು ಅಧಿಕಾರಿಗಳು ಮಾಡಿದ ತಪ್ಪಿನಿಂದ ಉಪನ್ಯಾಸಕರು 2 ವರ್ಷದ ಬಿ.ಇಡಿ ವ್ಯಾಸಂಗ ಅವಧಿಯಲ್ಲಿ ವೇತನದಿಂದ ವಂಚಿತರಾದರು ಮತ್ತು ಶೇ 20% ರಷ್ಟು ಮಂದಿಗೆ ವ್ಯಾಸಂಗ ಅವಧಿಯ ವೇತನ ಬಡ್ತಿಯೂ ಸಿಕ್ಕಿಲ್ಲ ಎಂದು ಆರೋಪಿಸಿದ್ದಾರೆ. 2009ರಲ್ಲಿ ನೇಮಕಗೊಂಡ ಕೆಲವರಿಗೆ ಒಂದು ವರ್ಷದ ಬಿ.ಇಡಿ. ವ್ಯಾಸಂಗ ಮಾಡಲು ಪೂರ್ಣ ಪ್ರಮಾಣ ವೇತನ ಸಹಿತ ಸರ್ಕಾರ ಅವಕಾಶ ಮಾಡಿಕೊಟ್ಟಿತ್ತು. ತದ ನಂತರ 2013ರಲ್ಲಿ ನೇಮಕಗೊಂಡ 1,347 ಮಂದಿ ಉಪನ್ಯಾಸಕರಲ್ಲಿ ಸುಮಾರು 991 ಮಂದಿಗೆ ಮಾಸಿಕ ರೂ. 25 ಸಾವಿರ ಶಿಷ್ಯ ವೇತನ ನೀಡಿ, ಕೆಸಿಎಸ್‌ಆರ್ ನಿಯಮಕ್ಕೆ ವಿರುದ್ಧವಾಗಿ ಬಿ.ಇಡಿ, ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಿದ್ದು ದೋಷ ಪೂರಿತ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. 2013ರಲ್ಲಿ ನೇಮಕಗೊಂಡು, ನಂತರ ಬಿ.ಇಡಿ., ಪದವಿ ಮುಗಿಸಿದ ಉಪನ್ಯಾಸಕರಿಗೆ ಸುಮಾರು 7 ವರ್ಷಗಳ ನಂತರ ಅಂದರೆ 2020ರಲ್ಲಿ ಪ್ರೊಬೇಷನರಿ ಡಿಕ್ಲರೇಷನ್ ಮಾಡಿರುವುದು ದುರದೃಷ್ಟಕರ ಸಂಗತಿ ಎಂದು ತಿಳಿಸಿದ್ದಾರೆ.

ಈ ಲೋಪಕ್ಕೆ ಇಲಾಖಾ ಅಧಿಕಾರಿಗಳೇ ಹೊಣೆಯಾಗಿಸಿ ಪಿಯು ಉಪನ್ಯಾಸಕರಿಂದ ವಾರ್ಷಿಕ ವೇತನ ಬಡ್ತಿ ಹಿಂಬಾಕಿ ವಸೂಲಾತಿ ಆದೇಶವನ್ನು ಕೂಡಲೇ ರದ್ದುಪಡಿಸುವಂತೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ಬಿಎಸ್‌ವೈ ಭೇಟಿಯಾದ ಸಿದ್ದರಾಮಯ್ಯ

ಬೆಂಗಳೂರು: ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಲಾಂಜ್‌ನಲ್ಲಿ ಮಾಜಿ ಸಿಎಂ ಯಡಿಯೂರಪ್ಪ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯ ಸೋಮವಾರ ಮಾತುಕತೆ ನಡೆಸಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಬೆಳಗಾವಿಗೆ ತೆರಳುವ ಸಂದರ್ಭದಲ್ಲಿ ಇಬ್ಬರು ನಾಯಕರು ಲಾಂಜ್‌ನಲ್ಲಿ ಭೇಟಿ ಮಾಡಿದರು. ಇದೊಂದು ಸೌಹಾರ್ದ ಭೇಟಿ ಎಂದು ಉಭಯ ನಾಯಕರ ಕಚೇರಿ ಮೂಲಗಳು ಹೇಳಿವೆ. ರಾಜ್ಯಸಭಾ ಚುನಾವಣೆಯಲ್ಲಿ ನಾಲ್ಕನೇ ಅಭ್ಯರ್ಥಿಯ ಗೆಲುವಿಗಾಗಿ ಕಾಂಗ್ರೆಸ್ ಮತ್ತು ಬಿಜೆಪಿ ತೀವ್ರ ಕಸರತ್ತು ಆರಂಭಿಸಿರುವ ವೇಳೆ ಉಭಯ ನಾಯಕರ ಮಾತುಕತೆ ನಡೆದಿದೆ. ಸೋಮವಾರ ಬೆಳಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ್ದ ಯಡಿಯೂರಪ್ಪ, ಆತ್ಮ ಸಾಕ್ಷಿಯ ಮತಗಳ ಬಗ್ಗೆ ಸಿದ್ದರಾಮಯ್ಯ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ಕೊಡಲು ಹೋಗುವುದಿಲ್ಲ ಎಂದಿದ್ದರು. ಕಾಂಗ್ರೆಸ್–ಜೆಡಿಎಸ್ ಹೊಂದಾಣಿಕೆ ಮಾಡಿಕೊಂಡಲ್ಲಿ ಬಿಜೆಪಿಗೆ ಸಮಸ್ಯೆಯಾಗುವ ವಿಚಾರಕ್ಕೆ, ಅನಗತ್ಯವಾಗಿ ನಾನ್ಯಾಕೆ ಅದರ ಬಗ್ಗೆ ಮಾತಾಡಲಿ ಎಂದ ಅವರು ಆರ್‌ಎಸ್‌ಎಸ್ ಚಡ್ಡಿ ಸುಡುವ ಕಾಂಗ್ರೆಸ್ ಅಭಿಯಾನದ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲು ನಿರಾಕರಿಸಿದ್ದರು.



ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಜೆಡಿಎಸ್ ನೀಡಿರುವ ಕೊಡುಗೆಯನ್ನು ಇದುವರೆಗೆ ಯಾರು ನೀಡಿಲ್ಲ

- ಮಾಜಿ ಸಿಎಂ ಕುಮಾರಸ್ವಾಮಿ ಸಮರ್ಥನೆ
- ಹೆಚ್.ಕೆ.ರಾಮು ಗೆಲ್ಲಿಸಿ ಜೆಡಿಎಸ್ ಬಲಪಡಿಸಿ
- ಕರ್ನಾಟಕ ಪಬ್ಲಿಕ್ ಶಾಲೆಗಳು ನನ್ನ ಕೊಡುಗೆ



ಮೈಸೂರು, ಜೂ.6(ಎಂಕೆ)– ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ಜೆಡಿಎಸ್‌ನಿಂದಲೇ ಪದವೀಧರರ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯ. ಈ ನಿಟ್ಟಿನಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಿರುವ ಪಕ್ಷದ ಅಭ್ಯರ್ಥಿ ಹೆಚ್.ಕೆ.ರಾಮು ಅವರನ್ನು ಗೆಲ್ಲಿಸುವ ಮೂಲಕ ಜೆಡಿಎಸ್ ಪಕ್ಷವನ್ನು ಮತ್ತಷ್ಟು ಬಲಪಡಿಸುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದರು.

ಮೈಸೂರಿನ ವಿಜಯನಗರದಲ್ಲಿರುವ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೋಮವಾರ ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆಯ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಪರ ಮತಯಾಚನೆ ಮಾಡಿದ ಬಳಿಕ ಪದವೀಧರ ಮತದಾರರನ್ನುದ್ದೇಶಿಸಿ ಮಾತನಾಡಿದ ಅವರು, ಹೆಚ್.ಡಿ. ದೇವೇಗೌಡರು ಮುಖ್ಯಮಂತ್ರಿಯಾಗಿದ್ದ ವೇಳೆ ಒಂದು ಲಕ್ಷ ಅಧ್ಯಾಪಕರ ನೇಮಕಾತಿ ಮಾಡುವ ಮೂಲಕ ಐತಿಹಾಸಿಕ ಕೊಡುಗೆ ನೀಡಲಾಗಿತ್ತು ಎಂದರು.

ರಾಜ್ಯದಲ್ಲಿ ಸ್ವಾತಂತ್ರ್ಯ ಬಂದ ನಂತರ ಇದ್ದಂತಹ ಸುಮಾರು 169 ಪದವಿ ಕಾಲೇಜುಗಳಲ್ಲಿ ಕಲಾ ಮತ್ತು ವಾಣಿಜ್ಯ ಅಧ್ಯಯನ ಬಿಟ್ಟರೆ ಮತ್ಯಾವುದು ಇರಲಿಲ್ಲ. ಇದನ್ನರಿತು ವಿಜ್ಞಾನವನ್ನೂ ಅಳವಡಿಸಿ, ಸುಮಾರು 189 ಪ್ರಥಮ ದರ್ಜೆ ಕಾಲೇಜು, 540 ಜೂನಿಯರ್ ಕಾಲೇಜು, 1043 ಪ್ರೌಢ ಶಾಲೆಗಳನ್ನು ಆರಂಭಿಸಲಾಗಿತ್ತು. ಅಲ್ಲಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಆಳ್ವಿಕೆ ನಡೆಸಿರುವ ಯಾವ ಸರ್ಕಾರದಿಂದಲೂ ಶಿಕ್ಷಣ ಕ್ಷೇತ್ರಕ್ಕೆ ಇಷ್ಟು ದೊಡ್ಡಮಟ್ಟದ ಕೊಡುಗೆ ನೀಡಲು ಸಾಧ್ಯವಾಗಿಲ್ಲ ಎಂದು ಹೇಳಿದರು.

ಗೆಲ್ಲಲೇ ಬೇಕಾದ ಅನಿವಾರ್ಯತೆ ಇದೆ...

ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆ ಗೆಲ್ಲಲೇಬೇಕಾದ ಅನಿವಾರ್ಯತೆ ಇದ್ದು, ವೈಯಕ್ತಿಕವಾಗಿ ಏನೇ ಕೆಲಸವಿದ್ದರೂ ಹೆಚ್.ಕೆ.ರಾಮು ಅವರನ್ನು ಗೆಲ್ಲಿಸುವ ನಿಟ್ಟಿನಲ್ಲಿ ಕೆಲಸ ಮಾಡುವಂತೆ ಮಾಜಿ ಸಿಎಂ ಕುಮಾರಸ್ವಾಮಿ ಕರೆ ನೀಡಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರೊಂದಿಗೆ ಸಭೆ ನಡೆಸಿದ ಅವರು, ಕಾರ್ಯಕರ್ತರ ಶ್ರಮದಿಂದ ಮಾತ್ರವೇ ಚುನಾವಣೆಯಲ್ಲಿ ಗೆಲುವು ಸಾಧಿಸಲು ಸಾಧ್ಯ. ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆಗೆ ಕೆಲ ದಿನಗಳಷ್ಟೇ ಬಾಕಿ ಇದೆ. ಈಗಾಗಲೇ ಕಾರ್ಯಕರ್ತರು ನಾಲ್ಕು ಜಿಲ್ಲೆಗಳಲ್ಲಿಯೂ ವ್ಯವಸ್ಥಿತವಾಗಿ ಮತಯಾಚನೆ ಕಾರ್ಯದಲ್ಲಿ ತೊಡಗಿದ್ದು, ಉಳಿದಿರುವ ದಿನಗಳಲ್ಲಿಯೂ ಸಂಪೂರ್ಣವಾಗಿ ಮತಯಾಚನೆ ಕಾರ್ಯದಲ್ಲಿ ತೊಡಗಿಕೊಳ್ಳುವಂತೆ ಸೂಚಿಸಿದರು.

ಬಡ ಮಕ್ಕಳು ಶ್ರೀಮಂತರ ಮಕ್ಕಳ ಸರಿಸಮವಾಗಿ ಇಂಗ್ಲಿಷ್ ಕಲಿಯಬೇಕು ಎಂಬ ಉದ್ದೇಶದಿಂದ ಆರಂಭಿಸಿದ ಕೆಪಿಎಸ್ (ಕರ್ನಾಟಕ ಪಬ್ಲಿಕ್ ಸ್ಕೂಲ್) ಶಾಲೆಗಳಿಗೆ ಭಾರೀ ಬೇಡಿಕೆ ಇದೆ. 1 ಸಾವಿರ ಕೆಪಿಎಸ್ ಶಾಲೆಗಳನ್ನು ಆರಂಭಿಸಬೇಕು ಎಂದಿದ್ದೆ. ಆದರೆ ನಂತರ ಬಂದ ಸರ್ಕಾರ ಕೇವಲ ಸುಮಾರು 250 ಕೆಪಿಎಸ್ ಶಾಲೆಗಳನ್ನು ಆರಂಭಿಸಿದೆ. ಇಂದು ಶಾಲೆಗಳ ಕೊರತೆಯಿಂದ ಸಾಕಷ್ಟು ಮಕ್ಕಳಿಗೆ ಅವಕಾಶ ದೊರೆಯುತ್ತಿಲ್ಲ. ಅನುದಾನಿತ ಶಾಲಾ ಶಿಕ್ಷಕರು ನಿವೃತ್ತಿ ವೇತನ ಇಲ್ಲದೆ ಕಣ್ಣೀರು ಹಾಕುತ್ತಿದ್ದಾರೆ. ಇವತ್ತು ಸರ್ಕಾರದಲ್ಲಿ ಗುತ್ತಿಗೆ ಪದ್ಧತಿ ಹೆಚ್ಚಾಗಿದ್ದು, ಅರ್ಹತೆ ಇದ್ದರೂ ಉದ್ಯೋಗ ಪಡೆಯುವ ಅವಕಾಶದಿಂದ ವಂಚಿತರಾಗುವಂತಾಗಿದೆ ಎಂದರು.

ಕೃಷಿ ಇಲಾಖೆಯಲ್ಲಿ ಶೇ.40 ಹುದ್ದೆಗಳು ಖಾಲಿ ಇವೆ. ಆದರೆ ಅವಕಾಶ ಮಾಡಿಕೊಡದೆ ಪ್ರತಿಯೊಂದನ್ನು ದುಡ್ಡಿನಲ್ಲೇ ಅಳತೆ ಮಾಡುವ ವಾತಾವರಣ ರಾಜ್ಯದಲ್ಲಿ ನಿರ್ಮಾಣವಾಗಿದೆ. ಮನೆ–ಮಠ ಮಾರಾಟ ಮಾಡಿ ಸರ್ಕಾರಿ ಉದ್ಯೋಗ ಪಡೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರಬೇಕಾದ ಅನಿವಾರ್ಯತೆ ಇದೆ. ಶಿಕ್ಷಣ, ಉದ್ಯೋಗ ಮತ್ತು ಆರೋಗ್ಯ ಕ್ಷೇತ್ರದ ಅಭಿವೃದ್ಧಿಯನ್ನು ಹೇಗೆ ಮಾಡಬೇಕು ಎಂಬುದಕ್ಕಾಗಿ ಪಂಚರತ್ನ ಯೋಜನೆ ರೂಪಿಸಿದ್ದು, ಅನುಷ್ಠಾನಗೊಳಿಸಲಾಗುವುದು ಎಂದು ತಿಳಿಸಿದರು.

ಶಾಸಕರಾದ ಸಾ.ರಾ.ಮಹೇಶ್, ಕೆ.ಮಹದೇವ್, ಅಶ್ವಿನ್‌ಕುಮಾರ್, ವಿಧಾನ ಪರಿಷತ್ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡ, ಸಿ.ಎನ್.ಮಂಜೇಗೌಡ, ಮಾಜಿ ಸಚಿವ ಬಂಡೆಪ್ಪ ಖಾಶೆಂಪೂರ್, ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆಯ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ನಾನು ಅರ್ಥಶಾಸ್ತ್ರಜ್ಞನಲ್ಲ, ಮುಖ್ಯಮಂತ್ರಿ, ಪ್ರಧಾನಿ ಅರ್ಥಶಾಸ್ತ್ರಜ್ಞರೋ?

ಪ್ರತಾಪ್‌ಸಿಂಹಗೆ ಸಿದ್ದರಾಮಯ್ಯ ತಿರುಗೇಟು

ಮೈಸೂರು, ಜೂ. 6(ಎಂಟಿವೈ)–ಹೌದು ನಾನು ವಕೀಲ, ಅರ್ಥಶಾಸ್ತ್ರಜ್ಞನಲ್ಲ ಆದರೆ ನೀವು, ನಿಮ್ಮ ಮುಖ್ಯಮಂತ್ರಿ ಹಾಗೂ ಪ್ರಧಾನಮಂತ್ರಿ ಅರ್ಥಶಾಸ್ತ್ರಜ್ಞರೋ... ಇದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಸದ ಪ್ರತಾಪ ಸಿಂಹ ಅವರಿಗೆ ನೀಡಿದ ತಿರುಗೇಟು.

ತಾಲೂಕು ಕೋರ್ಟ್‌ನಲ್ಲಿ ಪ್ರಾಕ್ಟೀಸ್ ಮಾಡಿಕೊಂಡಿದ್ದ ಸಿದ್ದರಾಮಯ್ಯ ಅವರಿಗೆ ಎಕಾನಮಿ ಬಗ್ಗೆ ಏನ್ ಗೊತ್ತು ಎಂದು ಪ್ರಶ್ನಿಸಿದ್ದ ಸಂಸದ ಪ್ರತಾಪಸಿಂಹ ಹೇಳಿಕೆಗೆ ಖಾರವಾಗಿಯೇ ಇಂದು ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ನಾನು ಅರ್ಥಶಾಸ್ತ್ರಜ್ಞನಲ್ಲ, ವಕೀಲ. ತಾಲೂಕು ಅಥವಾ ಹೈಕೋರ್ಟ್‌ನಲ್ಲಿ ಪ್ರಾಕ್ಟೀಸ್ ಮಾಡಿಲ್ಲ. ಜಿಲ್ಲಾ ಕೋರ್ಟ್‌ನಲ್ಲಿ ಪ್ರಾಕ್ಟೀಸ್ ಮಾಡಿದ್ದೇನೆ. ಪ್ರತಾಪಸಿಂಹ ವಕೀಲರಾ? ಅಥವಾ ಅರ್ಥಶಾಸ್ತ್ರಜ್ಞರೋ? ಮುಖ್ಯ ಮಂತ್ರಿ, ಪ್ರಧಾನಮಂತ್ರಿ ಅರ್ಥಶಾಸ್ತ್ರಜ್ಞರಾ? ಎಂದು ಪ್ರಶ್ನಿಸಿದರಲ್ಲದೆ, ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಿದ ಅನುದಾನದಲ್ಲಿ ಕಡಿತ ಮಾಡಿರುವುದಕ್ಕೆ ನಾನು ಹೇಳಿರುವುದು ಸರಿ, ಇಲ್ಲ ಎನ್ನುವುದು ಆತನಿಗೇನು ಗೊತ್ತಾಗುತ್ತದೆ. ಅವನೇನು ಅರ್ಥಶಾಸ್ತ್ರಜ್ಞನಾ ಎಂದು ಏಕವಚನದಲ್ಲೇ ಕಿಡಿಕಾರಿದರು.

ಸುಳ್ಳು ಹೇಳಿಕೊಂಡು ತಿರುಗಾಡುತ್ತಿದ್ದಾನೆ: ಸಂಸದನಾಗಿ ಎಂಟು ವರ್ಷ ಪೂರೈಸಿರುವ ಪ್ರತಾಪ ಸಿಂಹ, ಏನು ಕೆಲಸ ಮಾಡಿದ್ದಾರೆ. ಯಾವುದಾದರೂ ಒಂದು ಹೇಳಿಕೊಳ್ಳುವಂತಹ ಕೆಲಸ ಮಾಡಿದ್ದಾರೆಯೇ? ಮೈಸೂರಿಗೆ ಅವರ ಕೊಡುಗೆ ಏನು? ಸುಳ್ಳು ಹೇಳುತ್ತಾ ಕಾಲ ಕಳೆಯುತ್ತಿದ್ದಾನೆ. ಅವರ ಪ್ರಕಾರ ನಗರಕ್ಕೆ ನಿರ್ದಿಷ್ಟವಾದ ಕೊಡುಗೆ ನೀಡಿದ್ದರೆ ತಿಳಿಸಲಿ ಎಂದು ಸವಾಲು ಹಾಕಿದರು.

ಮೈಸೂರಲ್ಲಿ ಜಿಲ್ಲಾಸ್ಪತ್ರೆ, ಜಿಲ್ಲಾಡಳಿತ ಭವನ, ಜಯದೇವ ಆಸ್ಪತ್ರೆ, ಮಹಾರಾಣಿ ವಾಣಿಜ್ಯ ಕಾಲೇಜು, ಡಾ.ಅಂಬೇಡ್ಕರ್ ಭವನ, ದಶಪಥ ರಸ್ತೆ ಸೇರಿದಂತೆ ಎಲ್ಲಾ ಯೋಜನೆಗಳನ್ನು ನಾನು ಮುಖ್ಯಮಂತ್ರಿ ಆಗಿದ್ದಾಗ ಮಾಡಿದ್ದೇನೆ. ಅವರು ಯಾವುದಾದರೂ ಒಂದು ಮಾಡಿದ್ದಾರೆಯೇ? ನಾನು ಅವರೊಂದಿಗೆ ಬಹಿರಂಗ ಚರ್ಚೆಗೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಅವರನ್ನು ಕಳುಹಿಸುತ್ತೇನೆ. ಒಂದೇ ವೇದಿಕೆಯಲ್ಲಿ ಅವರೊಂದಿಗೆ ವಾದ ಮಾಡಲಿ. ಯಾರು ಸರಿ, ತಪ್ಪು ಗೊತ್ತಾಗುತ್ತೆ.

ನಾನು ಮುಖ್ಯಮಂತ್ರಿಯಾಗಿದ್ದ ವೇಳೆ ಆಸ್ಕರ್ ಫರ್ನಾಂಡೀಸ್ ಅವರು ಕೇಂದ್ರ ಭೂ ಸಾರಿಗೆ ಸಚಿವರಾಗಿದ್ದರು, ಆಗ ಮೈಸೂರು– ಬೆಂಗಳೂರು ರಸ್ತೆಯನ್ನು ರಾಜ್ಯ ಹೆದ್ದಾರಿಯಿಂದ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೆ ಏರಿಸಿದ್ದು. ಅದರಿಂದಾಗಿಯೇ ದಶಪಥ ರಸ್ತೆಯಾಗಿ ಮಾರ್ಪಡಿಸುವ ಕಾಮಗಾರಿ ನಡೆಯುತ್ತಿದೆ. ಪ್ರತಾಪ ಸಿಂಹ ವ್ಯಾಪ್ತಿಗೆ ಮೈಸೂರು–ಬೆಂಗಳೂರು ರಸ್ತೆ ಎಷ್ಟು ಕಿಲೋಮೀಟರ್ ಬರುತ್ತದೆ ಎಂದು ತಿಳಿದರೆ ಗೊತ್ತಾಗುತ್ತದೆ ಅವರು ಎಷ್ಟು ಸುಳ್ಳು ಹೇಳುತ್ತಿದ್ದಾರೆ ಎಂದರು.

ಪರಿಷ್ಕೃತ ಪಠ್ಯಕ್ರಮವನ್ನೇ ತಿರಸ್ಕರಿಸಬೇಕು: ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಯನ್ನು ವಿಸರ್ಜಿಸಿದರೆ ಮಾತ್ರ ಸಾಲದು. ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಪರಿಷ್ಕರಿಸಿರುವ ಪಠ್ಯಕ್ರಮವನ್ನೇ ತಿರಸ್ಕರಿಸಬೇಕು. ಪರಿಷ್ಕೃತ ಪಠ್ಯಕ್ರಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಸಂವಿಧಾನ ಶಿಲ್ಪಿ ಎನ್ನುವ ಪದವನ್ನೇ ಪಠ್ಯದಿಂದ ತೆಗೆದಿದ್ದಾರೆ. ಅವರು ಸಂವಿಧಾನ ಶಿಲ್ಪಿ ಅಲ್ಲವೇ ಎನ್ನುವುದನ್ನು ಬಿಜೆಪಿಯವರು ಹೇಳಿಬಿಡಲಿ. ಬಿಜೆಪಿಯವರು ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ್ದಾರೆ. ಜೊತೆಗೆ ರಾಷ್ಟ್ರಕವಿ ಕುವೆಂಪು, ಬಸವಣ್ಣ, ನಾರಾಯಣಗುರು, ಭಗತ್ ಸಿಂಗ್ ಅವರಿಗೂ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿದರು. ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ವಿಸರ್ಜಿಸುವುದಕ್ಕೆ ಮಾತ್ರ ಸೀಮಿತವಾಗಬಾರದು. ಈ ಹಿಂದೆ ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ ನೀಡಿದ್ದ ಪಠ್ಯಪುಸ್ತಕಗಳನ್ನು ಮುಂದುವರೆಸಬೇಕು. ಮಕ್ಕಳಿಗೆ ಕೋಮುವಾದಿ ವಿಚಾರವನ್ನು ಬಿತ್ತುವ ಕೆಲಸ ಮಾಡಬಾರದು ಎಂದು ಒತ್ತಾಯಿಸಿದರು.



ಅಂತರ್‌ದೃಷ್ಟಿ ಬ್ರೈನ್ ಅಕಾಡೆಮಿ, ಪರಮಹಂಸ ಯೋಗ ವಿದ್ಯಾಲಯ, ಮೈಸೂರು ಯೋಗ ಒಕ್ಕೂಟ, ಮೈಸೂರು ಯೋಗ ಅಸೋಸಿಯೇಷನ್ ಮತ್ತು ಮೈಸೂರು ಮಹಿಳಾ ಪತಂಜಲಿ ಯೋಗ ಸಮಿತಿ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಉದ್ಯಮಿ ಹೆಚ್.ಎನ್. ರವಿಕುಮಾರ್ ಅವರಿಗೆ 'ಸಮಾಜಸೇವಾ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಚಿತ್ರದಲ್ಲಿ ಎಂ.ಕಲಾವತಿ, ಶಿವಪ್ರಕಾಶ್, ಯೋಗಾಚಾರ್ಯ ಡಾ. ಬಿ.ಪಿ. ಮೂರ್ತಿ, ಎ.ಯು. ಪ್ರಕಾಶ್, ರಾಮಚಂದ್ರೇಗೌಡ, ನರೇಂದ್ರಕುಮಾರ್ ಅವರಿದ್ದಾರೆ.

ಡಿಸಿಸಿ ಬ್ಯಾಂಕ್ ಸಿಬ್ಬಂದಿ ಮನೆ ಬಾಗಿಲು ಮೀಟಿ ಚಿನ್ನಾಭರಣ ಕಳವು

ಮಂಡ್ಯ, ಜೂ.6– ಡಿಸಿಸಿ ಬ್ಯಾಂಕ್ ಸಿಬ್ಬಂದಿಯ ಮನೆಯ ಬಾಗಿಲು ಮೀಟಿ 3.80 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಮಂಡ್ಯ ಹೊರವಲಯದ ಶ್ರೀರಾಮನಗರ ಬಡಾವಣೆಯಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಪಿ. ದಿನೇಶ್ (44) ಕುಟುಂಬ ಸಮೇತರಾಗಿ ಬೆಂಗಳೂರಿನ ಸಂಬಂಧಿಕರ ಮನೆಗೆ ಜೂ.3ರಂದು ತೆರಳಿದ್ದು, ಜೂ.4ರಂದು ಬೆಳಗ್ಗೆ ವಾಪಸ್ಸಾದಾಗ ಮನೆಯ ಬಾಗಿಲು ಮೀಟಿ ಕಳವು ಮಾಡಿರುವುದು ಗೊತ್ತಾಗಿದೆ. ಖದೀಮರು 2 ಬೆಳ್ಳಿ ತಟ್ಟೆ, ಬೆಳ್ಳಿ ಚೊಂಬು, 2 ಬೆಳ್ಳಿ ದೀಪ, 8 ಬೆಳ್ಳಿ ಲೋಟ, ಕುಂಕುಮ ಬಟ್ಟಲು, ಕಾಲುಚೈನ್, 10 ಗ್ರಾಂ ತೂಕದ ಚಿನ್ನದ ಸರ ಕಳವು ಮಾಡಿದ್ದಾರೆ. ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಸನ್ಮತಿ ಲೇಡಿಸ್ ಫೌಂಡೇಶನ್ ವತಿಯಿಂದ ವಿಶ್ವ ಪರಿಸರ ದಿನದ ಅಂಗವಾಗಿ ವಿಜಯನಗರ ನಾಲ್ಕನೇ ಹಂತದ ಮುತ್ತುರಾಯ ದೇವಸ್ಥಾನದ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು.



ಪಿಎಫ್‌ಐ ಸಂಘಟನೆ ಖಾತೆಗಳನ್ನು ಜಾರಿ ನಿರ್ದೇಶನಾಲಯ (ಇಡಿ) ಮುಟ್ಟುಗೋಲು ಹಾಕಿರುವುದನ್ನು ಖಂಡಿಸಿ ಮೈಸೂರು ಜಿಲ್ಲೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಅಪರಿಚಿತ ವ್ಯಕ್ತಿ ಸಾವು

ಮೈಸೂರು, ಜೂ.6– ಮಂಡಿ ಮೊಹಲ್ಲಾ ಠಾಣೆ ವ್ಯಾಪ್ತಿಯಲ್ಲಿ ಅಪರಿಚಿತ ವ್ಯಕ್ತಿಯೊಬ್ಬನ ಶವ ಪತ್ತೆಯಾಗಿದೆ. ಎಸ್.ಆರ್.ರಸ್ತೆಯಲ್ಲಿರುವ ವೆಂಕಟೇಶ್ ಭವನ್ ನಂದಿ ವಿಗ್ರಹದ ಪಕ್ಕದಲ್ಲಿರುವ ಫುಟ್‌ಪಾತ್ ಮೇಲೆ ಸುಮಾರು 65 ವರ್ಷದ ವ್ಯಕ್ತಿ ಮೃತಪಟ್ಟಿದ್ದು, ಮೃತನ ಎಡ ಮುಂಗೈಯನ್ನು ಹೆಗ್ಗಣಗಳು ತಿಂದಿರುವ ಗಾಯದ ಗುರುತು ಇದೆ. ನೋಡಲು ಭಿಕ್ಷುಕನಂತೆ ಕಾಣುವ ಈ ವ್ಯಕ್ತಿ ಯಾವುದೋ ಕಾಯಿಲೆಯಿಂದ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಶವವನ್ನು ಮೈಸೂರಿನ ಸರ್ಕಾರಿ ಮೆಡಿಕಲ್ ಕಾಲೇಜಿನ ಶವಾಗಾರ'ದಲ್ಲಿಡಲಾಗಿದ್ದು, ವಾರಸುದಾರರು ಮೈಸೂರು ನಗರ ಪೊಲೀಸ್ ಕಂಟ್ರೋಲ್ ರೂಂ. ದೂ. 0821–2418339, 2418313ಗೆ ಸಂಪರ್ಕಿಸಲು ಪೊಲೀಸ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಾಂಗ್ರೆಸ್ ಅಭ್ಯರ್ಥಿ ಮಧು ಮಾದೇಗೌಡ ಪರ ವಿಪಕ್ಷ ನಾಯಕ ಸಿದ್ದರಾಮಯ್ಯ ಬಿರುಸಿನ ಮತಯಾಚನೆ

ವಿದ್ಯಾವರ್ಧಕ, ವಿದ್ಯಾವಿಕಾಸ ಸಂಸ್ಥೆಯಲ್ಲಿ ಪ್ರಚಾರ


ಮೈಸೂರಿನ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸೋಮವಾರ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಪರ ಮತಯಾಚಿಸಿದರು.


ವಿದ್ಯಾವಿಕಾಸ ಕಾಲೇಜಿನಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯ್‌ಕುಮಾರ್, ಅಭ್ಯರ್ಥಿ ಮಧು ಜಿ. ಮಾದೇಗೌಡ, ಮಾಜಿ ಶಾಸಕ ವಾಸು, ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಉಪಸ್ಥಿತರಿದ್ದಾರೆ.

ಮೈಸೂರು,ಜೂ.6(ಎಂಟಿವೈ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಮೈಸೂರಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಪರ ಬಿರುಸಿನ ಮತಯಾಚನೆ ಮಾಡಿದರು.

ಇಂದು ಬೆಳಗ್ಗೆ ಮೈಸೂರಿನ ವಿಜಯನಗರದಲ್ಲಿರುವ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು ಹಾಗೂ ಬನ್ನೂರು ಮುಖ್ಯ ರಸ್ತೆಯಲ್ಲಿರುವ ವಿದ್ಯಾವಿಕಾಸ ಎಂಜಿನಿಯರಿಂಗ್ ಕಾಲೇಜಿಗೆ ತೆರಳಿ ಮಧು ಜಿ.ಮಾದೇಗೌಡ ಪರ ಮತಯಾಚಿಸಿದರು.

ಕಪ್ಪು ಚುಕ್ಕಿ ಇಲ್ಲದ ಸರ್ಕಾರ: ವಿದ್ಯಾವಿಕಾಸ ಕಾಲೇಜಿನಲ್ಲಿ ಪದವಿ ಮತದಾರರ ಸಭೆಯಲ್ಲಿ ಮಾತನಾಡಿದ ಅವರು, ನನ್ನ ನೇತೃತ್ವದಲ್ಲಿ ಈ ಹಿಂದೆ ಐದು ವರ್ಷ ಪೂರ್ಣಗೊಳಿಸಿದ ಸರ್ಕಾರ ಭ್ರಷ್ಟಾಚಾರ ರಹಿತ ಸರ್ಕಾರವಾಗಿತ್ತು. ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ನಮ್ಮ ಸರ್ಕಾರದ ಕಾರ್ಯಕ್ರಮ ಹಾಗೂ ಈಗಿನ ಸರ್ಕಾರದ ಆಡಳಿತ ನೋಡಿ ಯಾವ ಸರ್ಕಾರ ಉತ್ತಮವೋ ನಿರ್ಧರಿಸಿ ಮತ ಹಾಕಿ. ಆಡಳಿತ, ಭ್ರಷ್ಟಾಚಾರದ ದೃಷ್ಟಿಯಿಂದ ನಮ್ಮ ಸರ್ಕಾರ ಉತ್ತಮ ಸರ್ಕಾರವಾಗಿದೆ. 6ನೇ ವೇತನ ಆಯೋಗ ಜಾರಿಗೊಳಿಸಿದ್ದೆ, ಇದರಿಂದಾಗಿ ಶೇ.3 ರಷ್ಟು ಸಂಬಳ ಏರಿಕೆಯಾಗಿದೆ. 10.800 ಕೋಟಿ ರೂ. ಅನುದಾನ ಇದಕ್ಕಾಗಿಯೇ ನೀಡಿದ್ದೇವೆ ಎಂದರು.

ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳಲ್ಲಿ ಯಾರು ಹಿತವರು ಎಂದು ತಿಳಿದು ಮತ ಚಲಾಯಿಸಿ. ಪದವೀಧರರಾಗಿರುವ ನೀವು ರಾಜಕೀಯವಾಗಿ ಪ್ರಬುದ್ಧತೆ ಇರುವವರಾಗಿದ್ದೀರಿ. ದೇಶ ಹಾಗೂ ರಾಜ್ಯದ ರಾಜಕಾರಣ ಗೊತ್ತಿರುವವರಾಗಿದ್ದೀರಿ. ನೀವೆಲ್ಲಾ ಯೋಚಿಸಿ ಮತ ಹಾಕುತ್ತೀರಿ ಎಂಬ ನಂಬಿಕೆಯಿದೆ ನಿರುದ್ಯೋಗ, ಬೆಲೆ ಏರಿಕೆ, ರೈತರ ಸಮಸ್ಯೆಗಳ ಬಗೆಹರಿಸುವ ನಿಟ್ಟಿನಲ್ಲಿ ಯೋಗ್ಯರನ್ನು ಆಯ್ಕೆ ಮಾಡುವಂತೆ ಕೋರಿದರು.

ಕೇಂದ್ರದಲ್ಲಿ ಅರ್ಥಶಾಸ್ತ್ರಜ್ಞರೂ ಆಗಿದ್ದ ಡಾ.ಮನಮೋಹನ್‌ಸಿಂಗ್ ಪ್ರಧಾನಿ ಆಗಿ 10 ವರ್ಷದ ಆಡಳಿತ ಹಾಗೂ ಈಗಿನ 8 ವರ್ಷದ ನರೇಂದ್ರ ಮೋದಿಯವರ ಆಡಳಿತವನ್ನು ಅವಲೋಕನ ಮಾಡಿ. ಇಂದು ನಿರುದ್ಯೋಗ, ತೆರಿಗೆ, ದೇಶದ ಆರ್ಥಿಕ ಸ್ಥಿತಿಗತಿ ಸಮಸ್ಯೆ ಬಡವರು ಎದುರಿಸುತ್ತಿರುವ ಸಂಕಷ್ಟ ಅರಿತು ಮತ ಹಾಕಿ. ನರೇಂದ್ರ ಮೋದಿ 102 ಲಕ್ಷ ಕೋಟಿ ಸಾಲ ಮಾಡಿ, ಪ್ರತಿಯೊಬ್ಬರ ಮೇಲೂ 1,70 ಲಕ್ಷ ರೂ. ಸಾಲ ಹೊರಿಸಿದ್ದಾರೆ. ರಾಜ್ಯದಲ್ಲಿ ನನ್ನ ಅವಧಿಯಲ್ಲಿ 2ಲಕ್ಷದ 62 ಸಾವಿರ ರೂ. ಇದ್ದ ಸಾಲ ವನ್ನು ಬಿಜೆಪಿ ಅಧಿಕಾರಕ್ಕೆ ಬಂದು 5ಲಕ್ಷದ 40 ಸಾವಿರ ಕೋಟಿ ರೂ.ಗೆ ಹೆಚ್ಚಿಸಿದೆ. ಇದಕ್ಕೆ ಕಾರಣ ಯಾರು ಇಂತಹವರಿಗೆ ಮತ ಹಾಕಬೇಕಾ? 46 ರೂ ಇದ್ದ ಡೀಸೆಲ್ 95 ರೂ. ಆಗಿದೆ. ಮೋದಿಯವರು ಈ ಬಗ್ಗೆ ಸುಳ್ಳು ಹೇಳುತ್ತಿದ್ದಾರೆ. ಹಿಂದುತ್ವ ಹೇಳಿಕೊಂಡು ದೇಶದಲ್ಲಿ ಅಧಿಕಾರದಲ್ಲಿದ್ದಾರೆ. ರೈತರ ಬದುಕು ಹಸನಾಗಿಸಲಿಲ್ಲ. ತೆರಿಗೆ ಭಾರ ಇಳಿಸಲಿಲ್ಲ. ಬೆಲೆ ಏರಿಕೆ ಕಡಿಮೆ ಮಾಡಲಿಲ್ಲ. ಮತ್ತೆ ಅಧಿಕಾರಕ್ಕೆ ಬಂದು ಏನು ಮಾಡಿದ್ದೀರಿ ಎಂದು ಕೇಳುತ್ತಿದ್ದೇವೆ ಎಂದರು.

> ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಅಭ್ಯರ್ಥಿ ಮಧು ಜಿ.ಮಾದೇಗೌಡ, ಶಾಸಕ ತನ್ವೀರ್ ಸೇಠ್, ಮುಖಂಡ ಕೆ.ಹರೀಶ್‌ಗೌಡ ಅವರು ಆರ್‌ಎಸ್‌ಎಸ್ ಕಾರ್ಯಕರ್ತರಂತೆ ಖಾಕಿ ಪ್ಯಾಂಟ್, ಬಿಳಿ ಶರ್ಟ್ ಧರಿಸಿ ಬಂದಿದ್ದರು. ಅದರಲ್ಲೂ ಮೂವರು ಪಕ್ಕದಲ್ಲಿಯೇ ಕುಳಿತು ಗಮನ ಸೆಳೆದರು. ಆರ್‌ಎಸ್‌ಎಸ್ ಚಡ್ಡಿಗೆ ಬೆಂಕಿ ಹಚ್ಚಿದ ಹಿನ್ನೆಲೆಯಲ್ಲಿ ವಿವಾದ ಭುಗಿಲೆದ್ದಿದ್ದು ಈ ನಡುವೆ ಕಾಂಗ್ರೆಸ್ ನಾಯಕರು ಧರಿಸಿದ್ದ ಆರ್‌ಎಸ್‌ಎಸ್ ವಸ್ತ್ರ ಬಣ್ಣದ ಬಟ್ಟೆ ಗುಸುಗುಸು ಚರ್ಚೆಗೆ ಗ್ರಾಸವಾಯಿತು.

ಒಂದೇ ಸುಳ್ಳನ್ನು 10 ಬಾರಿ ಹೇಳಿ ಮಂಕಾಗಿಸುತ್ತಿದ್ದಾರೆ: ಮಾಜಿ ಶಾಸಕ ಹಾಗೂ ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರೂ ಆದ ವಾಸು ಪ್ರಾಸ್ತಾವಿಕವಾಗಿ ಮಾತನಾಡಿ, 10 ಬಾರಿ ಸುಳ್ಳನ್ನೇ ಹೇಳಿ ಹೇಳಿ ಅದನ್ನೇ ಸತ್ಯ ಮಾಡುವುದು ಬಿಜೆಪಿಯಾಗಿದೆ. ದೇಶಕ್ಕಾಗಿ ಪ್ರಧಾನಿ ಪ್ರಾಣ ತ್ಯಾಗ ಮಾಡಿದ್ದರೆ ಅದು ಕಾಂಗ್ರೆಸ್ ಮಾತ್ರ, ರಾಜ್ಯಕ್ಕೆ ಸಿಇಟಿ ಬಂದಿದ್ದರೆ ಅದಕ್ಕೆ ಕಾರಣ ವೀರಪ್ಪ ಮೊಯ್ಲಿ ಸರ್ಕಾರದ ಕೊಡುಗೆ ಆಗಿದೆ. ಮಹಾರಾಣಿ ಕಾಲೇಜು, ಹೆರಿಗೆ ಆಸ್ಪತ್ರೆ, ಜಯದೇವ ಆಸ್ಪತ್ರೆ ಹೀಗೆ ಸಾವಿರಾರು ಕೋಟಿ ರೂ.ಗಳನ್ನು ಆರೋಗ್ಯ, ಶಿಕ್ಷಣ ಕ್ಷೇತ್ರ ಕ್ಕೆ ಸಿದ್ದರಾಮಯ್ಯ ಅವಧಿಯಲ್ಲಿ ನೀಡಿದ್ದು, ಅಂತಹ ಅಭಿವೃದ್ಧಿ ಕೆಲಸಕ್ಕೆ ಕಾಂಗ್ರೆಸ್‌ಗೆ ಮತ ನೀಡಿ ಎಂದರು.

ಅಭ್ಯರ್ಥಿ ಮಧು ಜಿ.ಮಾದೇಗೌಡ ಮಾತನಾಡಿ, ತಂದೆ ಮಾಡಿರುವ ರೈತಪರ ಚಳವಳಿ ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ ನಾನು ಸಹ ಹಲವು ವರ್ಷಗಳಿಂದ ಈ ಹೋರಾಟದಲ್ಲಿ ಭಾಗವಹಿಸುತ್ತಿದ್ದೇನೆ. ನನಗೆ ಮೊದಲ ಪ್ರಾಶಸ್ತ್ಯದ ಮತ ನೀಡಬೇಕೆಂದು ಕೋರಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಶಾಸಕ ತನ್ವೀರ್ ಸೇಠ್, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಗುಂಡಪ್ಪಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ವಿದ್ಯಾವಿಕಾಸ ಕಾಲೇಜಿನಲ್ಲಿ ನಡೆದ ಪ್ರಚಾರ ಸಭೆಯಲ್ಲಿ ವಿದ್ಯಾ ವಿಕಾಸ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಕವೀಶ್ ಗೌಡ, ಮುಖಂಡರಾದ ಕೆ.ಮರಿಗೌಡ, ಕೆ.ಹರೀಶ್‌ಗೌಡ, ಬಸವರಾಜು, ರಘು, ಮಾಧ್ಯಮ ವಕ್ತಾರ ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.

ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು ಮಾಸ್ತಿ

ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ.ಎಂ.ಎನ್.ನಂದೀಶ್ ಹಂಚೆ ಅಭಿಮತ

ಮೈಸೂರು, ಜೂ.6(ಎಸ್‌ಪಿಎನ್)– ಕನ್ನಡ ಸಾರಸ್ವತ ಲೋಕದಲ್ಲಿ 'ಮಾಸ್ತಿ – ಕನ್ನಡ ಆಸ್ತಿ' ಎಂದೇ ಚಿರ ಪರಿಚಿತರು. ಸಣ್ಣ ಕಥೆಗಳ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕೀರ್ತಿ ಮಾಸ್ತಿ ಅವರಿಗೆ ಸಲ್ಲುತ್ತದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಎಂ.ಎನ್. ನಂದೀಶ್ ಹಂಚೆ ಅಭಿಪ್ರಾಯಪಟ್ಟರು.



ಮೈಸೂರು ಆದಿಚುಂಚನಗಿರಿ ರಸ್ತೆಯಲ್ಲಿರುವ ಮಾಸ್ತಿ ವೆಂಕಟೇಶ ಅಯ್ಯಂಗಾರ್ ವೃತ್ತದಲ್ಲಿ ಅಪೂರ್ವ ಸ್ನೇಹ ಬಳಗ ಹಾಗೂ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಸಹಯೋಗದೊಂದಿಗೆ ನಡೆದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಮಾಸ್ತಿ ಸಣ್ಣ ಕಥೆಗಳ ಜನಕ ಎಂದೇ ಹೆಸರುವಾಸಿಯಾಗಿದ್ದಾರೆ. ಇವರು ರಚಿಸಿದ ಚಿಕ್ಕವೀರ ರಾಜೇಂದ್ರ ಕೃತಿಗೆ ಜ್ಞಾನಪೀಠ ಪ್ರಶಸ್ತಿ ನೀಡಿ ಕೇಂದ್ರ ಸರ್ಕಾರ ಗೌರವಿಸಿದೆ. ಹೀಗೆ ಹತ್ತು– ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಮಾಸ್ತಿ ಅವರು ಹಲವು ಕೃತಿಗಳನ್ನು ರಚಿಸಿದ್ದಾರೆ. ಮೈಸೂರು ಮಹಾರಾಜರಿಂದಲೂ ಗೌರವಕ್ಕೆ ಪಾತ್ರರಾಗಿದ್ದಾರೆ. ಅಲ್ಲದೆ ಸಾಹಿತ್ಯ ಲೋಕದಲ್ಲಿ ಸವ್ಯಸಾಚಿಯಂತೆ ಕೆಲಸ ಮಾಡಿದವರು. ಇವರು ತಮ್ಮ ಹದಿನೆಂಟನೆ ವಯಸ್ಸಿಗೆ 'ರಂಗನ ಮದುವೆ' ಎಂಬ ಕಥೆಯನ್ನು ಬರೆದವರು. ಆಗಿನ ಮೈಸೂರು ಪ್ರಾಂತ್ಯದಲ್ಲಿ ಐಸಿಎಸ್ ಪರೀಕ್ಷೆಯನ್ನು ಪಾಸು ಮಾಡಿ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ ಎಂದು ತಿಳಿಸಿದರು.

ನಗರ ಪಾಲಿಕೆ ಸದಸ್ಯ ಎಂ.ಸಿ ರಮೇಶ್ ಮಾತನಾಡಿ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ರಚಿಸಿರುವ ಸಾಹಿತ್ಯ ಮುಂದಿನ ಪೀಳಿಗೆಗೂ ಆಸ್ತಿಯಾಗಿದೆ. 'ಮಾಸ್ತಿ ಕನ್ನಡದ ಆಸ್ತಿ' ಎಂಬ ಮಾತು ನಿಜವಾಗಬೇಕಾದರೆ ಪ್ರತಿಯೊಬ್ಬ ಕನ್ನಡಿಗರು ಅವರ ಸಾಹಿತ್ಯವನ್ನು ಓದಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು. ಈ ವೇಳೆ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ರಮೇಶ್ ಗೌಡ, ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ಉಪಾಧ್ಯಕ್ಷ ರಾಕೇಶ್ ಭಟ್, ಸುಚೀಂದ್ರ, ಚಂದ್ರು, ವೆಂಕಟೇಶ್ ದಾಸ, ಗೋಪಾಲ್ ಹಾಗೂ ಇನ್ನಿತರರು ಹಾಜರಿದ್ದರು.

ಆರ್‌ಎಸ್‌ಎಸ್, ಬಿಜೆಪಿ ವಿರುದ್ಧದ ಸಿದ್ದರಾಮಯ್ಯ ಹೋರಾಟಕ್ಕೆ ವಾಟಾಳ್ ನಾಗರಾಜ್ ಬೆಂಬಲ

ಮೈಸೂರು, ಜೂ.6(ಎಸ್‌ಬಿಡಿ)– ಬಿಜೆಪಿ ಹಾಗೂ ಆರ್‌ಎಸ್‌ಎಸ್ ವಿರುದ್ಧ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೋರಾಟವನ್ನು ನಾನು ಬೆಂಬಲಿಸುತ್ತೇನೆ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ತಿಳಿಸಿದರು.



ಚುನಾವಣಾ ಭ್ರಷ್ಟಾಚಾರ ತಡೆಯುವಂತೆ ಆಗ್ರಹಿಸಿ ಮೈಸೂರಿನ ಶ್ರೀ ಜಯಚಾಮರಾಜ ಒಡೆಯರ್ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಪೊಲೀಸರ ಸಮವಸ್ತ್ರ ಚಡ್ಡಿ ಇತ್ತು. ನಾನು ಹೋರಾಟ ಮಾಡಿದ್ದರ ಪರಿಣಾಮ 1967ರಲ್ಲಿ ಅಂದಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರು ಪೊಲೀಸರಿಗೆ ಪ್ಯಾಂಟ್ ಸಮವಸ್ತ್ರ ಮಾಡಿದರು. ಈಗ ಆರ್‌ಎಸ್‌ಎಸ್‌ನವರು ಚಡ್ಡಿ ಬಿಟ್ಟು ಪ್ಯಾಂಟ್ ಹಾಕಿಕೊಳ್ಳುತ್ತಿದ್ದಾರೆ. ಇದು ಚಡ್ಡಿ ಸುಡುವವರಿಗೂ ಗೊತ್ತಿಲ್ಲ. ಹಾಗಾಗಿ ಚಡ್ಡಿ ಸುಡುವುದಕ್ಕಿಂತ ತತ್ವ ಸಿದ್ಧಾಂತಗಳನ್ನು ಸುಡುವುದು ಒಳ್ಳೆಯದು. ಸಿದ್ದರಾಮಯ್ಯನವರು ಪ್ರಬುದ್ಧ ರಾಜಕಾರಣಿ, ಅವರ ಈ ಸಂಬಂಧದ ಅವರ ಹೋರಾಟಕ್ಕೆ ನನ್ನ ಬೆಂಬಲವಿದೆ ಎಂದರು.

ಮುಟ್ಟಿದರೆ ಜೋಕೆ: ರಾಷ್ಟ್ರಕವಿ ಕುವೆಂಪು ಅವರ ರಚನೆಯ ನಾಡಗೀತೆಯಲ್ಲಿ ಒಂದೇ ಒಂದು ಸೊನ್ನೆ, ಪೂರ್ಣ ವಿರಾಮ ತೆಗೆದರೂ ರಾಜ್ಯದಲ್ಲಿ ಕ್ರಾಂತಿಯಾಗುತ್ತದೆ. ಬೀದಿ ಬೀದಿಯಲ್ಲಿ ಹೋರಾಟ ನಡೆಯುತ್ತದೆ ಎಚ್ಚರಿಕೆ. ಕುವೆಂಪು ಅವರ ಸರ್ವಜನಾಂಗದ ಶಾಂತಿಯ ತೋಟ ಆರ್‌ಎಸ್‌ಎಸ್‌ನವರಿಗೆ ನುಂಗಲಾರದ ತುತ್ತಾಗಿದೆ. ಬೇರೆ ಧರ್ಮಗಳ ಹೆಸರು ತೆಗೆಯಬೇಕು ಎನ್ನುವುದು ಆರ್‌ಎಸ್‌ಎಸ್ ಉದ್ದೇಶ ಎಂದು ಕಿಡಿಕಾರಿದರು.

ಹಣ–ಜಾತಿಯಿಂದ ಸೋತಿದ್ದೇನೆ: ಚುನಾವಣೆಗಳಲ್ಲಿ ಹಣ ಮತ್ತು ಜಾತಿ ತುಂಬಾ ಪ್ರಮುಖವಾಗಿವೆ. ನಾನು ಅನೇಕ ಚುನಾವಣೆಯಲ್ಲಿ ಸೋತಿದ್ದೇನೆ. ಆದರೆ ನನ್ನ ತತ್ವ ಸಿದ್ಧಾಂತ ಬಿಟ್ಟಿಲ್ಲ. ಚುನಾವಣಾ ಭ್ರಷ್ಟಾಚಾರ ತೊಲಗಲೇಬೇಕು. ಪರಿಷತ್ ಚುನಾವಣೆಯಲ್ಲಿ ಪದವೀಧರ ಮತದಾರರು ಯಾವುದೇ ಆಮಿಷದ ಸೋಂಕಿಗೆ ಬಲಿ ಆಗಬಾರದು. ಸತ್ಯ, ಪ್ರಾಮಾಣಿಕತೆ ತತ್ವಸಿದ್ಧಾಂತ ನಿಮ್ಮ ಮೂಲ ಧ್ಯೇಯ ಆಗಿರಬೇಕು. ಪದವೀಧರರ ಸಂಕಷ್ಟಗಳ ಬಗ್ಗೆ ಚರ್ಚೆ ಮಾಡುವ ಯೋಗ್ಯರನ್ನು ಆಯ್ಕೆ ಮಾಡಬೇಕು. ಈ ನಿಟ್ಟಿನಲ್ಲಿ ಪ್ರಾಮಾಣಿಕನಾಗಿ ಕೆಲಸ ಮಾಡುವ ನನಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ, ಆಯ್ಕೆ ಮಾಡಬೇಕು ಎಂದು ವಾಟಾಳ್ ನಾಗರಾಜ್ ಮನವಿ ಮಾಡಿಕೊಂಡರು.

ಪ್ರಧಾನಿ ಮೋದಿ ಸ್ವಾಗತಕ್ಕೆ ಸಿಂಗಾರಗೊಳ್ಳುತ್ತಿವೆ ಮೈಸೂರಿನ ರಸ್ತೆಗಳು

ಮೈಸೂರು, ಜೂ.6(ಆರ್‌ಕೆ)– ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಆಗಮಿಸುತ್ತಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಲು ಮೈಸೂರಿನ ರಸ್ತೆಗಳು ಸಿಂಗಾರಗೊಳ್ಳುತ್ತಿವೆ.





ರಸ್ತೆ ಮಳೆ ನೀರು ಚರಂಡಿ, ಒಳ ಚರಂಡಿ, ಫುಟ್‌ಪಾತ್‌ಗಳ ಸ್ವಚ್ಛತಾ ಕಾರ್ಯವನ್ನು ಮೈಸೂರು ಮಹಾನಗರ ಪಾಲಿಕೆ ಸಮರೋಪಾದಿಯಲ್ಲಿ ಕೈಗೆತ್ತಿಕೊಂಡಿದೆ. ಅದರಿಂದ ಪ್ರಧಾನಿಗಳ ಆಗಮನದಿಂದಲಾದರೂ ರಸ್ತೆ ಕಾಮಗಾರಿ ಕೈಗೆತ್ತಿಕೊಂಡಿರುವುದರಿಂದ ನಾಗರಿಕರಿಗೂ ಅನುಕೂಲ ವಾಗಲಿದೆ.

ಮೈಸೂರು ಅರಮನೆ ಸುತ್ತಮುತ್ತಲಿನ ಪ್ರದೇಶ, ಪ್ರಧಾನಿಗಳು ಸಂಚರಿಸುವ ಮಾರ್ಗ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಮಳೆ ನೀರು ಚರಂಡಿಗಳಲ್ಲಿ ಬೆಳೆದಿರುವ ಗಿಡ ಗಂಟೆಗಳು, ಒಳ ಚರಂಡಿಗಳಲ್ಲಿ ತುಂಬಿರುವ ಹೂಳು ತೆಗೆದು ಸ್ವಚ್ಛಗೊಳಿಸಲಾಗುತ್ತಿದೆ. ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಹಗಲು–ರಾತ್ರಿ ಸಮರೋಪಾದಿಯಲ್ಲಿ ಕಾಮಗಾರಿ ನಡೆಸುತ್ತಿದ್ದಾರೆ.

ಪ್ರಧಾನ ಮಂತ್ರಿಗಳು ಸಾಗುವ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣ, ನಂಜನಗೂಡು ರಸ್ತೆ, ಪ್ರಧಾನಿ ವಾಸ್ತವ್ಯ ಹೂಡಲಿರುವ ನಜರ್‌ಬಾದಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ರ್‍ಯಾಡಿಸನ್ ಬ್ಲ್ಯೂ ಪ್ಲಾಜಾ ಹೋಟೆಲ್ ಸುತ್ತ ಮುತ್ತಲ ರಸ್ತೆ ರಿಪೇರಿ, ಸ್ವಚ್ಛತಾ ಕೆಲಸ ಭರದಿಂದ ಸಾಗಿದೆ. ಜೂ. 20ರಂದು ಸಂಜೆ ವಿಶೇಷ ವಿಮಾನದಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವ ನರೇಂದ್ರ ಮೋದಿ ಅವರು ರಸ್ತೆಯ ಮೂಲಕ ಕಾರಿನಲ್ಲಿ ಬಂದು ರ್‍ಯಾಡಿಸನ್ ಬ್ಲ್ಯೂ ಪ್ಲಾಜಾ ಹೋಟೆಲ್‌ನಲ್ಲಿ ಅಂದು ರಾತ್ರಿ ವಾಸ್ತವ್ಯ ಹೂಡುವರು.

ಮರುದಿನ ಜೂ.21ರಂದು ಮುಂಜಾನೆ ಅರಮನೆ ಆವರಣದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಭಾಗವಹಿಸುವ ಪ್ರಧಾನಿಗಳು, ನಂತರ ಮಾನಸ ಗಂಗೋತ್ರಿ ಆವರಣದಲ್ಲಿರುವ ಅಖಿಲ ಭಾರತ ವಾಕ್ ಮತ್ತು ಶ್ರವಣಸಂಸ್ಥೆ (AIISH) ಗೂ ಭೇಟಿ ನೀಡುವ ಸಾಧ್ಯತೆ (ಈ ಕಾರ್ಯಕ್ರಮ ಅಧಿಕೃತವಾಗಿ ನಿಗದಿಯಾಗಿಲ್ಲ) ಇರುವುದರಿಂದ ಎಂಜಿ ರಸ್ತೆ, ಬೋಗಾದಿ ರಸ್ತೆಗಳಲ್ಲೂ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಅತೀ ಗಣ್ಯರು ಸಾಗುವ ರಸ್ತೆಗಳಿಗೆ ಡಾಂಬರೀಕರಣ, ಫುಟ್‌ಪಾತ್ ಒತ್ತುವರಿ ತೆರವು ಮೀಡಿಯನ್ ಸ್ವಚ್ಛತೆ, ಕರ್ಬ್ ಸ್ಟೋನ್‌ಗಳಿಗೆ ಬಣ್ಣ ಬಳಿಯುವುದು, ಬೀದಿದೀಪ ಅಳವಡಿಕೆಯಂತಹ ಕಾಮಗಾರಿಗಳು ತೀವ್ರ ಗತಿಯಿಂದ ಸಾಗಿದೆ. ಪಾಲಿಕೆ ಪೌರ ಕಾರ್ಮಿಕರ ಜೊತೆಗೆ ಬೇರೆಡೆಯಿಂದಲೂ ಕೆಲಸಗಾರರನ್ನು ಕರೆತಂದು ಮಳೆ ನೀರು ಮತ್ತು ಒಳಚರಂಡಿ ಸ್ವಚ್ಛತಾ ಕೆಲಸವನ್ನು ಹಗಲು–ರಾತ್ರಿಯೆನ್ನದೇ ಮಾಡಿಸುತ್ತಿರುವ ಪಾಲಿಕೆ ಅಧಿಕಾರಿಗಳು, ಫುಟ್‌ಪಾತ್ ಮೇಲಿನ ಪೆಟ್ಟಿಗೆ ಅಂಗಡಿ, ಜಾಹೀರಾತು ಫಲಕಗಳನ್ನು ತೆರವುಗೊಳಿಸಿ ಸ್ವಚ್ಛಮಾಡಿಸುತ್ತಿದ್ದಾರೆ.

ಸ್ವಚ್ಛತೆ, ರಸ್ತೆ ಕಾಮಗಾರಿ ಹಾಗೂ ಇನ್ನಿತರೆ ಸಿದ್ಧತಾ ಕಾರ್ಯಗಳ ಪರಿಶೀಲನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜೂ. 8ರಂದು ಮೈಸೂರಿಗೆ ಭೇಟಿ ನೀಡುತ್ತಿರುವುದರಿಂದ ಅಷ್ಟರಲ್ಲಿ ಬಹುತೇಕ ಸ್ವಚ್ಛತಾ ಕಾರ್ಯ ಪೂರ್ಣಗೊಳಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಧಾನಿಗಳು ಆಗಮಿಸುತ್ತಿರುವುದರಿಂದ ರಸ್ತೆ ಅಭಿವೃದ್ಧಿ, ಸ್ವಚ್ಛತೆ, ಫುಟ್‌ಪಾತ್ ಒತ್ತುವರಿ ತೆರವು, ರಸ್ತೆ ವಿಭಜಕಗಳಿಗೆ ಬಣ್ಣ ಬಳಿಯುವುದು, ಸರ್ಕಲ್‌ಗಳ ಸೌಂದರ್ಯೀಕರಣ ಮುಂತಾದ ಕಾಮಗಾರಿ ಕೈಗೊಳ್ಳಲು ಪಾಲಿಕೆಯಿಂದ 15 ಕೋಟಿ ರೂ. ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ತುರ್ತು ಕಾಮಗಾರಿಯಾಗಿರುವುದರಿಂದ ಈಗಾಗಲೇ ಕೆಲಸ ಆರಂಭಿಸಲಾಗಿದೆ ಎಂದು ಸಂಸದ ಪ್ರತಾಪ್‌ಸಿಂಹ ತಿಳಿಸಿದರು.

ಅದೇ ರೀತಿ ಮೈಸೂರಿನ ರಿಂಗ್ ರಸ್ತೆ ಮೀಡಿಯನ್, ಸರ್ವಿಸ್ ರಸ್ತೆ ಬದಿ ಸ್ವಚ್ಛತಾ ಕಾರ್ಯ ಆರಂಭಿಸಿದ್ದು, ರಸ್ತೆಯ ಇಕ್ಕೆಲಗಳಲ್ಲಿ ಸುರಿದಿದ್ದ ಘನ ತ್ಯಾಜ್ಯ ಮತ್ತು ಕಟ್ಟಡ ತ್ಯಾಜ್ಯವನ್ನು ತೆರವುಗೊಳಿಸಲಾಗಿದೆಯಲ್ಲದೇ, ಅಕ್ಕಪಕ್ಕದಲ್ಲಿ ತಲೆ ಎತ್ತಿದ್ದ ಪೆಟ್ಟಿಗೆ ಅಂಗಡಿ ಹಾಗೂ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಲಾಗಿದೆ ಎಂದು ಸಂಸದರು ತಿಳಿಸಿದರು.

ಒಟ್ಟಾರೆ ಪ್ರಧಾನ ಮಂತ್ರಿಗಳ ಆಗಮನದ ಹಿನ್ನೆಲೆಯಲ್ಲಿ ಮೈಸೂರಿನ ಹೃದಯ ಭಾಗ, ಮುಖ್ಯ ರಸ್ತೆ, ಜಂಕ್ಷನ್ ಸೇರಿದಂತೆ ಬಹುತೇಕ ರಸ್ತೆಗಳ ರಿಪೇರಿ, ಡಾಂಬರೀಕರಣ, ಫುಟ್ ಪಾತ್ ಮೇಲಿನ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಲಾಗುತ್ತಿದೆ.

ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ ದುರ್ಬಳಕೆ ಕಾಂಗ್ರೆಸ್ ಸಂಸ್ಕೃತಿ

• ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ್ ಕಿಡಿ • ವೈ.ವಿ.ರವಿಶಂಕರ್ ಪರ ಪ್ರಚಾರ



ಮದ್ದೂರು, ಜೂ.6– ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ ದುರ್ಬಳಕೆ ಕಾಂಗ್ರೆಸ್ ಸಂಸ್ಕೃತಿ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ್ ಕಿಡಿಕಾರಿದರು.

ತಾಲೂಕಿನ ನಿಡಘಟ್ಟ, ಕೆ.ಹೊನ್ನಲಗೆರೆ ಸೇರಿದಂತೆ ವಿವಿಧೆಡೆ ಸೋಮವಾರ ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಪ್ರಚಾರ ನಡೆಸಿ ಮಾತನಾಡಿದ ಅವರು, ಕಾಂಗ್ರೆಸ್‌ನವರು ಲೂಟಿ ಮಾಡುವ ಉದ್ದೇಶದಿಂದ ಅಧಿಕಾರಕ್ಕೆ ಬರಲು ಪ್ರಯತ್ನಿಸುತ್ತಿದ್ದಾರೆ. ಈಗಾಗಲೇ ಸಾಕಷ್ಟು ಲೂಟಿ ಮಾಡಿದ್ದಾರೆ. ಇವರಿಗೆ ಜನರ ಹಿತಕ್ಕಿಂತ ತಮ್ಮ ಹಿತವೇ ಮುಖ್ಯ. ಮುಂದಿನ ಚುನಾವಣೆಗಳಲ್ಲಿ ಇವರಿಗೆ ರಾಜ್ಯದ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

ನಾನು ಎಂದಿಗೂ ಅಧಿಕಾರ ದುರ್ಬಳಕೆ ಮಾಡಿಕೊಂಡಿಲ್ಲ. ನಾನು ತೆರೆದ ಪುಸ್ತಕ. ಯಾರು ಬೇಕಾದರೂ ತನಿಖೆ ಮಾಡಿಕೊಳ್ಳಬಹುದು ಎಂದ ಅವರು, ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಸಾಕಷ್ಟು ಅಕ್ರಮ ನಡೆದಿದೆ. ನನ್ನ ಬಗ್ಗೆ ದಾಖಲಾತಿ ಇದ್ದರೆ ಬಿಡುಗಡೆ ಮಾಡಲಿ. ಅದನ್ನು ಬಿಟ್ಟು ಕಾಂಗ್ರೆಸ್‌ನವರು ಹಿಟ್ ಅಂಡ್ ರನ್ ಮಾಡ್ಕೊಂಡು, ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ. ಇದು ಸಾಧ್ಯವಿಲ್ಲ ಎಂದರು.

ಭ್ರಷ್ಟಾಚಾರ, ಲಾಭ ಡಿ.ಕೆ.ಶಿವಕುಮಾರ್ ಬ್ರಾಂಡಿಂಗ್. ಅವರು ಲಾಭವಿಲ್ಲದೇ ಯಾವುದಾದರೂ ಕೆಲಸ ಮಾಡಿದ್ದಾರಾ ಎಂದು ಪ್ರಶ್ನಿಸಿದ ಅವರು, ಲಾಭದ ಮನುಷ್ಯ ಡಿಕೆಶಿ ಅವರ ಆಪಾದನೆಗಳಿಗೆ ಬೆಲೆ ಕೊಡುವುದಿಲ್ಲ. ಅವರೆಲ್ಲಾ ಗಾಜಿನ ಮನೆಯಲ್ಲಿರುವವರು. ಎಲ್ಲೆಲ್ಲಿ, ಏನೇನು ಸಮಸ್ಯೆ ಇದೆ ಎಂಬುದನ್ನು ಮುಟ್ಟಿ ನೋಡಿಕೊಳ್ಳಬೇಕು. ಡಿ.ಕೆ.ಶಿವಕುಮಾರ್ ಹೊಲ, ಗದ್ದೆಯಲ್ಲಿ ಯಾರೂ ಬೆಳೆಯದಷ್ಟು ಲಕ್ಷಾಂತರ ರೂ. ಬೆಳೆ ಬೆಳೆಯುತ್ತಾರೆ ಎಂದು ವ್ಯಂಗ್ಯವಾಡಿದರು.

ಆರ್‌ಎಸ್‌ಎಸ್ ಬಗ್ಗೆ ಪ್ರತಿಯೊಬ್ಬ ಭಾರತೀಯನಿಗೂ ಅಭಿಮಾನವಿದೆ. ಆದರೆ ಒಳ್ಳೆಯ ಕೆಲಸ ಮಾಡುತ್ತಿರುವ ಸಂಘಟನೆ ವಿರುದ್ಧ ಕಾಂಗ್ರೆಸ್ಸಿಗರು ಚಡ್ಡಿ ಸುಡುವ ಕಾರ್ಯಕ್ರಮ ಮಾಡುತ್ತಿದ್ದಾರೆ. ಕಾಂಗ್ರೆಸ್‌ನವರು ಚಡ್ಡಿ ಹಾಕಿಕೊಳ್ಳುವುದಿಲ್ಲವೇ. ಚಡ್ಡಿ ಸುಡುವ ಮೂಲಕ ಅವರನ್ನು ಅವರೇ ಸುಟ್ಟುಕೊಳ್ಳುತ್ತಿದ್ದಾರೆ. ಅವರ ಸಮಾಧಿಯನ್ನೇ ಅವರೇ ಕಟ್ಟಿಕೊಳ್ಳುತ್ತಿದ್ದಾರೆ ಎಂದು ಕಿಡಿಕಾರಿದ ಅವರು, ಕಾಂಗ್ರೆಸ್ ವಿನಾಶದ ಹಾದಿಯಲ್ಲಿ ಸಾಗುತ್ತಿದೆ. ಮುಂದೆ ಕರ್ನಾಟಕ ಕಾಂಗ್ರೆಸ್ ಮುಕ್ತವಾಗಲಿದೆ ಎಂದು ಭವಿಷ್ಯ ನುಡಿದರು.

ಕಾಂಗ್ರೆಸ್‌ಗೆ 123 ಇಲ್ಲ: ಪಿಎಸ್‌ಐ ಅಕ್ರಮದಲ್ಲಿ ಅಶ್ವಥ್ ನಾರಾಯಣ್ ಭಾಗಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್‌ನವರಿಗೆ ಓನ್, ಟು, ತ್ರಿ ಇಲ್ಲ ಎಂದು ಕಾಂಗ್ರೆಸ್ ನಾಯಕರ ವಿರುದ್ಧ ಹರಿಹಾಯ್ದರು. ಕಾಂಗ್ರೆಸ್‌ನವರಿಗೆ 123 ಇದ್ದಿದ್ದರೆ ಈ ರೀತಿ ಆರೋಪಿಸುತ್ತಿರಲಿಲ್ಲ. ಕಲ್ಪನೆ ಮಾಡಿಕೊಂಡು, ನಿರಾಧಾರವಾಗಿ ಆಪಾದನೆ ಮಾಡುತ್ತಾ ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ. ಅಕ್ರಮವನ್ನು ಹೊರ ತರಲು ನಮ್ಮ ಸರ್ಕಾರ ತನಿಖೆ ನಡೆಸುತ್ತಿದೆ. ಅವರ ಸರ್ಕಾರದಲ್ಲಿ ಇಂತಹ ಅದೆಷ್ಟೋ ಘಟನೆ ನಡೆದಿದ್ದರೂ, ತನಿಖೆ ಆಗಲಿಲ್ಲ. ಎಲ್ಲವನ್ನು ಮುಚ್ಚಿ ಹಾಕಿದ್ದಾರೆ. ಯಾರು ಯಾವ ಅಕ್ರಮದಲ್ಲಿ ತೊಡಗಿ ದ್ದಾರೋ, ಪ್ರತಿಯೊಬ್ಬರ ಅಕ್ರಮ ಆಚೆ ಬರಬೇಕು ಎಂದರು.

123 ಅಂದ್ರೆ ಅದು ಎಲ್ಲರಿಗೂ ಅರ್ಥ ಆಗುತ್ತದೆ. ಅದು ಕಾಂಗ್ರೆಸ್‌ನವರಿಗೆ ಹೇಳಿದ್ದು, 123 ಇದ್ದವರು ಯಾರು ಈ ರೀತಿ ಆರೋಪ ಮಾಡಲ್ಲ. 123 ಅಂದ್ರೆ ಏನೂ ಅನ್ನುವ ಮಾಧ್ಯಮದವರ ಪ್ರಶ್ನೆಗೆ ಅಶ್ವಥ್ ನಾರಾಯಣ್ ಈ ರೀತಿ ಪ್ರತಿಕ್ರಿಯಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಉಮೇಶ್ ಮಾತನಾಡಿ, ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಉತ್ತಮ ಅಭ್ಯರ್ಥಿಯಾಗಿದ್ದು, ಪದವೀಧರ ಮತದಾರರು ಪ್ರಧಾನಿ ಮೋದಿ ಹಾಗೂ ಸಿಎಂ ಬಸವರಾಜ ಬೊಮ್ಮಾಯಿ ಅವರ ಅಭಿವೃದ್ಧಿ ಕಾರ್ಯ ಮೆಚ್ಚಿ ಹೆಚ್ಚಿನ ಮತಗಳನ್ನು ನೀಡಿ ಗೆಲ್ಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಸಿ.ರಘು, ಪುರಸಭಾ ಸದಸ್ಯ ಮ.ನ.ಪ್ರಸನ್ನಕುಮಾರ್, ಬಿಜೆಪಿ ತಾಲೂಕು ಯುವ ಮೋರ್ಚಾ ಅಧ್ಯಕ್ಷ ಸುನೀಲ್ ಕುಮಾರ್, ತಾಲೂಕು ಮಹಿಳಾ ಮೋರ್ಚಾ ಅಧ್ಯಕ್ಷೆ ಶ್ವೇತಾ, ತಾಲೂಕು ರೈತ ಮೋರ್ಚಾ ಅಧ್ಯಕ್ಷ ಸತೀಶ್, ಹಿಂದುಳಿದ ವರ್ಗ ಮೋರ್ಚಾ ಅಧ್ಯಕ್ಷೆ ಸೌಮ್ಯ, ಟಿಎಪಿಎಂಎಸ್ ನಿರ್ದೇಶಕ ಎಚ್.ಪಿ.ಸ್ವಾಮಿ, ಮುಖಂಡರಾದ ಲಕ್ಷ್ಮಿ ಅಶ್ವಿನ್‌ಗೌಡ, ನೀತಿನ್, ಲಿಂಗರಾಜು, ಸುಧಾಕರ್, ಅಕ್ಷರಂ ವೆಂಕಟೇಶ್, ಮಧು ಇದ್ದರು.

ಖೋಖೋ: ವೆಸ್ಟರ್ನ್ ರೈಲ್ವೆ ತಂಡ ಚಾಂಪಿಯನ್



ಪಾಂಡವಪುರ, ಜೂ.6– ತಾಲೂಕಿನ ಕ್ಯಾತನಹಳ್ಳಿಯ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಮಾಜಿ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಸ್ಮರಣಾರ್ಥ ನಡೆದ ಅಖಿಲ ಭಾರತ ಆಹ್ವಾನಿತ ಪುರುಷರ ಹೊನಲು ಬೆಳಕಿನ ಖೋಖೋ ಪಂದ್ಯಾವಳಿಯಲ್ಲಿ ವೆಸ್ಟರ್ನ್ ರೈಲ್ವೆ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ನವಿ ಮುಂಬೈ ಮುನ್ಸಿಪಲ್ ಕಾರ್ಪೋರೇಷನ್ ಹಾಗೂ ವೆಸ್ಟರ್ನ್ ರೈಲ್ವೆ ತಂಡಗಳು ಪ್ರಶಸ್ತಿಗಾಗಿ ಸೆಣಸಾಡಿದವು. ಪಂದ್ಯದಲ್ಲಿ 16 ಅಂಕ ಪಡೆದು ಜಯಗಳಿಸಿದ ವೆಸ್ಟರ್ನ್ ರೈಲ್ವೆ ತಂಡ ಟ್ರೋಫಿಯೊಂದಿಗೆ 1 ಲಕ್ಷ ರೂ. ಬಹುಮಾನ ಪಡೆದರೆ, 12 ಅಂಕ ಪಡೆದು ಸೋಲು ಅನುಭವಿಸಿದ ನವಿ ಮುಂಬೈ ಮುನ್ಸಿಪಲ್ ಕಾರ್ಪೋರೇಷನ್ ತಂಡ ಟ್ರೋಫಿಯೊಂದಿಗೆ 50 ಸಾವಿರ ರೂ. ಪಡೆಯಿತು. ವೆಸ್ಟರ್ನ್ ರೈಲ್ವೆ ತಂಡದ ಆಟಗಾರ ಮಹೇಶ್ ಶಿಂಧೆ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರು. ಅತ್ಯುತ್ತಮ ದಾಳಿಕಾರ ಪ್ರಶಸ್ತಿಯನ್ನು ನವಿ ಮುಂಬೈ ಮುನ್ಸಿಪಲ್ ಕಾರ್ಪೋರೇಷನ್ ತಂಡದ ಗಜಾನನ ಮಾರುತಿ, ಸರ್ವೋತ್ತಮ ಆಟಗಾರ ಪ್ರಶಸ್ತಿಯನ್ನು ಮಹಾರಾಷ್ಟ್ರ ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡ್ ತಂಡದ ಗುಂಕಿಅರುಣ್ ಪಡೆದರು.

ಇನ್ನು ಪಂದ್ಯಾವಳಿಯಲ್ಲಿ 3ನೇ ಸ್ಥಾನ ಪಡೆದ ಮಹಾರಾಷ್ಟ್ರ ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡ್ ತಂಡ 30 ಸಾವಿರ ರೂ., 4ನೇ ಸ್ಥಾನ ಪಡೆದ ಸೆಂಟ್ರಲ್ ರೈಲ್ವೆ ಮುಂಬೈ ತಂಡ 20 ಸಾವಿರ ರೂ. ಪಡೆಯಿತು.

ಮತ ಕೇಂದ್ರಗಳ ವಿವರ ಪ್ರಕಟ

ಮಂಡ್ಯ, ಜೂ.6– ಕರ್ನಾಟಕ ವಿಧಾನಪರಿಷತ್ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಭಾರತ ಚುನಾವಣಾ ಆಯೋಗದಿಂದ ಅನುಮೋದಿಸಲ್ಪಟ್ಟ ಅಂತಿಮ ಮತ ಕೇಂದ್ರಗಳ ಪಟ್ಟಿಯನ್ನು ಜೂ.4ರಂದು ಪ್ರಕಟಿಸಲಾಗಿದೆ.

ಜಿಲ್ಲೆಗೆ ಸಂಬಂಧಿಸಿದ ಮತ ಕೇಂದ್ರಗಳ ವಿವರ ಜಿಲ್ಲಾಧಿಕಾರಿ ಕಚೇರಿ, ಉಪವಿಭಾಗಾಧಿಕಾರಿ ಕಚೇರಿ, ಹಾಗೂ ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳ ಕಚೇರಿಯಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ ಎಂದು ಚುನಾವಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾಮನಹಳ್ಳಿಯಲ್ಲಿ ವಿಶ್ವ ಪರಿಸರ ದಿನಾಚರಣೆ



ಶ್ರೀರಂಗಪಟ್ಟಣ, ಜೂ.6(ವಿನಯ್ ಕಾರೇಕುರ)– ಪರಿಸರ ಪ್ರತಿಯೊಂದು ಜೀವರಾಶಿಗೆ ಅತ್ಯಮೂಲ್ಯ ಕೊಡುಗೆ ಎಂದು ಮುಖ್ಯ ಶಿಕ್ಷಕ ಮಹದೇವಸ್ವಾಮಿ ತಿಳಿಸಿದರು.

ತಾಲೂಕಿನ ಗಾಮನಹಳ್ಳಿಯ ಜ್ಞಾನಭಾರತಿ ಪ್ರೌಢಶಾಲೆ ಆವರಣದಲ್ಲಿ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗಾಳಿ, ನೀರು, ಗಿಡ–ಮರ, ಕಾಡು ಸೇರಿದಂತೆ ಪ್ರಾಕೃತಿಕ ಸಂಪತ್ತುಗಳನ್ನು ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದರು. ಪಿಡಿಓ ಮಹಾದೇವಿ ಮಾತನಾಡಿ, ಪ್ರಸ್ತುತ ಮನುಷ್ಯನ ದುರಾಸೆಯಿಂದ ಪರಿಸರ ಹಾನಿಗೊಳಗಾಗುತ್ತಿದೆ. ಹೀಗಾಗಿ ಪ್ರತಿಯೊಬ್ಬರೂ ಪರಿಸರ ರಕ್ಷಣೆಗೆ ಮುಂದಾಗಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮಕ್ಕೂ ಮುನ್ನಾ, ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು, ಆಶಾ ಕಾರ್ಯಕರ್ತೆಯರು ಹಾಗೂ ಪಂಚಾಯಿತಿ ಅಧಿಕಾರಿಗಳು ಗ್ರಾಮದ ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸಿ ಪರಿಸರ ಜಾಗೃತಿ ಮೂಡಿಸಿದರು. ಈ ವೇಳೆ ಶಿಕ್ಷಕರಾದ ಕಾಳಯ್ಯ, ರಾಜೇಶ್, ಜನಾರ್ಧನ, ಚೌಡಪ್ಪ, ರಾಜು ಸೇರಿದಂತೆ ಗ್ರಾಮದ ಮುಖಂಡರು ಹಾಜರಿದ್ದರು.

ವಾಹನ ಹರಾಜು

ಮಂಡ್ಯ, ಜೂ.6– ಶಿವಳ್ಳಿ ಪೊಲೀಸ್ ಠಾಣಾ ಆವರಣದಲ್ಲಿ ವಾರಸುದಾರರು ಪತ್ತೆಯಾಗದ 4 ದ್ವಿಚಕ್ರ ವಾಹನಗಳನ್ನು ಜೂ.16 ರಂದು ಇ–ಹರಾಜು ಮೂಲಕ ಹರಾಜು ಮಾಡಲಾಗುವುದು. ಆಸಕ್ತರು ಮಾಹಿತಿಗೆ ಮೊ:9480804849 ಅಥವಾ https://www.mstcecommerce.com/auctionhome/index-new.jsp ವೆಬ್‌ಸೈಟ್ ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕೆ.ಆರ್.ಪೇಟೆ ಕುರುಬರ ಸಂಘಕ್ಕೆ ಪುರುಷೋತ್ತಮ್ ಅಧ್ಯಕ್ಷ



ಕೆ.ಆರ್.ಪೇಟೆ, ಜೂ.6(ಶ್ರೀನಿವಾಸ್)– ತಾಲೂಕು ಕುರುಬರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಪುರುಷೋತ್ತಮ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಕುರುಬರ ಸಂಘದ ಕಚೇರಿಯಲ್ಲಿ ನಡೆದ ಪದಾಧಿಕಾರಿಗಳ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಪುರುಷೋತ್ತಮ್, ಖಜಾಂಚಿ ಸ್ಥಾನಕ್ಕೆ ರುಕ್ಮಾಂಗದ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ನೂತನ ಅಧ್ಯಕ್ಷ ಕೆ.ಪುರುಷೋತ್ತಮ್ ಮಾತನಾಡಿ, ಸಮುದಾಯದ ಹಿರಿಯರ ಮಾರ್ಗದರ್ಶನ ಹಾಗೂ ಸಂಘದ ಸದಸ್ಯರ ಸಲಹೆ ಮೇರೆಗೆ ಸಮುದಾಯದ ಏಳಿಗೆಗೆ ಶ್ರಮಿಸುತ್ತೇನೆ ಎಂದರು.

ಈ ವೇಳೆ ಉಪಾಧ್ಯಕ್ಷ ನಿಂಗೇಗೌಡ, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಚಂದ್ರು, ನಿರ್ದೇಶಕರಾದ ಶಕುಂತಲಾ, ಕುಮಾರ್, ನಿಂಗಪ್ಪ, ಶಾಮಣ್ಣ, ಸುಮಿತ್, ಸುನೀಲ್, ಎಸ್.ಪಿ.ವಿನೋದ್‌ಕುಮಾರ್, ನಾಗೇಶ್, ರಾಜು ಸೇರಿದಂತೆ ಇತರರಿದ್ದರು.

ಪದವೀಧರರ ಚುನಾವಣೆ: ಕಾಂಗ್ರೆಸ್ ಗೆಲುವು ಅನಿವಾರ್ಯ

ಮಧು ಪರ ಕೆಪಿಸಿಸಿ ಉಪಾಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ಮತಯಾಚನೆ



ಮಳವಳ್ಳಿ, ಜೂ.6(ಮೋಹನ್‌ರಾಜ್)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಅನಿವಾರ್ಯ ಎಂದು ಕೆಪಿಸಿಸಿ ಉಪಾಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.

ತಾಲೂಕಿನ ಕಿರುಗಾವಲು ಗ್ರಾಮದಲ್ಲಿ ನಡೆದ ಕಿರುಗಾವಲು ಹೋಬಳಿ ಪದವೀಧರ ಮತದಾರರ ಹಾಗೂ ಮುಖಂಡರ ಸಭೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರ ಮತಯಾಚಿಸಿ ಮಾತನಾಡಿದ ಅವರು, ಕಾವೇರಿ ವಿಚಾರದಲ್ಲಿ ಕೊನೆವರೆಗೂ ಹೋರಾಡಿದ ಜಿ.ಮಾದೇಗೌಡರ ಋಣ ಜಿಲ್ಲೆ ಜನರ ಮೇಲಿದ್ದು, ಋಣ ತೀರಿಸುವ ಸಮಯ ಬಂದಿದೆ ಎಂಬುದನ್ನು ನಾವು ಮರೆಯಬಾರದು ಎಂದರು.

ಜಿಲ್ಲೆಯ ಎಲ್ಲಾ ಮುಖಂಡರ ಒತ್ತಾಯದಂತೆ ದಕ್ಷಿಣ ಪದವೀಧರ ಕ್ಷೇತ್ರದಿಂದ ಮಧು ಜಿ.ಮಾದೇಗೌಡ ಅವರನ್ನು ಪಕ್ಷದ ಅಭ್ಯರ್ಥಿಯನ್ನಾಗಿ ಮಾಡಿದ್ದು, 2018ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅನುಭವಿಸಿದ ಸೋಲಿನ ಸೇಡು ತೀರಿಸಿಕೊಳ್ಳಲು ಹಾಗೂ ಜಿಲ್ಲೆಗೆ ತಮ್ಮ ಹೋರಾಟದ ಮೂಲಕ ಸೇವೆ ಸಲ್ಲಿಸಿರುವ ಜಿ.ಮಾದೇಗೌಡರ ಋಣ ತೀರಿಸಲು ಅವರ ಪುತ್ರ ಮಧು ಜಿ.ಮಾದೇಗೌಡರನ್ನು ಬೆಂಬಲಿಸಬೇಕು ಎಂದರು. ಪರಿಷ್ಕೃತ ಪಠ್ಯದಲ್ಲಿ ಬಸವಣ್ಣನವರ ಅನೇಕ ಮಹತ್ವದ ವಿಷಯಗಳನ್ನು ಕೈಬಿಟ್ಟು, ಮನಬಂದಂತೆ ತಿದ್ದುಪಡಿ ಮಾಡಿ, ಅವರ ಬಗ್ಗೆ ತಪ್ಪು ಅಭಿಪ್ರಾಯ ಮೂಡುವಂತೆ ಮಾಡಿದ್ದಾರೆ. ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನ ಪಠ್ಯದಲ್ಲಿ ಕರಡು ರಚನಾ ಸಮಿತಿ ಎಂದು ಸೇರಿಸಿದ್ದು, ಮುಂದಿನ ದಿನಗಳಲ್ಲಿ ಸಂವಿಧಾನವನ್ನೇ ಮರೆ ಮಾಚುತ್ತಾರೆ. ವಿಶ್ವಕವಿ ಕುವೆಂಪು ಅವರ ವಿಚಾರಧಾರೆಗಳನ್ನು ಸಹ ಬದಲಾಯಿಸುವ ಮೂಲಕ ನಾಡಿಗೆ ದ್ರೋಹ ಮಾಡುತ್ತಿರುವ ಬಿಜೆಪಿ ಅಭ್ಯರ್ಥಿಗೆ ಪ್ರಜ್ಞಾವಂತ ಪದವೀಧರರು ಮತ ನೀಡಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಮಾತನಾಡಿ, ನನ್ನ ತಂದೆ ಮಾದೇಗೌಡರ ಆಶಯದಂತೆ ಹೋರಾಟ ಹಾದಿಯಲ್ಲಿ ಸಾಗುತ್ತಿರುವೆ. ಈ ಚುನಾವಣೆಗೆ ಮಾತ್ರ ಸೀಮಿತವಾಗದೇ ಮುಂಬರುವ ಜಿಪಂ, ತಾಪಂ ಹಾಗೂ ವಿಧಾನಸಭಾ ಚುನಾವಣೆಗೆ ಪಕ್ಷ ಬಲಪಡಿಸುವ ನಿಟ್ಟಿನಲ್ಲಿ ಪಕ್ಷದ ಮುಖಂಡರು ಕಾರ್ಯ ನಿರ್ವಹಿಸಬೇಕು. ನನ್ನನ್ನು ಅಭ್ಯರ್ಥಿಯಾಗಿಸುವ ಕಾರ್ಯದಲ್ಲಿ ಪಿ.ಎಂ.ನರೇಂದ್ರಸ್ವಾಮಿ ಅವರ ಪಾತ್ರ ಅಪಾರ. ಪದವೀಧರರು ಮತದಾನದ ಮಾರ್ಗಸೂಚಿ ಪಾಲಿಸಬೇಕು ಎಂದರು.

ಈ ವೇಳೆ ಕ್ಷೇತ್ರದ ಕಾಂಗ್ರೆಸ್ ಉಸ್ತುವಾರಿ ರಾಮಕೃಷ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜೆ.ದೇವರಾಜು, ಜಿಪಂ ಮಾಜಿ ಸದಸ್ಯೆ ಸುಜಾತಾ, ಕೆ.ಚೌಡಯ್ಯ, ಮುಖಂಡರಾದ ಶಾಂತಪ್ಪ, ಸಿ.ಮಾಧು, ಕಾಳಪ್ಪ ಸಿದ್ದೇಗೌಡ, ಅಜೀಜ್ ಸೇರಿದಂತೆ ಹಲವರಿದ್ದರು.

ಬಟ್ಟೆ ಅಂಗಡಿ ಮಾಲೀಕನ ಮನೆ ಬಾಗಿಲು ಮುರಿದು 18 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಹಾಸನ, ಜೂ.6– ಬಟ್ಟೆ ಅಂಗಡಿ ಮಾಲೀಕನ ಮನೆ ಬಾಗಿಲು ಮುರಿದು 1.50 ಲಕ್ಷ ರೂ. ನಗದು ಸೇರಿದಂತೆ 18 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಹಾಸನದ ಶಾಂತಿನಗರದಿಂದ ವರದಿಯಾಗಿದೆ.

ಜಾವಗಲ್‌ನ ಮಹಾವೀರ್ ಟೆಕ್ಸ್‌ಟೈಲ್ಸ್ ಮಾಲೀಕ ಆರ್.ಲವಲೇಶ್ (33) ಅವರು ಹಾಸನದ ಶಾಂತಿನಗರದಲ್ಲಿ ವಾಸವಿದ್ದು, ಕುಟುಂಬ ಸಮೇತ ಮೇ 31ರಂದು ತಮ್ಮ ಸ್ವಗ್ರಾಮಕ್ಕೆ ತೆರಳಿದ್ದರು. ಜೂ.2ರಂದು ರಾತ್ರಿ ಅವರ ಪತ್ನಿ ಹಾಸನಕ್ಕೆ ಹಿಂದಿರುಗಿದಾಗ ಕಳವು ನಡೆದಿರುವುದು ಗೊತ್ತಾಗಿದೆ. ಮರುದಿನ ಮನೆಗೆ ಬಂದ ಲವಲೇಶ್ ಕಳುವಾಗಿರುವ ವಸ್ತುಗಳು ಯಾವುವು ಎಂಬುದನ್ನು ಪಟ್ಟಿ ಮಾಡಿ, ನಂತರ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಮನೆ ಬಾಗಿಲಿನ ಚಿಲಕ ಮುರಿದು ಒಳನುಗ್ಗಿದ್ದ ಕಳ್ಳರು ಮನೆಯನ್ನೆಲ್ಲಾ ಜಾಲಾಡಿ 80 ಗ್ರಾಂ ತೂಕದ ಪೆಂಡೆಂಟ್, 60 ಗ್ರಾಂನ 4 ಚಿನ್ನದ ಬಳೆ, 15 ಗ್ರಾಂನ ಶಾರ್ಟ್ ಮಾಂಗಲ್ಯ ಸರ, 20 ಗ್ರಾಂನ ಲಾಂಗ್‌ಚೈನ್, 45 ಗ್ರಾಂನ 15 ಜೊತೆ ಓಲೆ, 25 ಗ್ರಾಂನ 10 ಪೆಂಡೆಂಟ್, 20 ಗ್ರಾಂನ 2 ಬ್ರೇಸ್‌ಲೇಟ್, 25 ಗ್ರಾಂನ 2 ಕಡಗ, 15 ಗ್ರಾಂನ 3 ಚೈನ್, ತಲಾ 5 ಗ್ರಾಂನ 5 ಚಿನ್ನದ ಉಂಗುರ, 35 ಗ್ರಾಂನ 12 ಲೇಡಿಸ್ ಉಂಗುರ, 25 ಗ್ರಾಂನ 5 ಚಿನ್ನದ ಓಲೆ ಸೇರಿದಂತೆ 370 ಗ್ರಾಂ ಚಿನ್ನ, 800 ಗ್ರಾಂ ಬೆಳ್ಳಿ ಹಾಗೂ 1.50 ಲಕ್ಷ ನಗದು ಸೇರಿದಂತೆ 18 ಲಕ್ಷ ರೂ. ಮೌಲ್ಯದ ಚಿನ್ನಾಭರಣವನ್ನು ಕಳವು ಮಾಡಿದ್ದಾರೆ. ಈ ಸಂಬಂಧ ಹಾಸನ ಪೆನ್ಷನ್ ಮೊಹಲ್ಲಾ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ರಾಷ್ಟ್ರೀಯ ಪಕ್ಷವೊಂದರ ಶಾಸಕರು, ಆ ಪಕ್ಷದ ಬೆಂಬಲಿತ ಉದ್ಯಮಿಗಳ ಮನೆ, ಕಚೇರಿ ಮೇಲೆ ಐಟಿ ದಾಳಿ

ಆಸ್ತಿ–ಪಾಸ್ತಿಯ ಮಹತ್ವದ ದಾಖಲೆಪತ್ರ ಪರಿಶೀಲನೆ

ಬೆಂಗಳೂರು, ಜೂ.6(ಕೆಎಂಶಿ)–ರಾಜ್ಯ ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವಂತೆ ರಾಷ್ಟ್ರೀಯ ಪಕ್ಷವೊಂದರ ಬೆಂಬಲಿತ ಉದ್ಯಮಿಗಳು, ಬಿಲ್ಡರ್ಸ್ ಹಾಗೂ ಆ ಪಕ್ಷಕ್ಕೆ ಸೇರಿದ ಶಾಸಕರು ಮತ್ತು ಮುಖಂಡರ ನಿವಾಸ, ಕಚೇರಿಗಳ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿದೆ. ಕಳೆದ ಕೆಲವು ದಿನಗಳಿಂದ ಅತ್ಯಂತ ಗೌಪ್ಯವಾಗಿ ಶಿಕ್ಷಣ ಸಂಸ್ಥೆ, ಉದ್ದಿಮೆ ನಡೆಸುತ್ತಿರುವ ಮುಖಂಡರ ಮನೆ, ಕಚೇರಿಗಳ ಮೇಲೆ ದಾಳಿ ನಡೆಸಿ ದೊಡ್ಡ ಪ್ರಮಾಣದಲ್ಲಿ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡಿದೆ.

ಉದ್ದಿಮೆದಾರರ ಮೇಲೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ದಾಳಿ ನಡೆಸುವುದು ಸಹಜ. ಆದರೆ, ಚುನಾವಣೆ ಹತ್ತಿರವಾಗುತ್ತಿದ್ದಂತೆ ಕಳೆದ ಒಂದು ತಿಂಗಳಲ್ಲಿ ಈ ಪ್ರಭಾವಿಗಳ ನಿವಾಸ, ಸಂಸ್ಥೆಗಳ ಮೇಲೆ ದಾಳಿ ಮಾಡಲಾಗಿದೆ.

ದಾಳಿಗೆ ಒಳಪಟ್ಟವರು ಏನನ್ನೂ ಇದುವರೆಗೆ ಬಹಿರಂಗಪಡಿಸಿಲ್ಲ. ಮಾಧ್ಯಮಗಳ ಮುಂದೆಯೂ ಹೇಳಿಕೊಂಡಿಲ್ಲ, ಇಲಾಖೆ ಹೊಂದಿರುವ ಮಾಹಿತಿ ಆಧಾರದ ಮೇಲೆ ಈ ದಾಳಿಗಳು ನಡೆದಿವೆ. ದಾಳಿಯ ಸಂದರ್ಭದಲ್ಲಿ ಉತ್ತರಪ್ರದೇಶದ ಅಧಿಕಾರಿಗಳನ್ನೇ ಸ್ಥಳೀಯ ಅಧಿಕಾರಿಗಳ ಸಹಯೋಗದೊಂದಿಗೆ ಬಳಸಿ ದಾಳಿ ನಡೆಸಲಾಗಿದೆ. ಈ ರೀತಿ ಸುಮಾರು 600 ಕಡೆ ಇಂತಹ ದಾಳಿಗಳು ನಡೆದಿವೆ ಎಂದು ತಿಳಿದು ಬಂದಿದೆ.

ರಾಜ್ಯದ ಗೃಹ ಸಚಿವರಾಗಿ, ಹಾಲಿ ಪ್ರಭಾವಿ ಶಾಸಕರ ಕಚೇರಿಗಳ ಮೇಲೆ ಕಳೆದ ನಾಲ್ಕು ದಿನಗಳಿಂದ ನಿರಂತರವಾಗಿ ತನಿಖೆ ನಡೆಸಿದ್ದು, ಇಂದು ಕೊನೆಗೊಳಿಸಿದೆ.

ಆದಾಯಕ್ಕಿಂತ ಹೆಚ್ಚು ಆಸ್ತಿ–ಪಾಸ್ತಿ ಹೊಂದಿದ್ದು, ಇಲಾಖೆಗೆ ಪೂರಕ ದಾಖಲೆ ಒದಗಿಸದೇ ಸರ್ಕಾರಕ್ಕೆ ತೆರಿಗೆ ವಂಚಿಸಿದ್ದವರಿಗೆ ನೋಟಿಸ್ ನೀಡಿ ವಿವರಣೆ ಕೇಳಲಾಗಿದೆ.

ಜೂ.13ರಂದು ರಾಜ್ಯಕ್ಕೆ ರಾಷ್ಟ್ರಪತಿ



ಬೆಂಗಳೂರು, ಜೂ.6(ಕೆಎಂಶಿ)–ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ಅವರು ಎರಡು–ದಿನಗಳ ಅಧಿಕೃತ ರಾಜ್ಯ ಭೇಟಿಗಾಗಿ ಜೂ.13 ರಂದು ಬೆಂಗಳೂರಿಗೆ ಆಗಮಿಸಲಿದ್ದು, ಅಂದು ಬೆಳಗ್ಗೆ ಅವರು ರಾಷ್ಟ್ರೀಯ ಮಿಲಿಟರಿ ಶಾಲೆಯ ಅಮೃತ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ರಾತ್ರಿ ರಾಜಭವನದಲ್ಲಿ ವಾಸ್ತವ್ಯ ಹೂಡಲಿದ್ದಾರೆ.

ಜೂ.14 ರಂದು ಬೆಳಗ್ಗೆ ಬೆಂಗಳೂರಿನ ಕನಕಪುರ ರಸ್ತೆ ಸಮೀಪದ ದೊಡ್ಡಕಲ್ಲಸಂದ್ರದ ವೈಕುಂಠ ಬೆಟ್ಟದಲ್ಲಿ ತಿರುಪತಿ ತಿರುಮಲ ದೇವಾಲಯವನ್ನು ಹೋಲುವ ಇಸ್ಕಾನ್ ದೇಗುಲದ ಲೋಕಾರ್ಪಣಾ ಸಮಾರಂಭದಲ್ಲಿ ರಾಷ್ಟ್ರಪತಿಯವರು ಭಾಗವಹಿಸಲಿದ್ದು, ಅಂದೇ ಅಪರಾಹ್ನ ಅವರು ದೆಹಲಿಗೆ ತೆರಳಲಿದ್ದಾರೆ.

ವಿದ್ಯಾರ್ಥಿಯಿಂದ ಬ್ಯಾಂಕ್‌ನಲ್ಲಿ ಖಾತೆ ತೆರೆಸಿ ಅದಕ್ಕೆ ತನ್ನ ಮೊಬೈಲ್ ನಂಬರ್ ಲಿಂಕ್ ಮಾಡಿ ಇತರರಿಗೆ ವಂಚಿಸಿದ ಖದೀಮ!

ಕಾಸಿಲ್ಲದೆ ಹಣ ಗಳಿಸುವ ಕನಸು ಕಂಡ ವಿದ್ಯಾರ್ಥಿಗೆ ಈಗ ಸಂಕಟ

ಚಾಮರಾಜನಗರ, ಜೂ.6– ಮೊಬೈಲ್‌ಗೆ ಕರೆ ಮಾಡಿ ಓಟಿಪಿ ಪಡೆದು ಬ್ಯಾಂಕ್ ಖಾತೆಯಿಂದ ಹಣ ದೋಚುವುದು ಸರ್ವೇ ಸಾಮಾನ್ಯವಾಗಿದೆ. ಆದರೆ ವಿದ್ಯಾರ್ಥಿಯೋರ್ವನಿಗೆ ಕರೆ ಮಾಡಿದ ವಂಚಕ ಆತನಿಂದ ಖಾಸಗಿ ಬ್ಯಾಂಕ್‌ನಲ್ಲಿ ಖಾತೆ ತೆರೆಸಿ, ಅದಕ್ಕೆ ತನ್ನ ಮೊಬೈಲ್ ನಂಬರ್ ಲಿಂಕ್ ಮಾಡಿಸಿ, ಆ ಖಾತೆಯ ಮೂಲಕ ಬೇರೆಯವರಿಗೆ ವಂಚಿಸಿರುವ ವಿಚಿತ್ರ ಪ್ರಕರಣವೊಂದು ಬೆಳಕಿಗೆ ಬಂದಿದೆ.

ವಿದ್ಯಾರ್ಥಿಯಿಂದ ತೆರೆಯಲ್ಪಟ್ಟಿರುವ ಖಾತೆ ಮೂಲಕ ವಂಚನೆಯಾಗಿರುವುದಾಗಿ ಗುಜರಾತ್ ಮತ್ತು ತುಮಕೂರಿನಲ್ಲಿ ಕ್ರಿಮಿನಲ್ ಕೇಸ್‌ಗಳು ದಾಖಲಾಗಿದ್ದು, ವಿದ್ಯಾರ್ಥಿ ಇಕ್ಕಟ್ಟಿಗೆ ಸಿಲುಕಿದ್ದಾನೆ. ಈ ಸಂಬಂಧ ಆತ ಚಾಮರಾಜನಗರ ಸೆನ್ ಠಾಣೆಗೆ ದೂರು ಸಲ್ಲಿಸಿದ್ದಾನೆ.

ವಿವರ: ಚಾಮರಾಜನಗರದಲ್ಲಿ ವಾಸವಿರುವ ವಿದ್ಯಾರ್ಥಿ ಎಂ.ಪವನ್‌ಕುಮಾರ್ (20) ಎಂಬಾತನನ್ನು ಇನ್‌ಸ್ಟಾಗ್ರಾಮ್ ಮೂಲಕ ಸಂಪರ್ಕಿಸಿದ ವಂಚಕರು, ಬಂಡವಾಳ ಹೂಡದೆಯೇ ಲಾಭ ಗಳಿಕೆಗೆ ಸಹಾಯ ಮಾಡುತ್ತೇವೆ ಎಂದು ಮೆಸೇಜ್ ರವಾನಿಸಿದ್ದಾರೆ. ಇದನ್ನು ವಿದ್ಯಾರ್ಥಿ ನಂಬಿದ್ದಾನೆ. ಆತನಿಂದಲೇ ಕಳೆದ ಏ.7ರಂದು ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಖಾತೆ ತೆರೆಯುವಂತೆ ಆತನಿಗೆ ತಿಳಿಸಿದ್ದಾರೆ. ಅದರಂತೆ ಆತ ಏ.18ರಂದು ಕೊಳ್ಳೇಗಾಲದ ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಖಾತೆ ತೆರೆದಿದ್ದಾನೆ. ಏ.23ರಂದು ಪಾಸ್ ಬುಕ್ ಮತ್ತು ಎಟಿಎಂ ಕಾರ್ಡ್ ಬಂದ ನಂತರ ಅದರ ಬಗ್ಗೆ ವಂಚಕನ ವಾಟ್ಸಾಪ್ ನಂಬರ್‌ಗೆ ಮೆಸೇಜ್ ಮಾಡಿದ್ದಾನೆ. ಆಗ ವಂಚಕ 7795729103 ಸಂಖ್ಯೆಯ ಮೊಬೈಲ್ ನಂಬರ್ ಅನ್ನು ಬ್ಯಾಂಕ್ ಖಾತೆಗೆ ಲಿಂಕ್ ಮಾಡಲು ತಿಳಿಸಿದ್ದು, ಆತ ಹೇಳಿದಂತೆ ವಿದ್ಯಾರ್ಥಿ ಮೊಬೈಲ್ ನಂಬರ್ ಲಿಂಕ್ ಮಾಡಿದ್ದಾನೆ.

ಬಂಡವಾಳ ಹೂಡದೆ ಕೇವಲ ಬ್ಯಾಂಕ್ ತೆರೆದರೆ ಸಾಕು ಲಾಭ ಬರುತ್ತದೆ ಎಂದು ಕನಸು ಕಾಣುತ್ತಿದ್ದ ವಿದ್ಯಾರ್ಥಿಗೆ ಮೇ26 ರಂದು ಹೆಚ್‌ಡಿಎಫ್‌ಸಿ ಬ್ಯಾಂಕ್ ಸಿಬ್ಬಂದಿ ಕರೆ ಮಾಡಿ ಆತನ ಖಾತೆ ಮೂಲಕ ವಂಚನೆ ಎಸಗಿರುವುದಾಗಿ ಗುಜರಾತ್ ಮತ್ತು ತುಮಕೂರಿನಲ್ಲಿ ಕೇಸ್‌ಗಳು ದಾಖಲಾಗಿವೆ ಎಂದು ತಿಳಿಸಿದ್ದಲ್ಲದೆ, ಆತನ ಖಾತೆಯನ್ನು ಬ್ಲಾಕ್ ಮಾಡಿರುವುದಾಗಿ ಹೇಳಿದ್ದಾರೆ.

ವಿದ್ಯಾರ್ಥಿಯಿಂದ ಬ್ಯಾಂಕ್‌ನಲ್ಲಿ ಖಾತೆ ತೆರೆಸಿ, ಅದಕ್ಕೆ ತಮ್ಮ ಮೊಬೈಲ್ ನಂಬರ್ ಲಿಂಕ್ ಮಾಡಿಸಿಕೊಂಡು ಬೇರೆ ವ್ಯಕ್ತಿಗಳಿಂದ ಸದರಿ ಖಾತೆಗೆ ಹಣ ಜಮೆ ಮಾಡಿಸಿಕೊಂಡು ವಂಚಿಸಲಾಗಿದ್ದು, ಇದೀಗ ಖಾತೆ ಹೊಂದಿರುವ ವಿದ್ಯಾರ್ಥಿ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಸಂಬಂಧ ವಿದ್ಯಾರ್ಥಿಯು ಬ್ಯಾಂಕ್ ಖಾತೆಯ ವ್ಯವಹಾರದ ವಿವರಗಳನ್ನು ಪಡೆದು ಜೂ.4ರಂದು ಚಾಮರಾಜನಗರ ಸೆನ್ ಠಾಣೆಗೆ ದೂರು ಸಲ್ಲಿಸಿದ್ದಾನೆ.

ಆನ್‌ಲೈನ್ ಮೂಲಕ ವಂಚನೆ ಎಸಗುವ ವ್ಯಕ್ತಿಗಳು ಬ್ಯಾಂಕ್ ಖಾತೆಯ ಸಂಖ್ಯೆಗಳನ್ನು ನೀಡಿ ಅದಕ್ಕೆ ಹಣವನ್ನು ಜಮಾ ಮಾಡಿಸಿಕೊಂಡು, ತಕ್ಷಣವೇ ಡ್ರಾ ಮಾಡಿಕೊಳ್ಳುತ್ತಾರೆ. ಹೀಗೆ ಮಾಡುವಾಗ ವಂಚಕರು ಅವರ ನೈಜ ಬ್ಯಾಂಕ್ ಖಾತೆಯ ಸಂಖ್ಯೆಗಳನ್ನು ನೀಡುವುದಿಲ್ಲ. ಪೊಲೀಸರು ತನಿಖೆಗಿಳಿದಾಗ ಖಾತೆ ಹೊಂದಿರುವ ವ್ಯಕ್ತಿ ಅಮಾಯಕ ಎಂಬುದು ತಿಳಿದುಬರುತ್ತದೆ. ನಿಜವಾದ ವಂಚಕರನ್ನು ಪತ್ತೆ ಹಚ್ಚುವುದೇ ಕಷ್ಟಕರ. ಬ್ಯಾಂಕ್ ಖಾತೆ ರೀತಿಯೇ ವಂಚಕರು ಬಳಸುವ ಸಿಮ್ ಕೂಡ ಯಾರೋ ಅಮಾಯಕರ ಹೆಸರಿನಲ್ಲಿರುತ್ತದೆ. ಹಾಗೆ ಸಿಮ್‌ನ ಮಾಲೀಕರು ಕೂಡ ತೊಂದರೆಗೆ ಸಿಲುಕುತ್ತಾರೆ. ಹೀಗಾಗಿ ಯಾವುದೇ ಆಮಿಷವೊಡ್ಡಿದರೂ ತಮ್ಮ ಬ್ಯಾಂಕ್ ಖಾತೆಗೆ ಬೇರೆಯವರ ಮೊಬೈಲ್ ಸಂಖ್ಯೆಯನ್ನು ಲಿಂಕ್ ಮಾಡಬಾರದು. ಹಾಗೆ ಲಿಂಕ್ ಮಾಡಿದರೆ ಬ್ಯಾಂಕ್ ಖಾತೆಯ ಎಲ್ಲಾ ವ್ಯವಹಾರಗಳ ಬಗೆಗಿನ ವಿವರಗಳು ಆ ಮೊಬೈಲ್ ಸಂಖ್ಯೆಗೆ ಹೋಗುತ್ತದೆ. ಬ್ಯಾಂಕ್ ಖಾತೆ ಬಳಸಿಕೊಂಡು ವಂಚನೆ ಎಸಗಿರುವ ಬಗ್ಗೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ, ಪೊಲೀಸರು ಸಂಪರ್ಕಿಸುವವರೆಗೂ ಅಮಾಯಕನಿಗೆ ಗೊತ್ತಾಗುವುದೇ ಇಲ್ಲ. ವಿಪರ್ಯಾಸವೆಂದರೆ ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಾಗಿಬಿಡುತ್ತದೆ. ಅನವಶ್ಯಕವಾಗಿ ಅಮಾಯಕರು ತೊಂದರೆಗೊಳಗಾಗುತ್ತಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಸಂಸದ ಪ್ರತಾಪ್ ಸಿಂಹ ಹೇಳಿಕೆ

ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಖಂಡನೆ



ಮೈಸೂರು,ಜೂ.6(ಪಿಎಂ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಸಂಸದ ಪ್ರತಾಪ್ ಸಿಂಹ ನೀಡಿರುವ ಹೇಳಿಕೆಯನ್ನು ಖಂಡಿಸಿರುವ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ, ಸಿದ್ದರಾಮಯ್ಯರನ್ನು ಟೀಕಿಸಿ ದೊಡ್ಡವರಾಗುವ ಭ್ರಮೆಯಲ್ಲಿ ಪ್ರತಾಪ್ ಸಿಂಹ ಇದ್ದಾರೆ ಎಂದು ಛೇಡಿಸಿದ್ದಾರೆ.

ಪ್ರತಾಪ್ ಸಿಂಹ ಅವರು ಜವಾಬ್ದಾರಿಯುತ ಸ್ಥಾನದಲ್ಲಿದ್ದು, ಪ್ರತಿಪಕ್ಷ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ಹಗುರವಾಗಿ ಮಾತನಾಡಿರುವುದು ಖಂಡನೀಯ. 'ಬಿಎ, ಎಲ್‌ಎಲ್‌ಬಿ ಮಾಡಿಕೊಂಡು ಯಾವುದೋ ತಾಲೂಕು ನ್ಯಾಯಾಲಯದಲ್ಲಿ ವಕೀಲಗಿರಿ ಮಾಡಿಕೊಂಡಿದ್ದ ಸಿದ್ದರಾಮಯ್ಯ ಅವರಿಗೆ ದೇಶದ ಆರ್ಥಿಕತೆ ಬಗ್ಗೆ ಹೇಗೆ ಗೊತ್ತಾಗಬೇಕು?' ಎಂದು ಪ್ರತಾಪ್ ಸಿಂಹ ಅವರು ಅವಹೇಳನ ಮಾಡಿರುವುದು ಒಳ್ಳೆಯ ಬೆಳವಣಿಗೆಯಲ್ಲ.

ಸಿದ್ದರಾಮಯ್ಯ ಅವರನ್ನು ಟೀಕಿಸಿ ತಮ್ಮ ಪಕ್ಷದ ವರಿಷ್ಠರನ್ನು ಮೆಚ್ಚಿಸಲು ಹಾಗೂ ಸಿದ್ದರಾಮಯ್ಯ ವಿರುದ್ಧ ಮಾತನಾಡುವುದು ತಾವೊಬ್ಬರೇ ಎಂಬುದನ್ನು ಬಿಂಬಿಸಿಕೊಳ್ಳಲು ಪ್ರತಾಪ್ ಸಿಂಹ ಹೊರಟಿದ್ದಾರೆ. ಆದರೆ ಅವರ ಮಾತುಗಳಿಗೆ ಕವಡೆ ಕಾಸಿನ ಕಿಮ್ಮತ್ತೂ ಇಲ್ಲ. ಸಿದ್ದರಾಮಯ್ಯನವರು ಶಾಸಕರು, ಹಣಕಾಸು ಸಚಿವರು, ಮುಖ್ಯಮಂತ್ರಿಗಳೂ ಆಗಿ ಇದೀಗ ಪ್ರತಿಪಕ್ಷ ನಾಯಕರಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ದೇಶದ ಅರ್ಥ ವ್ಯವಸ್ಥೆ ಬಗ್ಗೆಯೂ ಅವರಿಗೆ ಅಪಾರವಾದ ಜ್ಞಾನವಿದೆ.

ಪ್ರತಾಪ್ ಸಿಂಹ ಅವರು ಎಷ್ಟು ಬಾರಿ ಕ್ಷೇತ್ರ ಪ್ರದಕ್ಷಿಣೆ ಮಾಡಿದ್ದಾರೆ? ಎಷ್ಟು ಜನರ ಬಳಿ ನೇರವಾಗಿ ಹೋಗಿ ಸಮಸ್ಯೆ ಬಗೆಹರಿಸಿದ್ದಾರೆ? ಎಂದು ಪ್ರಶ್ನಿಸಿರುವ ಅವರು, ಇವರು ಯಾರ್‍ಯಾರೋ ಮಾಡಿದ ಯೋಜನೆಗಳನ್ನು ತಾವೇ ಮಾಡಿಸಿದ್ದೆಂದು ಬೋರ್ಡ್ ಹಾಕಿಕೊಂಡು ಓಡಾಡುತ್ತಿದ್ದಾರೆ. ಮಾತಿಗೆ ಮುಂಚೆ ಪ್ರಧಾನಿ ಮೋದಿ ಅವರ ಹೆಸರು ಹೇಳುತ್ತಾರೆ. ಪ್ರತಿ ಯೋಜನೆ ಸಂಬಂಧವೂ ಮೋದಿಯವರ ಹೆಸರು ಹೇಳಿಕೊಂಡೇ ಮಾತನಾಡುವ ಪ್ರತಾಪ್ ಸಿಂಹ, ತಾವೇನು ಮಾಡಿದ್ದಾರೆ ಎಂದು ಜನತೆಗೆ ತಿಳಿಸಿಕೊಡಬೇಕು ಎಂದು ಅವರು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ರೈಸ್ ಪುಲ್ಲಿಂಗ್ ಹೆಸರಲ್ಲಿ ವಂಚನೆ ಸಂಚು: ಐವರ ಬಂಧನ

ಮಾಸಲು ಬಣ್ಣದ ತಾಮ್ರದ ಚೊಂಬು ವಶಕ್ಕೆ

ಹೆಚ್.ಡಿ.ಕೋಟೆ, ಜೂ.6– ರೈಸ್ ಪುಲ್ಲಿಂಗ್ ಹೆಸರಿನಲ್ಲಿ ತಾಮ್ರದ ಚೊಂಬು ನೀಡಿ ವಂಚಿಸಲು ಯತ್ನಿಸುತ್ತಿದ್ದ ವಿದ್ಯಾರ್ಥಿ ಸೇರಿದಂತೆ ಇಬ್ಬರನ್ನು ಹೆಚ್.ಡಿ.ಕೋಟೆ ಠಾಣೆ ಪೊಲೀಸರು ಬಂಧಿಸಿದ್ದು, 5 ಮಂದಿ ವಿರುದ್ಧ ಕೇಸ್ ದಾಖಲಿಸಿದ್ದಾರೆ.

ಹೆಚ್.ಡಿ.ಕೋಟೆ ಹೌಸಿಂಗ್ ಬೋರ್ಡ್ ನಿವಾಸಿ ಸಚಿನ್ (23), ಪಿರಿಯಾಪಟ್ಟಣ ತಾಲೂಕು ಸುಂಡವಾಳು ಗ್ರಾಮದ ವಿದ್ಯಾರ್ಥಿ ವರ್ಧನ್‌ಕುಮಾರ್ (20) ಬಂಧನಕ್ಕೊಳಗಾದವರಾಗಿದ್ದು, ಇವರೊಂದಿಗೆ ಪಿರಿಯಾಪಟ್ಟಣ ತಾಲೂಕು ಸುಂಡವಾಳು ಗ್ರಾಮದ ಹರೀಶ್, ಹೆಚ್.ಡಿ.ಕೋಟೆ ಮುಸ್ಲಿಂ ಬ್ಲಾಕ್‌ನ ಯಶವಂತ್ ಮತ್ತು ಲೋಹಿತ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

ವಿವರ: ಹೆಚ್.ಡಿ.ಕೋಟೆ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ರಾಮು ಅವರು ತಮ್ಮ ಸಿಬ್ಬಂದಿಯೊಂದಿಗೆ ಜೂ.4ರಂದು ಸಂಜೆ 4.30ರ ಸುಮಾರಿನಲ್ಲಿ ಗಸ್ತು ತಿರುಗುತ್ತಿದ್ದಾಗ ದಟ್ಟಹಳ್ಳ ಬಸ್ ನಿಲ್ದಾಣದ ಬಳಿ ಕಾರು (ಕೆಎ04 ಎಬಿ2845) ನಿಲ್ಲಿಸಿಕೊಂಡು ಅನುಮಾನಾಸ್ಪದವಾಗಿ ಐವರು ವರ್ತಿಸುತ್ತಿರುವುದನ್ನು ಕಂಡು ಅತ್ತ ತೆರಳಿದ್ದಾರೆ. ಪೊಲೀಸರನ್ನು ನೋಡಿದ ತಕ್ಷಣ ಕಾರನ್ನು ಅಲ್ಲೇ ಬಿಟ್ಟು ಎಲ್ಲರೂ ಓಡಿ ಹೋಗುತ್ತಿದ್ದಾಗ ಪೊಲೀಸರು ಸಚಿನ್ ಮತ್ತು ವರ್ಧನ್‌ಕುಮಾರ ಅವರನ್ನು ಹಿಡಿದುಕೊಂಡು ಕಾರನ್ನು ತಪಾಸಣೆ ಮಾಡಿದಾಗ ಅದರಲ್ಲಿ ಮಾಸಲು ಬಣ್ಣಕ್ಕೆ ತಿರುಗಿರುವ ತಾಮ್ರದ ಚೊಂಬು ಪತ್ತೆಯಾಗಿದೆ.

ಇದರ ಬಗ್ಗೆ ಬಂಧಿತರನ್ನು ವಿಚಾರಿಸಿದಾಗ ಸಿಡಿಲು ಹೊಡೆದಿರುವ ಅದೃಷ್ಟದ ಚೊಂಬನ್ನು ಮನೆಯಲ್ಲಿಟ್ಟುಕೊಂಡು ಪೂಜೆ ಮಾಡಿದರೆ ಸಂಪತ್ತು ವೃದ್ಧಿಯಾಗುತ್ತದೆ ಎಂದು ಮೈಸೂರಿನಲ್ಲಿ ವ್ಯಕ್ತಿಯೋರ್ವ ನನಗೆ ಈ ಚೊಂಬನ್ನು ನೀಡಿದ್ದ ಎಂದು ಸಚಿನ್ ಪೊಲೀಸರಿಗೆ ತಿಳಿಸಿದ್ದಾನೆ. ಪರಾರಿಯಾದ ಮೂವರು ಸೇರಿದಂತೆ ಐವರು ಸೇರಿಕೊಂಡು ಈ ಚೊಂಬನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಯತ್ನಿಸುತ್ತಿದ್ದೆವು ಎಂದು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಆರೋಪಿಗಳು ತಿಳಿಸಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ. ಅದೃಷ್ಟದ ತಾಮ್ರದ ಚೊಂಬನ್ನು ಮನೆಯಲ್ಲಿಟ್ಟು ಪೂಜೆ ಮಾಡಿದರೆ ಸಂಪತ್ತು ವೃದ್ಧಿಸುತ್ತದೆ ಎಂದು ನಂಬಿಸಿ, ಅಮಾಯಕರಿಂದ ಹಣ ಸುಲಿಗೆ ಮಾಡಲು ಈ ಐವರು ಪ್ರಯತ್ನಿಸುತ್ತಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಆಟೋದಲ್ಲಿ ಬಿಟ್ಟು ಹೋಗಿದ್ದ 60 ಸಾವಿರ ಮೌಲ್ಯದ ಮೊಬೈಲ್ ಮರಳಿಸಿದ ಆಟೋ ಡ್ರೈವರ್



ಮೈಸೂರು, ಜೂ.6(ಎಸ್‌ಬಿಡಿ)– ಪ್ರವಾಸಿಯೊಬ್ಬರು ಆಟೋದಲ್ಲಿ ಬಿಟ್ಟು ಹೋಗಿದ್ದ ಸುಮಾರು 60 ಸಾವಿರ ಮೌಲ್ಯದ ಮೊಬೈಲ್ ಅನ್ನು ಹಿಂದಿರುಗಿಸಿದ ಪ್ರಾಮಾಣಿಕ ಆಟೋ ಚಾಲಕನಿಗೆ ಪೊಲೀಸರು ಅಭಿನಂದಿಸಿದ್ದಾರೆ.

ಮೈಸೂರಿನ ಮೇಟಗಳ್ಳಿ ರೈಲ್ವೆಗೇಟ್, ಸಮುದಾಯ ಭವನ ಬಳಿ ನಿವಾಸಿ ರಾಜು, ಬೆಲೆ ಬಾಳುವ ಮೊಬೈಲ್ ಹಿಂದಿರುಗಿಸಿ ಪ್ರಾಮಾಣಿಕತೆ ಮೆರೆದ ಆಟೋ ಚಾಲಕ.

ಭಾನುವಾರ ಮೈಸೂರು ಪ್ರವಾಸಕ್ಕೆ ಬಂದಿದ್ದ ಬೆಂಗಳೂರಿನ ಮರಿಯಪ್ಪನ ಪಾಳ್ಯ ನಿವಾಸಿ ಶ್ಯಾಮ್, ಜಗನ್ಮೋಹನ ಅರಮನೆ ಬಳಿಯಿಂದ ಮೃಗಾಲಯಕ್ಕೆ ಆಟೋದಲ್ಲಿ ತೆರಳಿದ್ದರು. ಈ ವೇಳೆ 60 ಸಾವಿರ ರೂ. ಬೆಲೆಯ ತಮ್ಮ ಒನ್ ಪ್ಲಸ್(1+) ಮೊಬೈಲ್ ಕಳೆದುಕೊಂಡಿದ್ದರು. ಅಲ್ಲಿ ಕರ್ತವ್ಯದಲ್ಲಿದ್ದ ಸಿದ್ಧಾರ್ಥ ಸಂಚಾರ ಠಾಣೆ ಎಎಸ್‌ಐಗೆ ವಿಷಯ ತಿಳಿಸಿ, ಮೊಬೈಲ್ ಪತ್ತೆಗೆ ಸಹಾಯ ಕೇಳಿದ್ದರು. ಅಷ್ಟರಲ್ಲಿ ತಮ್ಮ ಆಟೋದಲ್ಲಿ ಮೊಬೈಲ್ ಬಿಟ್ಟು ಹೋಗಿರುವುದನ್ನು ಗಮನಿಸಿದ ಚಾಲಕ ರಾಜು, ಪ್ರಯಾಣಿಕರು ಇಳಿದುಕೊಂಡ ಸ್ಥಳಕ್ಕೆ ವಾಪಸ್ಸು ಬಂದು, ಅಲ್ಲಿ ಮೊಬೈಲ್ ಬಗ್ಗೆಯೇ ವಿಚಾರಣೆ ನಡೆಸುತ್ತಿದ್ದ ಎಎಸ್‌ಐಗೆ ವಿಚಾರ ತಿಳಿಸಿದರು. ಚಾಲಕನ ಪ್ರಾಮಾಣಿಕತೆಯನ್ನು ಶ್ಲಾಘಿಸಿದ ಎಎಸ್‌ಐ, ಡಿಸಿಪಿ ಗೀತಾ ಪ್ರಸನ್ನ ಅವರಿಗೆ ವಿಷಯ ತಿಳಿಸಿದರು. ನಂತರ ಅವರು ಆಟೋ ಚಾಲಕ ರಾಜುಗೆ ಪ್ರಶಂಸನಾ ಪತ್ರ ನೀಡಿ, ಅಭಿನಂದಿಸಿದರು.

ಶ್ರೀಮತಿ ನಿಂಗಮ್ಮ ನಿಧನ



ಮೈಸೂರು, ಜೂ.6–ಕೆ.ಜಿ.ಕೊಪ್ಪಲಿನ ನಿವಾಸಿ ಹಾಗೂ ದಿವಂಗತ ಚೆನ್ನೇಗೌಡರ ಧರ್ಮಪತ್ನಿ, ಶ್ರೀಮತಿ ನಿಂಗಮ್ಮ(90) ಸೋಮವಾರ ನಿಧನರಾದರು. ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮಂಗಳವಾರ 10.30ಕ್ಕೆ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಶ್ರೀ ಚಾಮರಾಜೇಶ್ವರ ಸನ್ನಿಧಿಯಲ್ಲಿ ವಿಜೃಂಭಣೆಯ ಕುಂಭಾಭಿಷೇಕ

• ಮೂರು ದಿನಗಳ ಪೂಜಾ ಕೈಂಕರ್ಯ ಸಂಪನ್ನ • ಸಹಸ್ರಾರು ಭಕ್ತರಿಗೆ ಅನ್ನಸಂತರ್ಪಣೆ







ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ಕುಂಭಾಭಿಷೇಕ ಮಹೋತ್ಸವ ಹಿನ್ನೆಲೆ ಸೋಮವಾರ ಪಲ್ಲಕ್ಕಿ ಉತ್ಸವ ನಡೆಯಿತು.

ಚಾಮರಾಜನಗರ, ಜೂ.6(ಎಸ್‌ಎಸ್)– ನಗರದ ಇತಿಹಾಸ ಪ್ರಸಿದ್ಧ ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ಸೋಮವಾರ ಕುಂಭಾಭಿಷೇಕ ವಿಜೃಂಭಣೆಯಿಂದ ನಡೆಯಿತು.

ಬೆಳಗ್ಗೆ 10 ಗಂಟೆಯಿಂದ 10.30ರ ವರೆಗೆ ಸಲ್ಲುವ ಶುಭ ಕಟಕ ಲಗ್ನದಲ್ಲಿ ಕುಂಭಾಭಿಷೇಕ ನೆರವೇರಿತು. ನಂತರ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಆರಂಭವಾಯಿತು. ಸಂಜೆವರೆಗೂ ಸಹಸ್ರಾರು ಭಕ್ತರಿಗೆ ಅನ್ನಸಂತರ್ಪಣೆ ಮಾಡಲಾಯಿತು.

ಶ್ರೀ ಕೆಂಪನಂಜಾಂಬ ಸಮೇತ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಕುಂಭಾಷೇಕ ಮಹೋತ್ಸವದ ಹಿನ್ನೆಲೆಯಲ್ಲಿ ಸೋಮವಾರ ಬೆಳಗ್ಗೆಯಿಂದಲೇ ನಾನಾ ಪೂಜಾ ಕೈಂಕರ್ಯ ಜರುಗಿದವು. ಪುಣ್ಯಾಹ, ಕಳಾರ್ಚನೆ, ಪ್ರಾಣ ಪ್ರತಿಷ್ಠೆ, ನಾಡಿಸಂಧಾನ, ತತ್ವನ್ಯಾಸ, ಕಳಾನ್ಯಾಸ, ಕಳಾಹೋಮ ಪೂರ್ವಕ ಕಳಶ ಆವಾಹನೆ, ಪೂರ್ಣಾಹುತಿ ಕುಂಭಾ ಉದ್ವಾಸನೆ ನಡೆಯಿತು. ದೇವಸ್ಥಾನದ ಐದು ರಾಜಗೋಪುರಗಳು ಹಾಗೂ ದೇವಸ್ಥಾನದ ಒಳಾವರಣದಲ್ಲಿನ 62 ಸಾಲುಗುಡಿಗಳ ದೇವರ ವಿಗ್ರಹಗಳಿಗೆ ಪಂಚಾಮೃತ ಅಭಿಷೇಕ ನೆರವೇರಿತು.

ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಆಗಮಿಕರಾದ ಜೆ.ನಾಗಚಂದ್ರ ದೀಕ್ಷಿತ್ ಅವರ ನೇತೃತ್ವದಲ್ಲಿ ಪೂಜಾ ಕಾರ್ಯಗಳು ನಡೆದವು. ಮೈಸೂರಿನ ಚಾಮುಂಡಿ ಬೆಟ್ಟದ ಆಗಮಿಕರಾದ ಡಾ.ಶಶಿಶೇಖರ್ ದೀಕ್ಷಿತ್, ನಗರದ ಸಿದ್ದಮುನೇಶ್ವರ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ಅರ್ಚಕರಾದ ರಾಮಕೃಷ್ಣ, ಭಾರದ್ವಾಜ್, ಗಣೇಶ್ ದೀಕ್ಷಿತ್, ನಾಗರಾಜು ದೀಕ್ಷಿತ್ ಸೇರಿದಂತೆ ಇತರ ಅರ್ಚಕರು ಪೂಜಾ ಕಾರ್ಯಗಳಲ್ಲಿ ಪಾಲ್ಗೊಂಡಿದ್ದರು. ಶಾಸಕ ಸಿ.ಪುಟ್ಟರಂಗಶೆಟ್ಟಿ, ಮಾಜಿ ಶಾಸಕ ವಾಟಾಳ್ ನಾಗರಾಜ್, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಜಿಪಂ ಮಾಜಿ ಅಧ್ಯಕ್ಷೆ ಜಿ.ನಾಗಶ್ರೀ ಪ್ರತಾಪ್ ಸೇರಿದಂತೆ ಇತರೆ ಮುಖಂಡರು ಹಾಗೂ ಭಕ್ತರು ಭಾಗವಹಿಸಿದ್ದರು.

ಸೋಮವಾರ ಕುಂಭಾಭಿಷೇಕದ ಮೂಲಕ ಮೂರು ದಿನದ ಕುಂಭಾಭಿಷೇಕ ಮಹೋತ್ಸವ ಸಂಪನ್ನಗೊಂಡಿತು.

ಅಪಘಾತದಲ್ಲಿ ಗಾಯಗೊಂಡಿದ್ದ ಎಎಸ್‌ಐ ಸಾವು

ಚಾಮರಾಜನಗರ, ಜೂ.6(ಎಸ್‌ಎಸ್)–ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಂತೇಮರಹಳ್ಳಿ ಠಾಣೆ ಎಎಸ್‌ಐ ರಾಜು(59) ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ರಾತ್ರಿ ಮೃತಪಟ್ಟಿದ್ದಾರೆ. ಏ.11ರಂದು ರಾತ್ರಿ ಕರ್ತವ್ಯದ ಮೇರೆಗೆ ಕೆಂಪನಪುರಕ್ಕೆ ಎಎಸ್‌ಐ ರಾಜು ಹಾಗೂ ಪೊಲೀಸ್ ಪೇದೆಯೊಬ್ಬರು ಬೈಕ್‌ನಲ್ಲಿ ತೆರಳಿದ್ದರು. ಈ ವೇಳೆ ರಾಷ್ಟ್ರೀಯ ಹೆದ್ದಾರಿ– 209ರಲ್ಲಿ ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಪೊಲೀಸ್ ಪೇದೆ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಎಎಸ್‌ಐ ರಾಜು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿ ಆಗದೆ ಕೊನೆಯುಸಿರೆಳೆದಿದ್ದಾರೆ. ಮೃತರ ಅಂತ್ಯಕ್ರಿಯೆ ಅವರ ಸ್ವಗ್ರಾಮ ಕೋಡಿಉಗನೆಯಲ್ಲಿ ಸರ್ಕಾರಿ ಗೌರವದೊಂದಿಗೆ ನೆರವೇರಿತು.

ಪರಿಸರ ಉಳಿದರೆ ನಾವು ಉಳಿದಂತೆ



ಹನೂರು, ಜೂ.6(ಸೋಮು)–ಪರಸರಿವನ್ನು ನಾವು ಉಳಿಸಿದರೆ ಪರಿಸರ ನಮ್ಮನ್ನು ಉಳಿಸುತ್ತದೆ ಎಂಬ ಸರಳ ಸತ್ಯವನ್ನು ಅರ್ಥಮಾಡಿಕೊಂಡರೆ ಮಾನವ ಸಂಕುಲಗಳ ಆಯಸ್ಸು ವೃದ್ಧಿಸುತ್ತದೆ ಎಂದು ಬಿಜೆಪಿ ಓಬಿಸಿ ಮೋರ್ಚಾ ಜಿಲ್ಲಾ ಸಂಯೋಜಕ ಬಿ.ವೆಂಕಟೇಶ್ ತಿಳಿಸಿದರು. ಹನೂರಿನ ಬಿಜೆಪಿ ಓಬಿಸಿ ಮೋರ್ಚಾ ಕಚೇರಿಯ ಆವರಣದಲ್ಲಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಾನವನ ಕಾನೂನು ಬಾಹಿರ ಚಟುವಟಿಕೆಯಿಂದ ಅರಣ್ಯ ಪ್ರದೇಶದ ಪ್ರಮಾಣ ಕ್ಷೀಣಿಸುತ್ತಿದೆ. ಆದ್ದರಿಂದ ಅರಣ್ಯವನ್ನು ಸಂರಕ್ಷಿಸುವುದರ ಜೊತೆಗೆ ಪರಿಸರ ಉಳಿವಿನ ಬಗ್ಗೆ ಪ್ರತಿಯೊಬ್ಬರೂ ಧನಾತ್ಮಕ ಭಾವನೆ ಹೊಂದಬೇಕು ಎಂದರು. ಈ ಸಂದರ್ಭದಲ್ಲಿ ಮಹದೇಶ್ವರಬೆಟ್ಟ ಓಬಿಸಿ ಮಹಿಳಾ ಮೋರ್ಚಾದ ಅಧ್ಯಕ್ಷೆ ಮೀನಾ, ಮಂಗಲ ಗ್ರಾಪಂ ಸದಸ್ಯ ರಾಜಪ್ಪ, ಎಲ್ಲೇಮಾಳ ಗ್ರಾಪಂ ಮಾಜಿ ಅಧ್ಯಕ್ಷೆ ರಾಧಾ, ಮುಖಂಡರಾದ ಲೋಕೇಶ್ ಜತ್ತಿ, ರಾಮ್ ಇತರರಿದ್ದರು.

ಚಾಮುಲ್ ಚುನಾವಣೆ: 9 ಸ್ಥಾನಕ್ಕೆ 25 ಮಂದಿ ಸ್ಪರ್ಧೆ



ಜಿಲ್ಲಾ ಮಹಿಳಾ ಕ್ಷೇತ್ರದಿಂದ ಆಯ್ಕೆ ಬಯಸಿ ಚಾಮುಲ್ ಹಾಲಿ ನಿರ್ದೇಶಕಿ ಜಿ.ಪ್ರಮೋದಾ ಅವರು ನಾಮಪತ್ರ ಸಲ್ಲಿಸಿದರು.

ತಾಲೂಕುವಾರು ಸ್ಪರ್ಧಿಸಿರುವ ಅಭ್ಯರ್ಥಿಗಳು

ತಾಲೂಕು	ಸ್ಥಾನ	ಅಭ್ಯರ್ಥಿಗಳು
ಚಾ.ನಗರ	2	8
ಹನೂರು	2	6
ಗುಂಡ್ಲುಪೇಟೆ	2	5
ಯಳಂದೂರು	1	2
ಕೊಳ್ಳೇಗಾಲ	1	2
ಜಿಲ್ಲಾ ಮಹಿಳಾ ಕ್ಷೇತ್ರ	1	2

ಚಾಮರಾಜನಗರ, ಜೂ.6(ಎಸ್‌ಎಸ್)– ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ(ಚಾಮುಲ್)ದ ಆಡಳಿತ ಮಂಡಳಿಯ 9 ನಿರ್ದೇಶಕ ಸ್ಥಾನಕ್ಕೆ ಜೂ.14ರಂದು ಚುನಾವಣೆ ನಡೆಯಲಿದ್ದು, ನಾಮಪತ್ರ ಸಲ್ಲಿಸಲು ಅಂತಿಮ ದಿನವಾದ ಸೋಮವಾರ 9 ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದರು.

ತಾಲೂಕಿನ ಕುದೇರು ಗ್ರಾಮದಲ್ಲಿರುವ ಚಾಮುಲ್ ಆಡಳಿತ ಮಂಡಳಿಯ ಕಚೇರಿಯಲ್ಲಿ ಅಭ್ಯರ್ಥಿಗಳು ಚುನಾವಣಾಧಿಕಾರಿ ರಾಜೇಂದ್ರ ಪ್ರಸಾದ್ ಅವರಿಗೆ ನಾಮಪತ್ರ ಸಲ್ಲಿಸಿದರು. 9 ನಿರ್ದೇಶಕ ಸ್ಥಾನಕ್ಕೆ 25 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ನಾಳೆ (ಜೂ.7) ನಾಮಪತ್ರ ಪರಿಶೀಲನಾ ಕಾರ್ಯ ನಡೆಯಲಿದೆ. ಜೂ.8ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ. ಜೂ.14ರಂದು ಮತದಾನ ನಡೆಯಲಿದೆ.

ಇಂದು ನಾಮಪತ್ರ ಸಲ್ಲಿಸಿದವರು: ಗುಂಡ್ಲುಪೇಟೆ ತಾಲೂಕಿನಿಂದ ಡಿ.ಮಾದಪ್ಪ ಹಾಗೂ ಎಂ.ಸುಜೇಂದ್ರ ಅವರು ನಾಮಪತ್ರ ಸಲ್ಲಿಸಿದರು. ಇವರು ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದು, ಶಾಸಕ ಸಿ.ಎಸ್.ನಿರಂಜನಕುಮಾರ್ ಅವರು ನಾಮಪತ್ರ ಸಲ್ಲಿಸುವ ವೇಳೆ ಹಾಜರಿದ್ದರು. ಇದೇ ಕ್ಷೇತ್ರದಿಂದ ಎಂ.ಪಿ.ಸುನೀಲ್ ಮೂಡುಗೂರು ಕಣಕ್ಕೆ ಇಳಿದಿದ್ದಾರೆ.

ಕೊಳ್ಳೇಗಾಲ ತಾಲೂಕಿನ ಎಂ.ಪುಟ್ಟಣ್ಣ ನಾಮಪತ್ರ ಸಲ್ಲಿಸಿದರು. ಇವರು ಬಿಜೆಪಿ ಬೆಂಬಲಿತರಾಗಿದ್ದು, ಮಾಜಿ ಶಾಸಕರಾದ ಜಿ.ಎನ್. ನಂಜುಂಡಸ್ವಾಮಿ ಹಾಗೂ ಪರಿಮಳಾ ನಾಗಪ್ಪ ಜೊತೆಗಿದ್ದರು.

ಹನೂರು ತಾಲೂಕಿನಿಂದ ಎಸ್.ಮಹದೇವಸ್ವಾಮಿ ಹಾಗೂ ಬಸರಾಜು ಉಮೇದುವಾರಿಕೆ ಸಲ್ಲಿಸಿದರು. ಇವರು ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾಗಿದ್ದಾರೆ. ಇದೇ ತಾಲೂಕಿನಿಂದ ಪಿ.ಸೋಮಶೇಖರ ಹಾಗೂ ಎಂ.ಮಹಾದೇವಪ್ರಭು ಸಹ ಸ್ಪರ್ಧಿಸಿದ್ದು, ಬಿಜೆಪಿ ಬೆಂಬಲಿತರಾಗಿ ಕಣಕ್ಕೆ ಇಳಿದಿದ್ದಾರೆ. ಜಿಲ್ಲಾ ಮಹಿಳಾ ಕ್ಷೇತ್ರದಿಂದ ಆಯ್ಕೆ ಬಯಸಿ ಚಾಮುಲ್ ಹಾಲಿ ನಿರ್ದೇಶಕಿ ಜಿ.ಪ್ರಮೋದಾ ಅವರು ಸ್ಪರ್ಧಿಸಿದ್ದಾರೆ.

ದಕ್ಷಿಣ ಪದವೀಧರ ಕ್ಷೇತ್ರ ಜೆಡಿಎಸ್ ಭದ್ರಕೋಟೆ



ಕೊಳ್ಳೇಗಾಲ, ಜೂ.6–ದಕ್ಷಿಣ ಪದವೀಧರ ಕ್ಷೇತ್ರವು ಜೆಡಿಎಸ್‌ನ ಭದ್ರಕೋಟೆಯಾಗಿದ್ದು, ಹೆಚ್.ಕೆ.ರಾಮುರನ್ನು ಗೆಲ್ಲಿಸುವ ಮೂಲಕ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರ ಕೈ ಬಲಪಡಿಸಿ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮನವಿ ಮಾಡಿದರು.

ನಗರದಲ್ಲಿರುವ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬರ್ಡ್ ಮೆಮೋರಿಯಲ್ ಪ್ರೌಢಶಾಲೆ, ಮಾನಸ ಶಿಕ್ಷಣ ಸಂಸ್ಥೆ, ವಿಶ್ವಚೇತನ ಶಿಕ್ಷಣ ಸಂಸ್ಥೆ, ಸರ್ಕಾರಿ ಎಸ್‌ವಿಕೆ ಬಾಲಕಿಯರ ಪದವಿಪೂರ್ವ ಕಾಲೇಜು, ಸಂತ ಫ್ರಾನ್ಸಿಸ್ ಅಸ್ಸಿಸಿ ಪದವಿಪೂರ್ವ ಕಾಲೇಜು, ಜೆಎಸ್‌ಎಸ್ ಮಹಿಳಾ ಕಾಲೇಜು, ಬಿಇಓ ಕಚೇರಿ, ಕೋರ್ಟ್, ವಾಸವಿ ಪ್ರಥಮ ದರ್ಜೆ ಕಾಲೇಜುಗಳಿಗೆ ಭೇಟಿ ನೀಡಿ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಪರ ಮತಯಾಚಿಸಿ ಮಾತನಾಡಿದರು. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 1.20 ಲಕ್ಷ ಸರ್ಕಾರಿ ನೌಕರರನ್ನು ನೇಮಕ ಮಾಡಿಕೊಂಡರು. ಅಲ್ಲಿಂದ ಇಲ್ಲಿಯವರೆಗೆ ಯಾವುದೇ ನೇಮಕಾತಿಯಾಗಿಲ್ಲ, ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದ್ದು, 2023ಕ್ಕೆ ಪಕ್ಷ ಅಧಿಕಾರಕ್ಕೆ ಬಂದು ಕುಮಾರಣ್ಣ ಮುಖ್ಯಮಂತ್ರಿಯಾದ ತಕ್ಷಣದಲ್ಲೇ ನಿರುದ್ಯೋಗಿ ಪದವೀಧರರಿಗೆ 10 ಸಾವಿರ ನಿರುದ್ಯೋಗ ಭತ್ಯೆ ನೀಡುತ್ತಾರೆ. ನಾನು ಒಬ್ಬ ಮಾಜಿ ಸೈನಿಕನಾಗಿದ್ದು, ಮಾತಾಡಿದಂತೆ ಕೆಲಸ ಮಾಡಿ ತೋರಿಸುತ್ತೇನೆ. ಹೆಚ್.ಕೆ.ರಾಮು ಅವರು ಒಳ್ಳೆಯ ಅಭ್ಯರ್ಥಿ, ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ. ಹಾಗಾಗಿ ಮೊದಲ ಪ್ರಾಶಸ್ತ್ಯದ ಮತ ಅವರಿಗೆ ನೀಡಬೇಕು. ಸಾಧ್ಯವಾಗದಿದ್ದರೆ ಎರಡನೆಯ ಪ್ರಾಶಸ್ತ್ಯದ ಮತವನ್ನಾದರೂ ನೀಡಿ ಜಯಶೀಲರನ್ನಾಗಿ ಮಾಡಬೇಕು ಎಂದು ಕೋರಿದರು.

ಈ ಸಂದರ್ಭದಲ್ಲಿ ಡಾ.ಹಿತೈಷಿ, ಪಿ.ಸೋಮಣ್ಣ, ನಗರ ಜೆಡಿಎಸ್ ಅಧ್ಯಕ್ಷ ನಾಗಣ್ಣ, ರವೀಂದ್ರ, ಚಿಕ್ಕಮರೀಗೌಡ, ಗೊಂಡಶೆಟ್ಟಿ, ಮಹದೇವಪ್ರಸಾದ್, ಅಮೃತ ಶರ್ಮಾ, ಶ್ರೀರಾಂಪುರ ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಮಹದೇವ್, ಇರ್ಫಾನ್, ಶಮಿವುಲ್ಲಾ ಶರೀಫ್ ಹಾಜರಿದ್ದರು.

ಬೈಕ್‌ಗೆ ಕಾರು ಡಿಕ್ಕಿ: ಸವಾರ ಸಾವು

ಮಡಿಕೇರಿ,ಜೂ.6– ಇನ್ನೋವಾ ಕಾರು ಮತ್ತು ಬೈಕ್ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಕೇರಳ ಮೂಲದ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ಮಡಿಕೇರಿ ಹೊರ ವಲಯದ ಬೋಯಿಕೇರಿ ಬಳಿ ನಡೆದಿದ್ದು, ಬೈಕ್‌ನ ಹಿಂಬದಿ ಸವಾರನ ಕಾಲು ಮುರಿದಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಕಣ್ಣೂರು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಕಣ್ಣೂರಿನ



ಮೊಹಮ್ಮದ್ ಶಾನಿಲ್(24) ಮೃತ ಯುವಕನಾಗಿದ್ದು, ರಫ್ಯಾದ್(24) ಎಂಬಾತನ ಕಾಲಿಗೆ ಗಂಭೀರ ಗಾಯವಾಗಿದೆ.

ಘಟನೆ ವಿವರ: ಕೇರಳ ಕಣ್ಣೂರು ಮೂಲದ ಮೊಹಮ್ಮದ್ ಶಾನಿಲ್ ಮತ್ತು ರಫ್ಯಾದ್ ಅವರು ಬೆಂಗಳೂರಿಗೆ ತೆರಳಿದ್ದು, ಜೂ.5ರಂದು ರಾತ್ರಿ ಬೆಂಗಳೂರು–ಮಡಿಕೇರಿ ಮಾರ್ಗವಾಗಿ ಕೇರಳ ಕಣ್ಣೂರಿಗೆ ಹಿಂದಿರುಗುತ್ತಿದ್ದರು. ಜೂ.6ರ ಬೆಳಗಿನ ಜಾವ ಮಡಿಕೇರಿ ಹೊರ ವಲಯದ ರಾಷ್ಟ್ರೀಯ ಹೆದ್ದಾರಿ 275ನ ಸಿಂಕೋನದ ಬಳಿ ಮಡಿಕೇರಿಯಿಂದ ಬೆಂಗಳೂರು ಕಡೆಗೆ ತೆರಳುತ್ತಿದ್ದ ಇನ್ನೋವಾ ಕಾರು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಬೈಕ್ ಸವಾರ ಮೊಹಮ್ಮದ್ ಶಾನಿಲ್(24) ಸ್ಥಳದಲ್ಲೇ ಸಾವನ್ನಪ್ಪಿದರೆ, ಹಿಂಬದಿ ಸವಾರ ರಫ್ಯಾದ್(24) ಎಂಬಾತನ ಬಲಗಾಲು ಮುರಿಯಲ್ಪಟ್ಟಿದೆ.

ಮಡಿಕೇರಿ ಗ್ರಾಮಾಂತರ ಪೊಲೀಸರು ಸ್ಥಳಕ್ಕಾಗಮಿಸಿ ಮಹಜರು ನಡೆಸಿ ಮೃತದೇಹವನ್ನು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಿದರು. ಗಾಯಾಳು ರಫ್ಯಾದ್‌ನನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಕಣ್ಣೂರು ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ದೇಹವನ್ನು ಕಣ್ಣೂರಿಗೆ ರವಾನಿಸಲಾಗಿದೆ.ಅಪಘಾತದ ತೀವ್ರತೆಗೆ ಬೈಕ್ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಇನ್ನೋವಾ ಕಾರು ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಗ್ರಾಮಾಂತರ ಪೊಲೀಸರು ಕಾನೂನು ಕ್ರಮ ಕೈಗೊಂಡಿದ್ದಾರೆ.


ಸುಂಟಿಕೊಪ್ಪದಲ್ಲಿ ನಾಯಿ ಕಚ್ಚಿ ಹಲವರಿಗೆ ಗಾಯ

ಸುಂಟಿಕೊಪ್ಪ, ಜೂ.6– ಸುಂಟಿಕೊಪ್ಪ ಪಟ್ಟಣದ ಮಾರುಕಟ್ಟೆ ಬಳಿ ಹುಚ್ಚು ನಾಯಿಯೊಂದು ನುಗ್ಗಿ ಜನರಿಗೆ ಕಚ್ಚಿ ಗಾಯಗೊಳಿಸಿದ ಘಟನೆ ನಡೆದಿದೆ.



ಭಾನುವಾರದ ಸಂತೆ ಹಾಗೂ ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ ಜನರು ಪಟ್ಟಣದಲ್ಲಿ ಜಮಾವಣೆಗೊಂಡಿದ್ದಾಗ ಕಪ್ಪು ನಾಯಿಯೊಂದು ಮಕ್ಕಳು ಸೇರಿದಂತೆ ಹಲವರಿಗೆ ಕಚ್ಚಿದೆ. ಅದರಲ್ಲಿ ಸುಂಟಿಕೊಪ್ಪ ಪೊಲೀಸ್ ಠಾಣೆಯ ಎಎಸ್‌ಐ ಕಾವೇರಪ್ಪ ಅವರು ಜಾತ್ರಾ ಮಹೋತ್ಸವ ಬಂದೋಬಸ್ತ್ ಕರ್ತವ್ಯದಲ್ಲಿದ್ದಾಗ ಅವರಿಗೂ ಸೇರಿದಂತೆ ಪ್ರದೀಪ್, ಭಾಸ್ಕರ, ಜೀವನ್, ಬಿ.ಎಸ್.ಆನಂದ ಪೂಜಾರಿ, ಸೌಮ್ಯ ಸೇರಿದಂತೆ ಮತ್ತಷ್ಟು ಮಂದಿಗೆ ಹುಚ್ಚು ನಾಯಿ ಕಚ್ಚಿದೆ. ಇದರಿಂದ ಪಟ್ಟಣದಲ್ಲಿ ಆತಂಕದ ವಾತಾವರಣ ಮನೆ ಮಾಡಿತ್ತು. ನಾಯಿ ಕಡಿತದಿಂದ ಗಾಯಗೊಂಡವರು ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಸೇರಿದಂತೆ ಮತ್ತೆ ಕೆಲವು ಖಾಸಗಿ ಕ್ಲಿನಿಕ್‌ಗಳಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಇದರಿಂದ ನಾಗರಿಕರು ಭಯಭೀತರಾಗಿದ್ದು, ನಾಯಿಗಳ ಹಾವಳಿ ತಡೆಗಟ್ಟುವಂತೆ ಆಗ್ರಹಿಸಿದ್ದಾರೆ.

ನಿವೃತ್ತ ಮುಖ್ಯಶಿಕ್ಷಕ ಕೊಟ್ಟಂಗಡ ಜಿ.ಮುತ್ತಣ್ಣ ನಿಧನ



ಮೈಸೂರು, ಜೂ.6– ಮೂಲತಃ ಕೊಡಗಿನ ಬಲ್ಯಮಂಡೂರು ಗ್ರಾಮದ ಮೈಸೂರು ಗೋಕುಲಂ ನಿವಾಸಿ ಹುದಿಕೇರಿ ಪ್ರೌಢಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿದ್ದ ಕೊಟ್ಟಂಗಡ ಜಿ. ಮುತ್ತಣ್ಣ (ಡಾಲಿ–89) ಅವರು ಇಂದು ಬೆಳಗ್ಗೆ ನಿಧನರಾದರು.

ಮೃತರು ಪತ್ನಿ ಕೆ.ಎಂ. ಸುಮಿತ್ರ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಜೂ.7) ಬೆಳಗ್ಗೆ 9 ಗಂಟೆಗೆ ಗೋಕುಲಂನ ಚಿರಶಾಂತಿ ಧಾಮದಲ್ಲಿ ನೆರವೇರಲಿದೆ. ಮಾಹಿತಿಗೆ 7829997797, 9689962166 ಅನ್ನು ಸಂಪರ್ಕಿಸಿ.

ಕೊಡವ ಭೂ ರಾಜಕೀಯ ಸ್ವಾಯತ್ತತೆಗೆ ಒತ್ತಾಯಿಸಿ ಸಿಎನ್‌ಸಿ ಧರಣಿ



ಮಡಿಕೇರಿ, ಜೂ.6–ಕೊಡಗು ಕರ್ನಾಟಕ ರಾಜ್ಯದಲ್ಲಿ ವಿಲೀನವಾದ ನಂತರ ಕೊಡವ ಬುಡಕಟ್ಟು ಜನಾಂಗವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ, ಕಲ್ಯಾಣ ರಾಜ್ಯ ಗಗನ ಕುಸುಮವಾಗಿದೆ ಎಂದು ಆರೋಪಿಸಿರುವ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ, ಸಂವಿಧಾನ ಪರಾಮರ್ಶೆ ಆಯೋಗ ವರದಿಯನ್ವಯ ಕೊಡವ ಭೂ ರಾಜಕೀಯ ಸ್ವಾಯತ್ತೆ ಕಲ್ಪಿಸಬೇಕು ಎಂದು ಒತ್ತಾಯಿಸಿ ಧರಣಿ ನಡೆಸಿತು.

ನಗರದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಕೊಡವ ಸಾಂಪ್ರದಾಯಿಕ ಉಡುಪಿನಲ್ಲಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಧರಣಿ ನಡೆಸಿದ ಪ್ರಮುಖರು, ಸಂವಿಧಾನದ 338ನೇ ವಿಧಿಯನ್ನು ಆವಾಹಿಸಲು ರಾಷ್ಟ್ರೀಯ ಬುಡಕಟ್ಟು ಆಯೋಗಕ್ಕೆ ನಿರ್ದೇಶಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯದಲ್ಲಿ ಕೊಡಗು ವಿಲೀನವಾದ ನಂತರ ಕೊಡವರ ಎಲ್ಲಾ ಭರವಸೆಗಳು ಮತ್ತು ಆಕಾಂಕ್ಷೆಗಳನ್ನು ಹತ್ತಿಕ್ಕಲಾಯಿತು. ಕೊಡವ ಬುಡಕಟ್ಟು ಜನಾಂಗ ಮೂಲೆಗುಂಪಾಗುತ್ತಿದ್ದು, ಕೊಡಗನ್ನು ಕೇವಲ ಸಂಪನ್ಮೂಲ ಉತ್ಪಾದಿಸುವ ಕೇಂದ್ರವನ್ನಾಗಿ ಪರಿಗಣಿಸಲಾಗುತ್ತಿದೆ. ರಾಜ್ಯ ಸರಕಾರದ ಅಧಿಕಾರ ವರ್ಗ ಜನರಿಗೆ ಸೇವೆ ಸಲ್ಲಿಸುವ ಬದಲು ಔದ್ಯೋಗಿಕ ಶಕ್ತಿಗಳಾಗಿ ಕಾರ್ಯ ನಿರ್ವಹಿಸುತ್ತಿದೆ. ಕೊಡವ ಜನಾಂಗವನ್ನು ಸ್ವಂತ ತಾಯ್ನಾಡಿನಲ್ಲಿ 2ನೇ ದರ್ಜೆಯ ಪ್ರಜೆಗಳಂತೆ ನೋಡಲಾಗುತ್ತಿದೆ ಎಂದು ನಾಚಪ್ಪ ಆರೋಪಿಸಿದರು.

ರಾಜ್ಯದೊಂದಿಗೆ ವಿಲೀನವಾಗುವ ಸಂದರ್ಭ ಮಾಡಲಾಗಿದ್ದ ಅಲಿಖಿತ ಒಪ್ಪಂದ ಮತ್ತು ರಾಜ್ಯ ಮರು–ಸಂಘಟನೆ ಕಾಯ್ದೆಯ ಪ್ರಕ್ರಿಯೆಗಳನ್ನು ಬುಡಮೇಲು ಮಾಡಲಾಗಿದೆ. ಇದೇ ಕಾರಣದಿಂದ ಕೊಡವರಿಗೆ ಇಂದು ಯಾವುದೇ ಭದ್ರತೆ ಅಥವಾ ಸುರಕ್ಷೆ ಇಲ್ಲದಾಗಿದೆ. ನಮ್ಮ ನೆಲ, ಭಾಷೆ, ಜಾನಪದ ಗುರುತು, ಸಾಂಸ್ಕೃತಿಕ ಪರಂಪರೆ, ಭೌಗೋಳಿಕ ನೆಲೆ ಮತ್ತು ಕೊಡವ ಮಾನವ ಸಂಪನ್ಮೂಲಗಳ ಬಗ್ಗೆ ರಾಜ್ಯ ಪ್ರಾಬಲ್ಯದ ಆಡಳಿತಗಾರರು ಗೌರವ ಹೊಂದಿಲ್ಲ ಎಂದು ನಾಚಪ್ಪ ಅಸಮಾಧಾನ ವ್ಯಕ್ತಪಡಿಸಿದರು.

2002ರಲ್ಲಿ ಭಾರತದ ಸಂವಿಧಾನ ಪರಿಶೀಲನಾ ಆಯೋಗ ಶಿಫಾರಸು ಮಾಡಿರುವಂತೆ ಸಂವಿಧಾನದ 371ನೇ ವಿಧಿಯಡಿಯಲ್ಲಿ ಕೊಡವಲ್ಯಾಂಡ್ ಜಿಯೋ–ರಾಜಕೀಯ ಸ್ವಾಯತ್ತತೆಯನ್ನು ನೀಡುವ ಮೂಲಕ ಕೊಡವರಿಗೆ ಭದ್ರತೆ ಕಲ್ಪಿಸಬೇಕು.ಸಂವಿಧಾನದ 25 ಮತ್ತು 26ನೇ ವಿಧಿಯಂತೆ ಸಿಖ್ಖರ ಕಿರ್ಪಾನ್‌ಗೆ ಸಮಾನವಾಗಿ 'ಕೊಡವ ಜನಾಂಗೀಯ ಸಂಸ್ಕಾರ ಗನ್' ಅನ್ನು ಸೇರಿಸಬೇಕು. ವಿಶಿಷ್ಟವಾಗಿರುವ ಕೊಡವ ಜನಾಂಗ ಅಳಿವಿನಂಚಿನಲ್ಲಿದ್ದು, ಸಂವಿಧಾನದಲ್ಲಿ ಕೊಡವರನ್ನು ಅಧಿಕೃತವಾಗಿ ಬುಡಕಟ್ಟು ಜನರೆಂದು ಘೋಷಿಸುವ ಮೂಲಕ ಶಾಸನಬದ್ಧ ಖಾತ್ರಿಯನ್ನು ನೀಡಬೇಕು. ಎಸ್‌ಟಿ ಪಟ್ಟಿಯಲ್ಲಿ ಸೇರಿಸಲು ಅನುಕೂಲವಾಗುವಂತೆ 'ಎಮಿಕ್' ವಿಧಾನದೊಂದಿಗೆ ಕೊಡವ ಜನಾಂಗದ ಕುರಿತು ಸಮಗ್ರ ಅಧ್ಯಯನ ನಡೆಸಬೇಕು ಎಂದು ಒತ್ತಾಯಿಸಿದರು.

ಶೇ.98ರಷ್ಟು ಕೊಡವರು ಜನಾಂಗದ ಸ್ವಾಭಿಮಾನವನ್ನು ಕಾಪಾಡುವ ಬದ್ಧತೆಯನ್ನು ಹೊಂದಿದ್ದಾರೆ. ಈ ಮಂದಿ ಎಲ್ಲಾ ರೀತಿಯ ಉದ್ಯೋಗ ಮೀಸಲಾತಿ ಮತ್ತು ಸರಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇವರಿಗೆ ಕಲ್ಯಾಣ ರಾಜ್ಯ ಎನ್ನುವುದು ಗಗನಕುಸುಮವಾಗಿದೆ. ಕೊಡವರಿಗಾಗುತ್ತಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತಿದಾಗಲೆಲ್ಲಾ ಉಳಿದಿರುವ ಶೇ.2ರಷ್ಟು ಮಂದಿಯನ್ನು ಆಡಳಿತ ವ್ಯವಸ್ಥೆ ಚೆಕ್‌ಮೇಟ್ ಆಗಿ ಬಳಸಿಕೊಳ್ಳುತ್ತಿದೆ. ಅಲ್ಲದೆ ಕೊಡವರು ಉನ್ನತ ಸ್ಥಿತಿಯಲ್ಲಿದ್ದಾರೆಂದು ವಿಶ್ವಕ್ಕೆ ಪ್ರತಿಬಿಂಬಿಸುತ್ತಿದೆ. ಶೇ.2ರಷ್ಟು ಮಂದಿಗೆ ಯಾವುದೇ ಸಾಂವಿಧಾನಿಕ ಪೋಷಣೆ ಅಥವಾ ಶಾಸನಬದ್ಧ ಸಬಲೀಕರಣದ ಅಗತ್ಯವಿಲ್ಲ. ಇದು ಅಧಿಕಾರಿಗಳು ವ್ಯವಸ್ಥಿತವಾಗಿ ರೂಪಿಸಿದ ಕುತಂತ್ರವೂ ಆಗಿದೆ ಎಂದು ನಾಚಪ್ಪ ಕಿಡಿಕಾರಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ ಅವರ ಮೂಲಕ ಸರಕಾರಕ್ಕೆ ವಿವಿಧ ಬೇಡಿಕೆಗಳ ಮನವಿ ಪತ್ರವನ್ನು ಈ ವೇಳೆ ಸಲ್ಲಿಸಿದರು. ಸಿಎನ್‌ಸಿ ಪ್ರಮುಖರಾದ ಬೊಟ್ಟಂಗಡ ಸವಿತಾ ಗಿರೀಶ್, ಅಜ್ಜಿನಿಕಂಡ ಇನಿತಾ ಮಾಚಯ್ಯ, ಪಟ್ಟಮಾಡ ಲಲಿತಾ ಗಣಪತಿ, ಅರೆಯಡ ಸವಿತಾ, ಚೋಳಪಂಡ ಜ್ಯೋತಿ ನಾಣಯ್ಯ, ಕಲಿಯಂಡ ಪ್ರಕಾಶ್, ಅರೆಯಡ ಗಿರೀಶ್, ಬೇಪಡಿಯಂಡ ದಿನು, ಕಾಟುಮಣಿಯಂಡ ಶರಿನ್, ಕಾಟುಮಣಿಯಂಡ ಉಮೇಶ್, ಮಂದಪಂಡ ಮನೋಜ್, ಮಣೋಟೀರ ಚಿನ್ನಪ್ಪ, ಪುಟ್ಟಿಚಂಡ ದೇವಯ್ಯ, ಮೇದೂರ ಕಂಟಿ ನಾಣಿಯಪ್ಪ, ಪುದಿಯೊಕ್ಕಡ ಕಾಶಿ, ಅಜ್ಜಿನಿಕಂಡ ಸನ್ನಿ ಮಾಚಯ್ಯ, ಬೊಟ್ಟಂಗಡ ಬೋಪಣ್ಣ, ಮಂದಪ್ಪಂಡ ದೀಪು, ಕಿರಿಯಮಾಡ ಶೆರಿನ್ ಬೊಟ್ಟಂಗಡ ಗಿರೀಶ್, ಅಜ್ಜಿಕುಟ್ಟೀರ ಲೋಕೇಶ್, ಚಂಬಂಡ ಜನತ್ ಹಾಗೂ ಬಾಚರಣಿಯಂಡ ಚಿಪ್ಪಣ್ಣ ಧರಣಿಯಲ್ಲಿ ಪಾಲ್ಗೊಂಡು ಹಕ್ಕೊತ್ತಾಯಗಳ ಪ್ರತಿಪಾದನೆಯ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ಪರಿಸರ ದಿನಾಚರಣೆ



ವಿರಾಜಪೇಟೆ, ಜೂ.6– ಮನುಷ್ಯ ಜೀವಿ ಏಕಾಂಗಿಯಲ್ಲ, ಅವನ ಸುತ್ತ–ಮುತ್ತ ಕಾಡು, ಮರ, ಬೆಟ್ಟ–ಗುಡ್ಡ, ನದಿ, ಕಲ್ಲು, ಪ್ರಾಣಿ, ಪಕ್ಷಿ, ಕ್ರಿಮಿ ಕೀಟಗಳು ಸೇರಿದಂತೆ ಎಲ್ಲವೂ ಇವೆ, ಇವುಗಳನ್ನು ಒಳಗೊಂಡ ಸಮೂಹವೇ ಪರಿಸರ ಆದ್ದರಿಂದ ಪರಿಸರವನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ದಿನೇಶ್ ಹೇಳಿದರು.

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ವಿರಾಜಪೇಟೆ ತಾಲೂಕಿನ ಆಯ್ದ ಶಾಲೆಗಳು, ದೇವಸ್ಥಾನ, ಅಂಗನವಾಡಿ ಕೇಂದ್ರದ ಆವರಣ ಹಾಗೂ ದೇವರ ಕಾಡು ಮತ್ತು ರುದ್ರಭೂಮಿ ಸೇರಿದಂತೆ ಇತರೆಡೆಗಳಲ್ಲಿ ಹಣ್ಣಿನ ಹಾಗೂ ಇತರ ಗಿಡಗಳನ್ನು ನಾಟಿ ಮಾಡಿ ಮಾತನಾಡಿದ ಅವರು, ಪರಿಸರ ಉಳಿದರೆ ಮಾತ್ರ ನಾವು ಉಳಿದೇವು. ಮನೆಗೊಂದು ಗಿಡವನ್ನು ಎಲ್ಲರೂ ನೆಡುವಂತಾದರೆ ಊರಿಗೊಂದು ವನ ಮತ್ತು ಶಾಲೆಗೊಂದು ಹಣ್ಣಿನ ತೋಟ. ಆದ್ದರಿಂದ ಪ್ರತಿಯೊಬ್ಬರು ಗಿಡ ನೆಡುವುದು ಮತ್ತು ಅದನ್ನು ಪೋಷಿಸುವಂತಾಗಬೇಕು ಎಂದರು. ಗಿಡ ನೆಡುವ ಕಾರ್ಯಕ್ರಮದಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಪ್ರಗತಿ ಬಂಧು ಸ್ವ ಸಹಾಯ ಸಂಘಗಳ ಒಕ್ಕೂಟದ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರುಗಳು, ಸ್ಥಳೀಯ ಜನಪ್ರತಿನಿಧಿಗಳು, ಯೋಜನೆಯ ತಾಲೂಕು ಶೌರ್ಯ ವಿಪತ್ತು ನಿರ್ವಹಣಾ ತಂಡದ ಸಂಯೋಜಕರು, ಸ್ವಯಂ ಸೇವಕರು, ವಲಯ ಅರಣ್ಯ ಮತ್ತು ಸಾಮಾಜಿಕ ಅರಣ್ಯ ಇಲಾಖೆ, ಗ್ರಾಮ ಪಂಚಾಯಿತಿ, ಶಾಲಾ ಅಭಿವೃದ್ಧಿ ಸಮಿತಿ, ಸದಸ್ಯರುಗಳು ಸೇರಿದಂತೆ ಹಲವರು ಭಾಗವಹಿಸಿದ್ದರು.

ಕುಶಾಲನಗರದಲ್ಲಿ ಕ್ರೀಡಾ ಉತ್ಸವಕ್ಕೆ ಚಾಲನೆ



ಕುಶಾಲನಗರ, ಜೂ.6– ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಶತಮಾನೋತ್ಸವದ ಅಂಗವಾಗಿ ಜಿಎಂಪಿ ಶಾಲಾ ಮೈದಾನದಲ್ಲಿ ಕ್ರೀಡಾ ಉತ್ಸವಕ್ಕೆ ಚಾಲನೆ ನೀಡಲಾಯಿತು. ಎರಡು ದಿನಗಳ ಕಾಲ ನಡೆಯಲಿರುವ ಕ್ರೀಡೋತ್ಸವಕ್ಕೆ ನಿವೃತ್ತ ಮುಖ್ಯ ಶಿಕ್ಷಕ ನಜೀರ್ ಅಹಮ್ಮದ್ ಚಾಲನೆ ನೀಡಿ ಮಾತನಾಡಿ, ದೈಹಿಕ ವ್ಯಾಯಾಮಕ್ಕೆ ಹೆಚ್ಚಿನ ಒತ್ತು ನೀಡಿ ಆರೋಗ್ಯಕರ, ಸದೃಢ ಶರೀರ ಹೊಂದುವಂತೆ ಸಲಹೆ ನೀಡಿದರು.

ಸಂಘದ ಅಧ್ಯಕ್ಷ ಟಿ.ಆರ್.ಶರವಣಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಘದ ಇತಿಹಾಸ, ಸಾಧನೆಗಳ ಬಗ್ಗೆ ವಿವರಿಸಿದರು. ಮುಖ್ಯಅತಿಥಿಗಳಾಗಿ ಸ.ಮಾ.ಪ್ರಾ.ಶಾಲಾ ಮುಖ್ಯ ಶಿಕ್ಷಕಿ ಕೆ.ಆರ್.ರಾಣಿ, ಸಂಘದ ಉಪಾಧ್ಯಕ್ಷ ವಿ.ಎಸ್.ಆನಂದಕುಮಾರ್, ನಿರ್ದೇಶಕರಾದ ಪಿ.ಬಿ.ಮೋಹನ್, ಕವಿತಾ, ಡಿ.ವಿ.ರಾಜೇಶ್, ಮಧು ಕುಮಾರ್, ಎಚ್.ಎಂ.ಮಧುಸೂದನ್, ಇತರರಿದ್ದರು. ಕ್ರೀಡಾ ಉತ್ಸವದಲ್ಲಿ ಸಂಘದ ಸದಸ್ಯ ಕುಟುಂದವರಿಗೆ ಕ್ರಿಕೆಟ್, ಕಬಡ್ಡಿ, ಥ್ರೋಬಾಲ್, ಹಗ್ಗಜಗ್ಗಾಟ, ಓಟದ ಸ್ಪರ್ಧೆ ಮತ್ತಿತರ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.

ನಾಳೆಯಿಂದ ಶ್ರೀ ಕಾಳಿಕಾಂಬ ದೇವಿಯ ಮೂರ್ತಿ ಪ್ರತಿಷ್ಠಾಪನೆ

ಸೋಮವಾರಪೇಟೆ, ಜೂ.6– ತಾಲೂಕಿನ ಹೆಮ್ಮನಗದ್ದೆಯಲ್ಲಿ ಶ್ರೀ ಕಾಳಿಕಾಂಬ ದೇವಿಯ ನೂತನ ಶಿಲಾ ಮೂರ್ತಿ ಪ್ರತಿಷ್ಠಾಪನಾ ಮಹೋತ್ಸವ ಜೂ.8 ಮತ್ತು 9 ರಂದು ನಡೆಯಲಿದೆ ಎಂದು ಕಾಳಿಕಾಂಬ ಸೇವಾ ಸಮಿತಿ ತಿಳಿಸಿದೆ.

ಜೂ.8ರ ಬುಧವಾರ ಬೆಳಗ್ಗೆ ಧರ್ಮ ಧ್ವಜಾರೋಹಣ, ಮಹಾಗಣಪತಿ, ಗಂಗೆಯನ್ನು ಸಕಲ ವಾದ್ಯಗೋಷ್ಠಿಯೊಂದಿಗೆ ಮೆರವಣಿಗೆಯಲ್ಲಿ ದೇವಾಲಯಕ್ಕೆ ತರಲಾಗುವುದು. ನಂತರ ಮಹಾಗಣಪತಿ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ ಸೇರಿದಂತೆ ಪೂಜಾ ವಿಧಿಗಳು ನಡೆಯಲಿವೆ.

ಜೂ.9ರ ಗುರುವಾರ ಬೆಳಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮಗಳು ನಡೆಯುವುದು. ನಂತರ ಬೆಳಗ್ಗೆ 11 ಗಂಟೆಗೆ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯುವುದು. ಅರಕಲಗೂಡು ತಾಲೂಕಿನ ಅರೆಮಾದನಹಳ್ಳಿಯ ಸುಜ್ಞಾನ ಪ್ರಭುಪೀಠದ ಶ್ರೀ ಶಿವಸುಜ್ಞಾನ ತೀರ್ಥ ಮಹಾ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಕೊಡ್ಲಿಪೇಟೆಯ ಕಿರಿಕೊಡ್ಲಿ ಮಠದ ಶ್ರೀ ಸದಾಶಿವ ಸ್ವಾಮೀಜಿ ಉಪಸ್ಥಿತರಿರುವರು. ಅಧ್ಯಕ್ಷತೆಯನ್ನು ಕಾಳಿಕಾಂಬ ದೇವಾಲಯ ಸಮಿತಿಯ ಅಧ್ಯಕ್ಷ ಎಚ್.ಆರ್. ಗೋಪಾಲ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಅಪ್ಪಚ್ಚು ರಂಜನ್, ವಿಧಾನ ಪರಿಷತ್ ಮಾಜಿ ಸದಸ್ಯ ಎಸ್.ಜಿ.ಮೇದಪ್ಪ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷೆ ಲೋಕೇಶ್ವರಿ ಗೋಪಾಲ್, ಶಾಂತಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ.ಎ.ಧರ್ಮಪ್ಪ ಸೇರಿದಂತೆ ಹಲವರು ಪಾಲ್ಗೊಳ್ಳಲಿದ್ದಾರೆ ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಎಚ್.ಎಲ್ ಪ್ರಸನ್ನ ತಿಳಿಸಿದ್ದಾರೆ.

ಹೈಕೋರ್ಟ್ ಹಿರಿಯ ವಕೀಲರಿಗೆ ಸನ್ಮಾನ



ಮೈಸೂರಿಗೆ ಆಗಮಿಸಿದ ಹೈಕೋರ್ಟ್‌ನ ಹಿರಿಯ ವಕೀಲ ಎಸ್.ಪಿ.ಶಂಕರ್ ಅವರನ್ನು ಮೈಸೂರಿನ ವಕೀಲರಾದ ಎಸ್.ಲೋಕೇಶ್ ಹಾಗೂ ಹೆಚ್.ಎನ್.ವೆಂಕಟೇಶ್ ಆತ್ಮೀಯವಾಗಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ವಕೀಲರಾದ ಆರ್.ಗಿರಿಜೇಶ್, ಶ್ರೀಮತಿ ಮಮತ ಕುಲಕರ್ಣಿ, ಗಂಗಾಧರ್, ಮಂಜು ಹಾಗೂ ವಿ.ಪ್ರಕಾಶ್ ಹಾಜರಿದ್ದರು.

ಪಂಚೆ ಬಿದ್ದ ನಂತರ ಮಾನ ಕಾಪಾಡಿದ್ದೇ ಚಡ್ಡಿ

● ಸಿದ್ದರಾಮಯ್ಯರಿಗೆ ಬಿಜೆಪಿ ಎಚ್ಚರಿಕೆ ● ಮುಂದುವರಿದ ಚಡ್ಡಿ ಸಂಘರ್ಷ

ಬೆಂಗಳೂರು: ಚಡ್ಡಿ ಸುಡುವ ಅಭಿಯಾನ ಆರಂಭಿಸುವುದಾಗಿ ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿಕೆ ಬೆನ್ನಲ್ಲೆ ಬಿಜೆಪಿ ರಾಜ್ಯ ಘಟಕ ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದೆ. ಈ ಸಂಬಂಧ ಟ್ವೀಟ್ ಮಾಡಿರುವ ಬಿಜೆಪಿ ಪಂಚೆ ಬಿದ್ದ ನಂತರ ಮಾನ ಕಾಪಾಡಿದ್ದೇ ಚಡ್ಡಿ! ಚಡ್ಡಿ ಸುಟ್ಟ ಬಳಿಕ ಪಂಚೆ ಗಟ್ಟಿಯಾಗಿರಲಿ! ಚಡ್ಡಿ ಸುಡುವುದು ಸಾಂಕೇತಿಕ ಪ್ರತಿಭಟನೆ ಎಂದು ವ್ಯಾಖ್ಯಾನಿಸುವ ಸಿದ್ದರಾಮಯ್ಯ ಅವರೇ, ಜವಾಹರ ಲಾಲ್ ನೆಹರೂ ಅವರೂ ಚಡ್ಡಿ ತೊಟ್ಟಿದ್ದು ಗೊತ್ತೇ, ಹಾಗಾದರೆ ನಿಮ್ಮ ಪ್ರತಿಭಟನೆಯ ವ್ಯಾಪ್ತಿಯಲ್ಲಿ ನೆಹರೂ ಅವರೂ ಇದ್ದಾರಾ ಎಂದು ತಿರುಗೇಟು ನೀಡಿದೆ.

ತುಂಡುಬಟ್ಟೆ ಇದ್ದರೆ ಸಾಕು ಮಾನ ಮುಚ್ಚೋಕೆ...! ಅದನ್ನೇ ಸುಟ್ಟು ಏನು ಸಾಧಿಸಲು ಹೊರಟಿದ್ದೀರಿ ಸಿದ್ದರಾಮಯ್ಯನವರೇ? ಚಡ್ಡಿ ಸುಡುವ ಅಭಿಯಾನ ಆರಂಭಿಸುವುದಕ್ಕೆ ಮುನ್ನ ನಿಮ್ಮ ಕಾರ್ಯಕರ್ತರಿಗೆ ಒಂದು ಎಚ್ಚರಿಕೆ ನೀಡಿ. ನಲಪಾಡ್ ಅವನಂಥಹ ಬೀದಿ ರೌಡಿಗಳು ಬೇರೆಯವರ ಚಡ್ಡಿ ಕದ್ದು ಸುಡುವ ಅಪಾಯವಿದೆ ಎಂದು ಟಾಂಗ್ ನೀಡಿದೆ. ಸಿದ್ದರಾಮಯ್ಯನವರೇ, ಚಡ್ಡಿ ಮಾನದ ಸಂಕೇತ. ಶ್ರಮಿಕ ವರ್ಗದ ಸಂಕೇತ. ನೀವು ಚಡ್ಡಿ ಸುಡುವ ಅಭಿಯಾನ ನಡೆಸಿ ನಿಮ್ಮ ಮಾನವನ್ನು ನೀವೇ ಸುಟ್ಟುಕೊಳ್ಳಲು ಹೊರಟಿದ್ದೀರಿ. ದೇಶಾದ್ಯಂತ ಸೋತು ಸುಣ್ಣವಾಗಿರುವ ಕಾಂಗ್ರೆಸ್ ನಾಯಕರಿಗೆ ಈಗ ಉದ್ಯೋಗವಿಲ್ಲ. ಚಡ್ಡಿ ಸುಡುವ ಅಭಿಯಾನ ನಡೆಸಿ ಮತ್ತೆ ದೇಶದ ಜನರ ಮುಂದೆ ಬೆತ್ತಲಾಗಲು ಹೊರಟಿದ್ದಾರಷ್ಟೆ! ಎಂದು ಬಿಜೆಪಿ ಲೇವಡಿ ಮಾಡಿದೆ.

ಮೈಸೂರು ವಿವಿಯಲ್ಲಿ ಇಂದು ಪರಿಸರ ದಿನ

ಮೈಸೂರು, ಜೂ.6– ಮೈಸೂರು ವಿಶ್ವವಿದ್ಯಾನಿಲಯದ ಭೂ ವಿಜ್ಞಾನ ವಿಭಾಗದ ವತಿಯಿಂದ ವಿಶ್ವ ಪರಿಸರ ದಿನವನ್ನು ಜೂ.7ರಂದು ಬೆಳಗ್ಗೆ 10 ಗಂಟೆಗೆ ವಿವಿಯ ಭೂವಿಜ್ಞಾನ ಅಧ್ಯಯನ ಕೇಂದ್ರದಲ್ಲಿ ಆಯೋಜಿಸಿದೆ. ಮುಖ್ಯ ಅತಿಥಿಗಳಾಗಿ ಮೈಸೂರಿನ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪಿ.ಶ್ರೀಧರ್ ಆಗಮಿಸಲಿದ್ದು, ವಿವಿ ಭೂವಿಜ್ಞಾನ ವಿಭಾಗ ಮುಖ್ಯಸ್ಥರಾದ ಪ್ರೊ.ಪಿ.ಜಯಶ್ರೀ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಒಂದನೇ ಪುಟದಿಂದ

ಪುನಾರಚನೆ

ಅವರು ತಮ್ಮ ಮಗನಿಗೆ ಸಂಪುಟದಲ್ಲಿ ಸ್ಥಾನ ಕೊಡಿಸಬೇಕೆಂದು ಸಾಕಷ್ಟು ಪ್ರಯತ್ನಗಳನ್ನು ನಡೆಸಿದ್ದರೂ ಅದು ವಿಫಲವಾಗಿದೆ. ಅಲ್ಲದೆ, ಅವರನ್ನು ಎಂಎಲ್ಸಿ ಮಾಡುವ ಪ್ರಯತ್ನ ಕೂಡ ವಿಫಲವಾಗಿದೆ. ಈ ಬೆಳವಣಿಗೆ ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆ ಮೇಲೆ ಪರಿಣಾಮ ಬೀರಲಿದೆ ಎಂದು ಮೂಲಗಳು ತಿಳಿಸಿವೆ. ಈ ಬಾರಿ ಸಚಿವ ಸಂಪುಟ ವಿಸ್ತರಣೆಯಾದ ಬಳಿಕ ಪಕ್ಷದಲ್ಲಿ ಸಾಕಷ್ಟು ಅಸಮಾಧಾನಗಳು ವ್ಯಕ್ತವಾಗಲಿದೆ. ಹಲವರು ಪಕ್ಷ ತೊರೆಯುವ ಸಾಧ್ಯತೆಗಳಿವೆ ಎಂದು ಹಿರಿಯ ರಾಜಕೀಯ ವಿಶ್ಲೇಷಕರೊಬ್ಬರು ಹೇಳಿದ್ದಾರೆ. ಹೀಗಾಗಿ ಪಕ್ಷವು ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಿದ್ದು, ಚುನಾವಣೆ ಹಿನ್ನೆಲೆಯಲ್ಲಿ ಎಲ್ಲರಿಗೂ ಅವಕಾಶ ಕಲ್ಪಿಸಲು ಪ್ರಯತ್ನಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಆತಂಕಪಡುವ ಅಗತ್ಯವಿಲ್ಲ

ಮುಕ್ತವಾಗಿದ್ದೇವೆ. ತಪ್ಪುಗಳನ್ನು ಸರಿಪಡಿಸಲು ಸಿದ್ಧರಿದ್ದೇವೆ. ಅದ್ಯಾವುದರ ಬಗ್ಗೆಯೇ ಆಗಲಿ ಸರಿಪಡಿಸಿ ಮರುಮುದ್ರಣ ಮಾಡಲಾಗುವುದು. ಪೀರ್ ಪಾಷಾ ದರ್ಗಾ ಕುರಿತು ಸಂಶೋಧನೆ ಮಾಡಿಸುವಂತೆ ಸ್ವಾಮೀಜಿಗಳು ಮನವಿ ನೀಡಿದ್ದಾರೆ. ಪುರಾತತ್ವ ಇಲಾಖೆ ಪರಿಶೀಲನೆ ನಡೆಸಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ತಲಾ 5 ಲಕ್ಷ ರೂ.ಗಳ ಪರಿಹಾರ: ರಾಯಚೂರಿನಲ್ಲಿ ಕಲುಷಿತ ನೀರು ಕುಡಿದು ಮೂವರು ಸಾವಿಗೀಡಾಗಿರುವವರಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತಲಾ 5 ಲಕ್ಷ ರೂ.ಗಳ ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ತಿಳಿಸಿದರು.

ಪ್ರಕರಣವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಪ್ರಕರಣದ ಸಂಪೂರ್ಣ ತನಿಖೆ ಮಾಡಿ ತಾಂತ್ರಿಕ ವರದಿ ಸಲ್ಲಿಸುವಂತೆ ಕೆ. ಡಬ್ಲ್ಯೂ. ಎಸ್.ಎಸ್.ಬಿ ಮುಖ್ಯ ಇಂಜಿನಿಯರ್‌ಗೆ ಸೂಚಿಸಲಾಗಿದೆ. ರಾಯಚೂರಿನ ಎಲ್ಲಾ ವಾರ್ಡ್‌ಗಳ ನೀರಿನ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಬೇಕು. ಕುಡಿಯುವ ನೀರಿನ ಸುರಕ್ಷತೆಯ ಬಗ್ಗೆ ಪ್ರಮಾಣೀಕರಣವಾಗಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಅಧಿಕಾರಿಗಳ ಲೋಪದೋಷವಿದೆಯೇ ಎಂಬ ಬಗ್ಗೆಯೂ ಅಲ್ಲಿಯ ಡಿವೈಎಸ್ಪಿ ನೇತೃತ್ವದಲ್ಲಿ ಪೊಲೀಸ್ ತನಿಖೆಯನ್ನು ಕೂಡ ಕೈಗೊಳ್ಳಲಾಗುವುದು. ತಪ್ಪಿತಸ್ಥರಿದ್ದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಮಂಜೇಗೌಡರಿಗೆ ಸಮನ್ಸ್

ಆಸ್ತಿ ಕುರಿತಾದ ದಾಖಲೆಗಳು ಹಾಗೂ ಅವರ ಮೇಲಿರುವ ಪ್ರಕರಣಗಳ ಬಗ್ಗೆ ಮಾಹಿತಿ ಸೇರಿದಂತೆ ಅಗತ್ಯ ದಾಖಲೆಗಳನ್ನು ಒದಗಿಸಿರಲಿಲ್ಲ. ಇದು ಚುನಾವಣಾ ಪ್ರಕ್ರಿಯೆಯಲ್ಲಿ ಆಗಿರುವ ದೊಡ್ಡ ಲೋಪವಾಗಿದ್ದು, ಈ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಅಂದೇ ದೂರು ಸಲ್ಲಿಸಲಾಯಿತಾದರೂ ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಡಾ. ಡಿ.ತಿಮ್ಮಯ್ಯ ಮತ್ತು ಸಿ.ಎನ್.ಮಂಜೇಗೌಡ ಅವರನ್ನು ಅನರ್ಹಗೊಳಿಸಿ ಚುನಾವಣಾ ಆಯೋಗದ ನೀತಿ ನಿಯಮಗಳನ್ನು ಸಮರ್ಪಕವಾಗಿ ಪಾಲಿಸಿರುವ ತನ್ನನ್ನು ಪರಿಷತ್ ಸದಸ್ಯನನ್ನಾಗಿ ಆಯ್ಕೆ ಮಾಡಬೇಕು ಎಂದು ರಘು ಕೌಟಿಲ್ಯ ಹೈಕೋರ್ಟ್ ಮೊರೆ ಹೋಗಿದ್ದರು.

ಇಂದು ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಡಾ.ತಿಮ್ಮಯ್ಯ ಮತ್ತು ಸಿ.ಎನ್. ಮಂಜೇಗೌಡರಿಗೆ ಸಮನ್ಸ್ ಜಾರಿ ಮಾಡಿ ವಿಚಾರಣೆಯನ್ನು ಜೂ.27ಕ್ಕೆ ಮುಂದೂಡಿದೆ. ರಘು ಕೌಟಿಲ್ಯ ಪರ ಹೈಕೋರ್ಟ್ ವಕೀಲರಾದ ಶರತ್‌ಗೌಡ ವಾದ ಮಂಡಿಸಿದ್ದರು.

ಯೋಗಕ್ಕೆ ವೇಗ

ಪ್ರತಿ ಶಾಲೆಯಲ್ಲಿ ಕನಿಷ್ಠ ಎರಡರಿಂದ ಮೂವರು ಯೋಗ ಶಿಕ್ಷಕರಿದ್ದಾರೆ. 450ಕ್ಕೂ ಹೆಚ್ಚು ಶಾಲೆಗಳಲ್ಲಿ ಖಾಯಂ ಆಗಿ ಯೋಗ ಶಿಕ್ಷಕರನ್ನು ಹೊಂದಿವೆ. 400ಕ್ಕೂ ಅಧಿಕ ಜಿಮ್‌ಗಳಲ್ಲೂ ಯೋಗ ಕಲಿಸಲಾಗುತ್ತಿದೆ ಎಂದು ತಿಳಿಸಿದರು.

ಮೈಸೂರು ಯೋಗ ಒಕ್ಕೂಟವು 250ಕ್ಕೂ ಹೆಚ್ಚು ಸಂಸ್ಥೆಗಳು ಸದಸ್ಯತ್ವ ಪಡೆದಿವೆ. ಇದರೊಂದಿಗೆ ತಮ್ಮ ಅನುಭವದಲ್ಲಿ ಯೋಗ ಕಲಿಸುತ್ತಿರುವವರಿಂದಲೂ ಯೋಗ ವ್ಯಾಪ್ತಿ ಹೆಚ್ಚಾಗುತ್ತಿದೆ. ಅಂತರರಾಷ್ಟ್ರೀಯ ಯೋಗ ದಿನದ ಮೊದಲ ವರ್ಷ 10 ಸಾವಿರ ಮಂದಿ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು. ಆ ನಂತರ ಅದರ ಸಂಖ್ಯೆ 55 ಸಾವಿರಕ್ಕೆ ಹೆಚ್ಚಳವಾಯಿತು. ಪ್ರಸ್ತುತ ಯೋಗಾಭ್ಯಾಸ ಮಾಡುವವರ ಸಂಖ್ಯೆ ಲಕ್ಷದ ಗಡಿಯನ್ನೂ ದಾಟಿದೆ. ಅದರಲ್ಲಿ ಪ್ರತಿದಿನ 75 ಸಾವಿರ ಮಂದಿ ಯೋಗಾಭ್ಯಾಸ ಮಾಡುತ್ತಿರುವುದು ವಿಶೇಷ. ಕಳೆದ ವರ್ಷ, ಕೋವಿಡ್‌ನಿಂದಾಗಿ ಆನ್‌ಲೈನ್ ಮೂಲಕ ನಡೆಸಿದ ಯೋಗ ಪ್ರದರ್ಶನದಲ್ಲಿ ಲಕ್ಷಕ್ಕೂ ಹೆಚ್ಚು ಭಾಗವಹಿಸಿದ್ದರು ಎಂದರು.

ಮೈಸೂರಲ್ಲಿ ಯೋಗ ಶಿಕ್ಷಣ ನೀಡುವ ಪ್ರಮುಖ ಸಂಸ್ಥೆಗಳಲ್ಲಿ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಯೋಗ ಕ್ರೀಡಾ ಪ್ರತಿಷ್ಠಾನ, ಮೈಸೂರು ಯೋಗ ಒಕ್ಕೂಟ, ಭಾರತ್ ಸ್ವಾಭಿಮಾನ್ ಟ್ರಸ್ಟ್, ಜಿಎಸ್‌ಎಸ್ ಯೋಗ, ಮೈಸೂರು ಯೋಗ ಅಸೋಸಿಯೇಷನ್, ಕೃಷ್ಣ ಪಟ್ಟಾಭಿ ಜೋಯಿಸ್ ಅಷ್ಟಾಂಗ ಸಂಸ್ಥೆ, ವೇದವ್ಯಾಸ ಯೋಗ ಫೌಂಡೇಶನ್, ಭರತ ಶೆಟ್ಟಿ ಪ್ರತಿಷ್ಠಾನ. ಮತ್ತು ನಿರ್ವಾಣ ಯೋಗ ಶಾಲೆ ಸೇರಿದಂತೆ ಇನ್ನು ಹಲವು ಯೋಗ ಶಿಕ್ಷಣ ಸಂಸ್ಥೆಗಳು ಯೋಗ ವಿಸ್ತಾರಕ್ಕೆ ಕಾರಣವಾಗಿವೆ ಎಂದು ತಿಳಿಸಿದರು.

ಕೋವಿಡ್ ಸೋಂಕಿನಿಂದಾಗಿ ವಿದೇಶಿ ವಿದ್ಯಾರ್ಥಿಗಳಿಗೆ ಯೋಗ ತರಗತಿಗಳ ಮೇಲೆ ಪರಿಣಾಮ ಬೀರಿತು. ವಿದೇಶದಿಂದ ಹೊಸದಾಗಿ ಯಾರೂ ಬಂದಿಲ್ಲ. ಈ ಹಿಂದೆ ದಾಖಲಾಗಿದ್ದವರಲ್ಲಿ ಕೆಲವರು ಮಾತ್ರ ಯೋಗ ಕಲಿಯುತ್ತಿದ್ದಾರೆ. ಮತ್ತಷ್ಟು ಮಂದಿ ಆನ್‌ಲೈನ್ ಮೂಲಕ ಕಲಿಯುತ್ತಿದ್ದಾರೆ. ಕೇಂದ್ರ ಸರ್ಕಾರ ವಿದೇಶಾಂಗ ನೀತಿಯಲ್ಲಿ ವಿದೇಶಿ ವಿದ್ಯಾರ್ಥಿಗಳ ಆಗಮನಕ್ಕೆ ಅವಕಾಶ ನೀಡಿದರೆ, ಇನ್ನಷ್ಟು ಮಂದಿ ಯೋಗ ಕಲಿಯಲು ಬರಲಿದ್ದಾರೆ. ಕೋವಿಡ್ ಸೋಂಕಿಗೂ ಮೊದಲು ಮೈಸೂರಿನಲ್ಲಿ ಕನಿಷ್ಠ 1,000 ದಿಂದ 1,500 ವಿದೇಶಿಗರು ಯೋಗ ಕಲಿಯುತ್ತಿದ್ದರು. ಕೋವಿಡ್ ಅವಧಿಯಲ್ಲಿ ದಾಖಲಾದ ಎಲ್ಲರಿಗೂ ಈಗ ತರಬೇತಿ ನೀಡಲಾಗುತ್ತಿದೆ ಎಂದರು.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ

ಆತ್ಮಸಾಕ್ಷಿ ಮತಗಳಿಂದ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು ಖಚಿತ

● ವಿಪಕ್ಷ ನಾಯಕ ಸಿದ್ದರಾಮಯ್ಯ ವಿಶ್ವಾಸ ● ಕೋಮುವಾದಿಗಳ ಅಧಿಕಾರದಿಂದ ದೂರವಿಡಲು ಜೆಡಿಎಸ್ ನಮ್ಮನ್ನು ಬೆಂಬಲಿಸಲೇಬೇಕು ● ಇಬ್ರಾಹಿಂಗೆ ಮಾನ ಮರ್ಯಾದೆ ಇಲ್ಲ



ಮೈಸೂರು, ಜೂ. 6(ಎಂಟಿವೈ)– ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಎರಡನೇ ಅಭ್ಯರ್ಥಿ ಮನ್ಸೂರ್ ಆಲಿಖಾನ್ ಅವರಿಗೆ ಬಿಜೆಪಿ ಹಾಗೂ ಜೆಡಿಎಸ್‌ನಿಂದ ಆತ್ಮಸಾಕ್ಷಿ ಮತಗಳು ದೊರೆಯುವುದರಿಂದ ಅವರ ಗೆಲುವು ನಿಶ್ಚಿತ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದ ಬಳಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಕಣದಲ್ಲಿರುವ ಇಬ್ಬರು ಅಭ್ಯರ್ಥಿಗಳೂ ಜಯಗಳಿಸುತ್ತಾರೆ. ನಮ್ಮ ಬಳಿ 25 ಹೆಚ್ಚುವರಿ ಮತಗಳಿವೆ. ಅದರೊಂದಿಗೆ ಎರಡನೇ ಪ್ರಾಶಸ್ತ್ಯದ ಮತಗಳು ಲಭಿಸಲಿವೆ. ನಾವು ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದು, ಜೆಡಿಎಸ್‌ನಲ್ಲಿರುವ ಅಲ್ಪಸಂಖ್ಯಾತ ಶಾಸಕರು ಬೆಂಬಲಿಸುವ ವಿಶ್ವಾಸವಿದೆ. ಬಿಜೆಪಿ ಮತ್ತು ಜೆಡಿಎಸ್‌ನಲ್ಲಿರುವ ಅತೃಪ್ತ ಶಾಸಕರು ಆತ್ಮಸಾಕ್ಷಿಗನುಗುಣವಾಗಿ ಮತ ನೀಡಲಿದ್ದಾರೆ. ಇದರಿಂದ ಕಾಂಗ್ರೆಸ್ ಅಭ್ಯರ್ಥಿಗಳಿಬ್ಬರ ಗೆಲುವು ಖಚಿತ ಎಂದು ವಿಶ್ಲೇಷಿಸಿದರು.

ಕೋಮುವಾದಿ ಬಿಜೆಪಿಯನ್ನು ದೂರ ಇಡುವುದಕ್ಕಾಗಿ ತಮ್ಮ ಅಭ್ಯರ್ಥಿಯನ್ನು ಕಣದಿಂದ ನಿವೃತ್ತಿಗೊಳಿಸಿ ಜಾತ್ಯತೀತ ಪಕ್ಷವಾದ ಕಾಂಗ್ರೆಸ್ ಬೆಂಬಲಿಸಲು ಜೆಡಿಎಸ್ ನಾಯಕರು ಮುಂದಾಗಬೇಕು. ಈ ಹಿಂದೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ರಾಜ್ಯಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾಗ ನಾವು ಅಭ್ಯರ್ಥಿಯನ್ನು ಹಾಕದೇ ಅವರಿಗೆ ಬೆಂಬಲ ನೀಡಿದ್ದೆವು. ಅಲ್ಲದೆ 37 ಸ್ಥಾನಗಳನ್ನು ಗೆದ್ದಿದ್ದ ಜೆಡಿಎಸ್‌ಗೆ ನಾವು ಮುಖ್ಯಮಂತ್ರಿ ಸ್ಥಾನ ನೀಡಿದ್ದೆವು. ಆಗ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಬೇಕು ಎನ್ನುವುದು ನಮ್ಮ ಉದ್ದೇಶವಾಗಿತ್ತು. ಈಗ ಜೆಡಿಎಸ್ ನಾಯಕರು ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಬೆಂಬಲ ನೀಡಬೇಕು. ಕೋಮುವಾದಿ ಪಕ್ಷದ ಅಭ್ಯರ್ಥಿ ಗೆಲ್ಲಬಾರದು ಎಂದು ಜೆಡಿಎಸ್ ಉದ್ದೇಶವಿದ್ದರೆ ಕಣದಿಂದ ತಮ್ಮ ಅಭ್ಯರ್ಥಿಯನ್ನು ಹಿಂದೆ ಸರಿಸಿ, ನಮ್ಮ ಅಭ್ಯರ್ಥಿ ಬೆಂಬಲಿಸುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ಕ್ಯಾಪ್ಟಿವ್ ಪ್ರೆಸಿಡೆಂಟ್: ಸಿ.ಎಂ.ಇಬ್ರಾಹಿಂ ಓರ್ವ ಕ್ಯಾಪ್ಟಿವ್ ಪ್ರೆಸಿಡೆಂಟ್(ಬಂದಿಯಂತಹ ಅಧ್ಯಕ್ಷ). ಜೆಡಿಎಸ್ ವರಿಷ್ಠರು ಹೇಳಿದಂತೆ ಕೇಳುವ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾರೆ. ಅವರ ಹೇಳಿಕೆಗಳಿಗೆ ಪ್ರತಿಕ್ರಿಯೆ ಕೊಡುವುದಿಲ್ಲ. ಅವರಿಗೆ ಮಾನ–ಮರ್ಯಾದೆ ಇಲ್ಲ. ವಿಧಾನಪರಿಷತ್ ಸದಸ್ಯರನ್ನಾಗಿ ಮಾಡುತ್ತೇನೆಂದು ಕಾಂಗ್ರೆಸ್‌ನಿಂದ ಜೆಡಿಎಸ್‌ಗೆ ಕರೆದುಕೊಂಡು ಹೋದರು. ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿದ್ದಾರಾ? ಎಂದು ಪ್ರಶ್ನಿಸಿದರು.

ಯಾವ ಹೇಳಿಕೆ ನಂಬಬೇಕು: ಕಾಂಗ್ರೆಸ್‌ನವರ ಟಾರ್ಚರ್ ತಡೆಯಲಾಗದೆ, ಸಮ್ಮಿಶ್ರ ಸರ್ಕಾರ ಬಿದ್ದು ಹೋಗಲೆಂದೇ ವಿದೇಶಕ್ಕೆ ಹೋಗಿದ್ದೆ ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಈ ಹಿಂದೆ ಸಿದ್ದರಾಮಯ್ಯ ಅವರೇ ಸರ್ಕಾರ ಬೀಳಿಸಿದರು ಎಂದು ಹೇಳಿಕೆ ನೀಡಿದ್ದರು. ಈಗ ಟಾರ್ಚರ್ ತಡೆಯಲಾಗದೆ ವಿದೇಶಕ್ಕೆ ಹೋಗಿದ್ದೆ ಎಂದಿದ್ದಾರೆ. ಸರ್ಕಾರ ಬಿದ್ದಾಗಲೇ ಅದನ್ನು ಹೇಳಲಿಲ್ಲವೇಕೆ? ಅವರು ಆಗ ಹೇಳಿದ್ದು ಸತ್ಯವೋ? ಈಗ ಹೇಳಿರುವುದು ಸತ್ಯವೋ?, ಅಧಿವೇಶನದಲ್ಲಿ ಉತ್ತರ ಕೊಟ್ಟಾಗ ಹೇಳಿರುವ ಮಾತುಗಳೇ ಬೇರೆ. ಅದೆಲ್ಲವೂ ದಾಖಲಾಗಿದ್ದು, ಪರಿಶೀಲಿಸಬಹುದು. ಆಗ ಹೇಳಿದ್ದನ್ನು ನಂಬಬೇಕಾ ಅಥವಾ ಈಗ ಹೇಳಿದ್ದನ್ನು ನಂಬಬೇಕಾ? ಎಂದು ವ್ಯಂಗ್ಯವಾಡಿದರು.

ಅವರಿಂದ ಕಲಿಯುವ ಅಗತ್ಯವಿಲ್ಲ: ದಲಿತರ ಬಗ್ಗೆ ಕಾಳಜಿ ವಹಿಸುವ ಕುರಿತು ಜೆಡಿಎಸ್‌ನಿಂದ ನಾವು ಕಲಿಯುವ ಅಗತ್ಯವಿಲ್ಲ. ಸಂವಿಧಾನದ ಆಶಯವನ್ನು ಜಾರಿಗೊಳಿಸುವ ಬದ್ಧತೆಯುಳ್ಳ ಪಕ್ಷ ನಮ್ಮದು. ದಲಿತರನ್ನು ದಿಕ್ಕು ತಪ್ಪಿಸುವ ನಿಟ್ಟಿನಲ್ಲಿ ಜೆಡಿಎಸ್ ನಾಯಕರು ಈಗ ಮಲ್ಲಿಕಾರ್ಜುನ ಖರ್ಗೆ ವಿಚಾರ ಪ್ರಸ್ತಾಪ ಮಾಡುತ್ತಿದ್ದಾರೆ. ಈ ಹಿಂದೆ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ದಲಿತರಿಗೆ ಏನೇನು ಕಾರ್ಯಕ್ರಮ ರೂಪಿಸಿದೆ ಎಂದು ದಲಿತ ಸಮುದಾಯಕ್ಕೆ ತಿಳಿದಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಹೆಚ್ಚು ಆದ್ಯತೆ ಕೊಟ್ಟಿದ್ದು ದಲಿತರಿಗೆ. ದಲಿತರಿಗೆ ಕಾಂಗ್ರೆಸ್‌ನಲ್ಲಿ ಹೆಚ್ಚು ಸ್ಥಾನಮಾನ ನೀಡಲಾಗಿದೆ. ಬಡ್ತಿ ವಿಚಾರದಲ್ಲಿ ದಲಿತ ಸಮುದಾಯದ ಅಧಿಕಾರಿಗಳಿಗೆ ಆಗುತ್ತಿದ್ದ ಅನ್ಯಾಯ ಸರಿ ಮಾಡಲಾಗಿದೆ. ಕೆಲವೆಡೆ ಗುತ್ತಿಗೆ ಪದ್ಧತಿಯಲ್ಲಿ ಕೆಲಸ ಮಾಡುತ್ತಿದ್ದವರನ್ನು ಖಾಯಂ ಮಾಡಲಾಗಿದೆ. ಟೆಂಡರ್ ವಿಚಾರದಲ್ಲೂ ದಲಿತ ಸಮುದಾಯಕ್ಕೆ ಆದ್ಯತೆ ನೀಡಿದವರು ನಾವು. ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಮೀಸಲಿಟ್ಟವರು ನಾವು. ಹೀಗಾಗಿ ಜೆಡಿಎಸ್‌ನವರಿಂದ ಪಾಠ ಹೇಳಿಸಿಕೊಳ್ಳುವ ಅಗತ್ಯವಿಲ್ಲ ಎಂದು ತಿರುಗೇಟು ನೀಡಿದರು.

ಈ ಸಂದರ್ಭದಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಹಳೇ ಪಠ್ಯವನ್ನೇ ಮುಂದುವರೆಸಲು ಆಗ್ರಹಿಸಿ ಪ್ರತಿಭಟನೆ



ಮೈಸೂರು,ಜೂ.6(ಪಿಎಂ)–ಪ್ರಸಕ್ತ ಶೈಕ್ಷಣಿಕ ವರ್ಷದಲ್ಲೂ ಹಳೇ ಪಠ್ಯ ಪುಸ್ತಕಗಳನ್ನೇ ಮುಂದುವರೆಸಬೇಕು ಹಾಗೂ ದ್ವಿತೀಯ ಪಿಯುಸಿ ಪಠ್ಯ ಪುಸ್ತಕ ಪರಿಷ್ಕರಣೆ ಕೈಬಿಡಬೇಕು ಎಂದು ಒತ್ತಾಯಿಸಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಓ) ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಶಾಲಾ ಪಠ್ಯಪುಸ್ತಕಗಳ ಪರಿಷ್ಕರಣೆ ರಾಜ್ಯದಲ್ಲಿ ವಿವಾದ ಸೃಷ್ಟಿಸಿದೆ. ರಾಜ್ಯದ ಹಲವು ಸಾಹಿತಿಗಳು, ಬರಹಗಾರರು ಪರಿಷ್ಕರಣೆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರೆ, ಹಲವರು ತಮ್ಮ ಲೇಖನಗಳನ್ನು ಕೈಬಿಡುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದರು. ಇದೀಗ ಬಸವಣ್ಣನವರ ಕುರಿತ ಪಠ್ಯವನ್ನು ಮತ್ತೊಮ್ಮೆ ಪರಿಷ್ಕರಿಸುವುದಾಗಿ ಸರ್ಕಾರ ಹೇಳಿಕೊಂಡಿದೆ. ಆ ಮೂಲಕ ಪರಿಷ್ಕರಣೆಯಲ್ಲಿ ದೋಷಗಳಿದ್ದವೆಂದು ಸರ್ಕಾರ ಒಪ್ಪಿದ್ದು, ದೋಷಗಳನ್ನು ಸರಿಪಡಿಸುವುದು ಯಾವಾಗ? ಎಂದು ಪ್ರಶ್ನಿಸಿದರು.

ಪರಿಷ್ಕರಣೆಯಲ್ಲಿ 7ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಸಾವಿತ್ರಿಬಾಯಿ ಫುಲೆ, ಕನಕದಾಸರು ಹಾಗೂ ಪುರಂದರದಾಸರ ಕುರಿತ ಪಾಠಗಳನ್ನು ಕೈಬಿಡಲಾಗಿದೆ. ಅಲ್ಲದೆ, ಇದೇ ಪಠ್ಯಪುಸ್ತಕದಲ್ಲಿ ಅಂಬೇಡ್ಕರ್ ಅವರ ನೇತೃತ್ವದಲ್ಲಿ ನಡೆದ 'ಮಹಾದ್ ಸತ್ಯಾಗ್ರಹ' ಮತ್ತು 'ನಾಸಿಕ್‌ನ ಕಾಳಾರಾಮ ದೇವಾಲಯ ಪ್ರವೇಶ' ಕುರಿತ ಐತಿಹಾಸಿಕ ಹೋರಾಟಗಳ ಉಲ್ಲೇಖವನ್ನು ತೆಗೆಯಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜೊತೆಗೆ ಅಂಬೇಡ್ಕರ್ ಅವರನ್ನು 'ಸಂವಿಧಾನ ಶಿಲ್ಪಿ' ಎಂದು ಕರೆದಿರುವುದನ್ನು 9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ ಕೈಬಿಡಲಾಗಿದೆ. 10ನೇ ತರಗತಿಯ ಕನ್ನಡ ಪಠ್ಯದಿಂದ ಸ್ವಾಮಿ ವಿವೇಕಾನಂದರ ಮಾನವತಾವಾದಿ ಮೌಲ್ಯಗಳ ಕುರಿತ ಪಾಠ ಕಡಿತ ಮಾಡಲಾಗಿದೆ ಎಂದು ಕಿಡಿಕಾರಿದರು.

ಮಹಾನ್ ವ್ಯಕ್ತಿಗಳ ಕುರಿತ ಪಾಠಗಳಲ್ಲಿ ತಿರುಚುವುದು ಇಲ್ಲವೇ ಮುಖ್ಯ ಅಂಶಗಳನ್ನು ಕೈಬಿಡುವಂತಹ ಕೆಲಸವನ್ನು ಪರಿಷ್ಕರಣಾ ಸಮಿತಿ ಮಾಡಿದೆ. ಹಾಗಾಗಿ ಈ ಪರಿಷ್ಕರಣೆ ಪಠ್ಯಗಳನ್ನು ಕೈಬಿಟ್ಟು, ಈ ಮೊದಲು ಇದ್ದ ಪಠ್ಯಗಳನ್ನೇ ಮುಂದುವರೆಸಬೇಕು ಎಂದು ಒತ್ತಾಯಿಸಿದರು.

ಹೋರಾಟಗಾರರಾದ ಉಗ್ರನರಸಿಂಹೇಗೌಡ, ಜೆ.ಪಿ.ಬಸವರಾಜು, ಎಐಡಿಎಸ್‌ಓ ಜಿಲ್ಲಾಧ್ಯಕ್ಷ ಸುಭಾಷ್, ಕಾರ್ಯದರ್ಶಿ ಚಂದ್ರಕಲಾ, ಉಪಾಧ್ಯಕ್ಷೆ ಆಸಿಯಾ ಬೇಗಂ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ಸ್ವಾತಿ, ಚಂದನಾ, ಚಂದ್ರಿಕಾ, ಮೊನಿಷಾ, ಪ್ರಶಾಂತಿ, ತೇಜಸ್ವಿನಿ, ಹೇಮಲತಾ, ಚೆಲುವ, ರಾಜೇಶ್, ಚಂದನ್ ಸೇರಿದಂತೆ ಕಾಲೇಜು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ್ರಧಾನಮಂತ್ರಿಗಳಿಂದ ಅಂಧರ ಸ್ನೇಹಿ ಹೊಸ ನಾಣ್ಯಗಳ ಬಿಡುಗಡೆ

ಮೈಸೂರಿನ ಎಟಿಐ ಸೇರಿ ದೇಶದ 75 ಕಡೆ 'ಐಕಾನಿಕ್ ಸಪ್ತಾಹ ಆಚರಣೆ' ನೇರ ಪ್ರಸಾರ



ಮೈಸೂರು, ಜೂ.6(ಆರ್‌ಕೆ)– ಅಂಧರು ಬಳಸಲು ಅನುಕೂಲವಾಗುವಂತಹ ಹೊಸ ಸರಣಿಯ ನಾಣ್ಯಗಳನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿ ಇಂದು ರಾಷ್ಟ್ರಕ್ಕೆ ಸಮರ್ಪಿಸಿದರು. ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರ ಸಚಿವಾಲಯಗಳ ಸಂಯುಕ್ತಾಶ್ರಯದಲ್ಲಿ ನವದೆಹಲಿಯ ವಿಜ್ಞಾನ ಭವನದಲ್ಲಿ ಆಯೋಜಿಸಿದ್ದ 'ಐಕಾನಿಕ್ ವೀಕ್ ಸೆಲೆಬ್ರೇಷನ್' ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಸಪ್ತಾಹದ ಅಂಗವಾಗಿ ಹೊರ ತಂದಿರುವ ಅಂಧರ ಸ್ನೇಹಿ ಹೊಸ ನಾಣ್ಯಗಳನ್ನು ಬಿಡುಗಡೆ ಮಾಡಿದರು.

ಮೈಸೂರಿನ ಜಿಎಸ್‌ಟಿ ಆಯುಕ್ತಾಲಯದಿಂದ ಇಂದು ಲಲಿತ ಮಹಲ್ ರಸ್ತೆಯಲ್ಲಿರುವ ಆಡಳಿತ ತರಬೇತಿ ಸಂಸ್ಥೆ (ATI)ಯ ಹೇಮಾವತಿ ಸಭಾಂಗಣದಲ್ಲಿ ಕಾರ್ಯಕ್ರಮದ ನೇರ ಪ್ರಸಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಮೈಸೂರು ಸೇರಿದಂತೆ ದೇಶದ 75 ಸ್ಥಳಗಳಲ್ಲಿ ಆಯೋಜಿಸಿದ್ದ ನೇರ ಪ್ರಸಾರ ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಪಾಲ್ಗೊಂಡು ಪ್ರಧಾನಿಗಳು ಭಾಗವಹಿಸಿದ್ದ ಕಾರ್ಯಕ್ರಮವನ್ನು ವೀಕ್ಷಿಸಿದರು.

ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರು 'ಜನ ಸಮರ್ಥ ಪೋರ್ಟಲ್' ಹಾಗೂ ಡಿಜಿಟಲ್ ವಸ್ತು ಪ್ರದರ್ಶನಕ್ಕೂ ಇದೇ ವೇಳೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಜನ ಕೇಂದ್ರಿತ ಆಡಳಿತ ಹಾಗೂ ಉತ್ತಮ ಆಡಳಿತ ನೀಡುತ್ತಿರುವುದು ಕೇಂದ್ರದ ಬಿಜೆಪಿ ಸರ್ಕಾರದ ಹೆಗ್ಗಳಿಕೆ ಎಂದರು. ಈ ಹಿಂದೆ ಸರ್ಕಾರ ಕೇಂದ್ರಿತ ಆಡಳಿತ ನಡೆಯುತ್ತಿತ್ತು. ಆದರೆ ಈಗ 21ನೇ ಶತಮಾನದಲ್ಲಿ ಭಾರತವನ್ನು ಜನ ಕೇಂದ್ರಿತ ಆಡಳಿತದತ್ತ ಕೊಂಡೊಯ್ಯುತ್ತಿರುವ ಬಿಜೆಪಿ ಸರ್ಕಾರ ಕಳೆದ 8 ವರ್ಷಗಳಿಂದ ಕ್ರಾಂತಿಕಾರಿ ಬದಲಾವಣೆ ತಂದಿದೆ. ನಾಗರಿಕರ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡಿ ದೇಶದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ ಎಂದು ಅವರು ಇದೇ ಸಂದರ್ಭ ನುಡಿದರು.

ಬಡಜನರು ಗೌರವದಿಂದ ಬದುಕಲು ಸ್ವಚ್ಛ ಭಾರತ ಅಭಿಯಾನವು ಅವಕಾಶ ನೀಡಿದೆ. ವಸತಿ, ವಿದ್ಯುತ್, ಅನಿಲ, ನೀರು, ಉಚಿತ ಆರೋಗ್ಯ ಸೇವೆ, ಕೊರೊನಾ ಸಂದರ್ಭ ಉಚಿತ ಪಡಿತರ ವಿತರಣೆಯಂತಹ ಹಲವು ಜನಪರ ಕಾರ್ಯಕ್ರಮಗಳು ಬಡವರ ಬದುಕಿಗೆ ಆಸರೆಯಾಗಿವೆ. ದೇಶದ 80 ಕೋಟಿ ಜನರು ಹಸಿವಿನಿಂದ ಮುಕ್ತರಾಗಿದ್ದಾರೆ. ಯುವಕರು, ಕೈಗಾರಿಕೋದ್ಯಮಿಗಳು ವಿದ್ಯಾರ್ಥಿಗಳು, ಕೃಷಿಕರು, ನೇಕಾರರು ಸೇರಿದಂತೆ ಎಲ್ಲ ವರ್ಗದ ಜನರು ಗೌರವಯುತವಾಗಿ ಬದುಕುವ ಯೋಜನೆಗಳನ್ನು ಕೇಂದ್ರ ಸರ್ಕಾರ ನೀಡುತ್ತಿದೆ. ಎಂದು ಪ್ರಧಾನಿ ಮೋದಿ ಅವರು ತಿಳಿಸಿದ್ದಾರೆ.

ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ಅಂಧರ ಸ್ನೇಹಿ (ವಿಷ್ಯುಯಲ್ ಇಂಪೇರ್ಡ್ ಫ್ರೆಂಡ್ಲಿ) 1, 2, 5, 10 ಹಾಗೂ 20 ರೂ. ಬೆಲೆಯ ನಾಣ್ಯಗಳನ್ನು ಬಿಡುಗಡೆ ಮಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಸರ್ಕಾರದ 12 ಯೋಜನೆಗಳ 'ಜನ ಸಮರ್ಥ್ ಪೋರ್ಟಲ್' ಅನ್ನು ಇದೇ ವೇಳೆ ದೇಶಕ್ಕೆ ಸಮರ್ಪಿಸಿದರು.

ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಸಚಿವರಾದ ಇಂದ್ರಜಿತ್ ಪಂಕಜ್ ಚೌಧರಿ ಭಾಗವಹಿಸಿದ್ದರು.

ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ಹೇಮಾವತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ನೇರ ಪ್ರಸಾರವನ್ನು ಸೆಂಟ್ರಲ್ ಟ್ಯಾಕ್ಸ್ ಪ್ರಧಾನ ಮುಖ್ಯ ಆಯುಕ್ತೆ(ಬೆಂಗಳೂರು ವಲಯ) ರಂಜನಾ ಜಾ, ಜಿಎಸ್‌ಟಿ ಪ್ರಧಾನ ಆಯುಕ್ತ(ಮೈಸೂರು ವಲಯ) ಸಂಜಯ್ ಪಂತ್ ಸೇರಿದಂತೆ ಇಲಾಖೆಯ ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವೀಕ್ಷಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಮಧುಮಾದೇಗೌಡ ಗೆಲುವು ಖಚಿತ

● ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ ವಿಶ್ವಾಸ ● ಸಂಸದ ಪ್ರತಾಪಸಿಂಹ ಹೇಳಿಕೆಗೆ ಖಂಡನೆ



ಮೈಸೂರು,ಜೂ.6(ಎಂಟಿವೈ)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಈ ಬಾರಿ ಪಕ್ಷದ ಅಭ್ಯರ್ಥಿ ಮಧು ಜಿ.ಮಾದೇಗೌಡ ಗೆಲುವು ಸಾಧಿಸಲಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪದವೀಧರರ ಕ್ಷೇತ್ರದ ಚುನಾವಣೆಯನ್ನು ಕಾಂಗ್ರೆಸ್ ಈ ಬಾರಿ ಗಂಭೀರವಾಗಿ ಪರಿಗಣಿಸಿದೆ. ಈ ಚುನಾವಣೆಗಾಗಿ ಕಳೆದ ಒಂದು ವರ್ಷದಿಂದಲೂ ಸಿದ್ಧತೆ ಮಾಡಿಕೊಂಡಿದ್ದೇವೆ. ಆರು ತಿಂಗಳ ಹಿಂದೆಯೇ ಅಭ್ಯರ್ಥಿಯನ್ನು ಘೋಷಿಸಿದ್ದೇವೆ. ಈ ಚುನಾವಣೆಯಲ್ಲಿ ಗೆಲ್ಲಲು ನಾಲ್ಕೈದು ಪೂರ್ವಭಾವಿ ಸಭೆಗಳನ್ನು ನಡೆಸುವ ಜೊತೆಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ಇನ್ನಿತರ ನಾಯಕರು ಪ್ರಚಾರದಲ್ಲಿ ತೊಡಗಿದ್ದಾರೆ. ನಾಲ್ಕು ಜಿಲ್ಲೆಗಳಲ್ಲಿ ನನ್ನನ್ನು ಸೇರಿದಂತೆ ಶಾಸಕರು, ಮಾಜಿ ಶಾಸಕರು ಕೆಲಸ ಮಾಡುತ್ತಿರುವುದರಿಂದ ಗೆಲುವಿನ ವಿಶ್ವಾಸವಿದೆ. ಬಿಜೆಪಿ ವೈಫಲ್ಯಗಳ ಆಡಳಿತ ನಮಗೆ ಅನುಕೂಲವಾಗಲಿದೆ ಎಂದರು.

ಮಿತಿಮೀರುತ್ತಿದೆ ಉದ್ಧಟತನದ ಮಾತು: ವಿಪಕ್ಷ ನಾಯಕ ಸಿದ್ದರಾಮಯ್ಯರಿಗೆ ಆರ್ಥಿಕತೆ ಏನು ಗೊತ್ತು ಎಂದು ಹೇಳಿಕೆ ನೀಡಿದ್ದ ಸಂಸದ ಪ್ರತಾಪ್ ಸಿಂಹ ವಿರುದ್ಧ ವಾಗ್ದಾಳಿ ನಡೆಸಿದ ಧ್ರುವನಾರಾಯಣ್, ಸಂಸದ ಪ್ರತಾಪ ಸಿಂಹ ಮಿತಿ ಮೀರಿ ಮಾತನಾಡುವ ಮೂಲಕ ಉದ್ಧಟತನ ಪ್ರದರ್ಶಿಸುತ್ತಿದ್ದಾರೆ. ರಾಜಕಾರಣದಲ್ಲಿ ಕಾಮನ್‌ಸೆನ್ಸ್ ಬೇಕು. ಆಡಳಿತ ನಡೆಸುವವರು ಲಂಡನ್‌ಗೆ ಹೋಗಿ ಪದವಿ ಪಡೆದು ಬರಬೇಕಾ. ಗ್ರಾಮೀಣ ಪ್ರದೇಶದಲ್ಲಿ ನಡೆಯುವ ನ್ಯಾಯಪಂಚಾಯಿತಿಯಲ್ಲೂ ಉತ್ತಮ ತೀರ್ಮಾನ ಕೊಡುತ್ತಾರೆ. ಅವರೇನು ಕಾನೂನು ಪಂಡಿತರೇ?. ಹಣಕಾಸು ಸಚಿವರಾಗುವವರಿಗೆ ಇಂತಹುದೇ ಪದವಿ ಪಡೆಯಬೇಕು ಎಂಬ ನಿರ್ಬಂಧವಿಲ್ಲ. ಮನುಷ್ಯನಿಗೆ ಸಾಮಾನ್ಯ ಜ್ಞಾನ ಇದ್ದರೆ ಸಾಕು, ಒಳ್ಳೆಯ ಆಡಳಿತ ಕೊಡಬಹುದು ಎಂದು ತಿರುಗೇಟು ನೀಡಿದರು.

ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚುವರಿ ಮತ ಪಡೆಯುವ ವಿಚಾರ ಕುರಿತು ಪ್ರತಿಕ್ರಿಯಿಸಿ, ನಮಗೆ ಹೆಚ್ಚುವರಿ ಮತ ಬರಲಿದೆ ಎಂದೇ ಅಭ್ಯರ್ಥಿಯನ್ನು ಹಾಕಿದ್ದೀವಿ. ಬೇರೆ ಪಕ್ಷದ ಅತೃಪ್ತ ಶಾಸಕರು ನಮಗೆ ಮತ ನೀಡುತ್ತಾರೆ. ಈ ಹಿಂದೆ ಜಾ.ದಳಕ್ಕೆ ಸಹಾಯ ಮಾಡಿದ್ದೇವೆ. ರಾಜ್ಯಸಭಾ ಚುನಾವಣೆಯಲ್ಲಿ ಹೆಚ್.ಡಿ. ದೇವೇಗೌಡರನ್ನು ಹಿರಿಯರು ಎಂದು ಸಹಾಯ ಮಾಡಿದ್ದೀವಿ.ನಮ್ಮಂತೆ ಜಾ.ದಳ ವಿರೋಧ ಪಕ್ಷದಲ್ಲಿ ಇದೆ. ಆದರೆ, ಬಿಜೆಪಿ ಟೀಕೆ ಮಾಡುವ ಬದಲು ನಮ್ಮನ್ನೇ ಟೀಕೆ ಮಾಡುತ್ತಿದ್ದಾರೆ. ಯಾವಾಗಲೂ ವಿರೋಧ ಪಕ್ಷಗಳು ಒಗ್ಗಟ್ಟಾಗಿ ಆಡಳಿತ ಪಕ್ಷದ ವೈಫಲ್ಯಗಳ ಬಗ್ಗೆ ಹೋರಾಟ ಮಾಡಬೇಕು. ಕಾಂಗ್ರೆಸ್ ಬಗ್ಗೆ ಟೀಕೆ ಮಾಡುವ ಪ್ರವೃತ್ತಿಯನ್ನು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಬಿಡಬೇಕು ಎಂದು ತಿಳಿಸಿದರು.

ದಲಿತರು, ಹಿಂದುಳಿದವರು ನಮ್ಮ ಪರ ಇದ್ದಾರೆ... ರವಿಶಂಕರ್ ಗೆಲುವು ನಿಶ್ಚಿತ

ಮೈಸೂರಲ್ಲಿ ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ವಿಶ್ವಾಸ



ಮೈಸೂರು, ಜೂ .6(ಆರ್‌ಕೆಬಿ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್‌ಗೆ ಗೆಲುವು ನಿಶ್ಚಿತ ಎಂದು ಇತ್ತೀಚೆಗೆ ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಆಯ್ಕೆಯಾಗಿರುವ ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷರೂ ಆದ ಛಲವಾದಿ ನಾರಾಯಣಸ್ವಾಮಿ ಇಂದಿಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ಸಮುದಾಯಗಳ ಅತೀ ಹೆಚ್ಚು ಮತದಾರರಿದ್ದು, ಹಾಗಾಗಿ ಬಹುಸಂಖ್ಯಾತ ಪದವೀಧರರು ಬಿಜೆಪಿಯ ಪರ ಇದ್ದಾರೆ. ಹೀಗಾಗಿ ಬಿಜೆಪಿ ಅಭ್ಯರ್ಥಿ ಗೆಲ್ಲುವುದರಲ್ಲಿ ಅನುಮಾನವೇ ಇಲ್ಲ ಎಂದರು.

ಬಿಜೆಪಿಯನ್ನು ದಲಿತ ವಿರೋಧಿ, ಮೀಸಲಾತಿ ವಿರೋಧಿ, ಅಂಬೇಡ್ಕರ್ ವಿರೋಧಿ, ಸಂವಿಧಾನ ವಿರೋಧಿ ಎಂದೆಲ್ಲಾ ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ. ಈ ಬಗ್ಗೆ ದಲಿತ ವರ್ಗಗಳಿಗೂ ಆತಂಕವಿತ್ತು. ಆದರೆ ಕಾಂಗ್ರೆಸ್ ಹೇಳುತ್ತಿರುವುದು ಶುದ್ಧ ಸುಳ್ಳು ಎಂಬುದರ ಅರಿವಾಗಿದೆ. ಹೀಗಾಗಿ ದಲಿತ ವರ್ಗದ ಮತಗಳು ಬಿಜೆಪಿ ಪರ ವಾಲಿವೆ ಎಂದು ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ಅಂಬೇಡ್ಕರ್ ಪಾದ ಸ್ಪರ್ಶ ಮಾಡಿದ್ದ 7 ಜಿಲ್ಲೆಗಳ ಅಭಿವೃದ್ಧಿಪಡಿಸುವ ಕೆಲಸಗಳನ್ನು ನರೇಂದ್ರ ಮೋದಿ ಮಾಡಿದ್ದಾರೆ. ದಲಿತ ಸಮುದಾಯಕ್ಕೆ ಅನೇಕ ಯೋಜನೆ, ಕಾರ್ಯಕ್ರಮಗಳನ್ನು ನೀಡಿದ್ದಾರೆ. ದಲಿತ ಸಮುದಾಯವನ್ನು ಬಿಜೆಪಿ ಗೌರವಿಸುತ್ತಿದೆ. ಸುಳ್ಳುಗಳನ್ನು ಹೇಳುವವರಿಗೆ ಮಾತಿನ ಬದಲು ನಡತೆಯ ಮೂಲಕ ಉತ್ತರವನ್ನು ಬಿಜೆಪಿ ನೀಡಿದೆ ಎಂದು ಹೇಳಿದರು.

ಬಿಜೆಪಿ ಬಗ್ಗೆ ದಲಿತರು, ಹಿಂದುಳಿದ ವರ್ಗಗಳಿಗೆ ಮನವರಿಕೆಯಾಗಿದೆ. ತಮ್ಮ ಉದ್ಧಾರ ಬಿಜೆಪಿಯಿಂದ ಮಾತ್ರ ಸಾಧ್ಯ ಎಂಬುದನ್ನು ಅವರು ಅರಿತುಕೊಂಡಿದ್ದಾರೆ. ಹೀಗಾಗಿ ಇಡೀ ರಾಜ್ಯದಲ್ಲಿ ನಮ್ಮ ಪಕ್ಷಕ್ಕೆ ದಲಿತರು, ಹಿಂದುಳಿದ ವರ್ಗಗಳ ಜನರ ಬೆಂಬಲ ವ್ಯಕ್ತವಾಗುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪಕ್ಷದ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಕೊಳ್ಳೇಗಾಲ ಕ್ಷೇತ್ರದ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ರಾಜ್ಯ ಕಾರ್ಯಕಾರಿಣಿ ಸದಸ್ಯ ಮಹೇಶ್, ರಾಜ್ಯ ಪೊಲೀಸ್ ಮಹಾಸಂಘದ ಅಧ್ಯಕ್ಷ ವಿ.ಶಶಿಧರ್, ಪಕ್ಷದ ಮೈಸೂರು ನಗರ ವಕ್ತಾರ ಎಂ.ಎ.ಮೋಹನ್, ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ಮಾಧ್ಯಮ ವಕ್ತಾರ ಕೇಬಲ್ ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಮಂಗಳವಾರ 7 ಜೂನ್ 2022

ಬಿಜೆಪಿ, ಆರ್‌ಎಸ್‌ಎಸ್‌ನಿಂದ ಭ್ರಾತೃತ್ವಕ್ಕೆ ಧಕ್ಕೆ

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ತಿ.ನರಸೀಪುರ, ಜೂ.6(ಎಸ್‌ಕೆ)– ಸ್ವಾತಂತ್ರ್ಯ ಹೋರಾಟದ ಗಂಧವೇ ಗೊತ್ತಿಲ್ಲದ ಆರ್‌ಎಸ್‌ಎಸ್, ಬಿಜೆಪಿ ಧರ್ಮದ ಹೆಸರಿನಲ್ಲಿ ದೇಶವನ್ನು ಒಡೆದು, ಬಹುತ್ವವನ್ನು ನಾಶಗೊಳಿಸುತ್ತಿದೆ. ಜನರ ನೆಮ್ಮದಿಯ ಬದುಕಿಗೆ ಭಂಗ ತರುತ್ತಿರುವ ಆಡಳಿತಾರೂಢ ಸರ್ಕಾರವೇ ಅಣ್ಣ ತಮ್ಮಂದಿರಂತೆ ಬದುಕಬೇಕಿರುವ ಭಾರತೀಯರ ಭ್ರಾತೃತ್ವವನ್ನು ಹಾಳುಗೆಡುವುತ್ತಿದೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ದೂರಿದರು.

ವಿಧಾನಪರಿಷತ್ ದಕ್ಷಿಣ ಪದವೀಧರ ಚುನಾವಣೆ ಸಂಬಂಧ ಪಟ್ಟಣದ ಮರೀಗೌಡ ಸ್ಮಾರಕ ಭವನದಲ್ಲಿ ಸೋಮವಾರ ನಡೆದ ಪ್ರಚಾರ ಸಭೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರ ಮತಯಾಚಿಸಿ ಮಾತನಾಡಿದ ಅವರು, ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ಜನರಿಗೆ ಮೂಲ ಸೌಕರ್ಯಗಳಾದ ವಸತಿ, ರಸ್ತೆ, ಶಾಲೆ, ಅಂಗನವಾಡಿ, ಆಸ್ಪತ್ರೆಗಳನ್ನು ನೀಡುವ ಬದಲು ಧರ್ಮದ ಹೆಸರಿನಲ್ಲಿ ಸಂಘರ್ಷವನ್ನು ಹುಟ್ಟುಹಾಕುತ್ತಿದೆ ಎಂದು ಕಿಡಿಕಾರಿದರು.

ಜೀವನವನ್ನು ಸಾಮಾಜಿಕ ಹಾಗೂ ರೈತಪರ ಹೋರಾಟಕ್ಕೆ ಮೀಸಲಿಟ್ಟ ಜಿ.ಮಾದೇಗೌಡರ ಪುತ್ರ ಮಧು ಅವರು ಪದವೀಧರರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿದ್ದಾರೆ. ಕಣದಲ್ಲಿರುವ ಅಭ್ಯರ್ಥಿಗಳಿಗೆಲ್ಲ ಉತ್ತಮರಿದ್ದಾರೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನ ವಿರೋಧಿಯಾಗಿರುವ ಬಿಜೆಪಿಗೆ ಈ ಚುನಾವಣೆ ಮೂಲಕ ತಕ್ಕ ಪಾಠ ಕಲಿಸಬೇಕು. ನಾವು ಮತದಾರರಲ್ಲ ಅನ್ನೋದನ್ನು ಬದಿಗಿಟ್ಟು ಪ್ರತಿಯೊಬ್ಬ ಕಾರ್ಯಕರ್ತರು ಪಂಚಾಯಿತಿ ಮಟ್ಟದಲ್ಲಿ ನೋಂದಾಯಿತ ಪ್ರತಿಯೊಬ್ಬ ಪದವೀಧರರನ್ನೂ ನೇರವಾಗಿ ಭೇಟಿ ಮಾಡಿ ಮೊದಲ ಪ್ರಾಶಸ್ತ್ಯದ ಮತವನ್ನು ಕೊಡಿಸಲಿಕ್ಕೆ ಮನವೊಲಿಸಬೇಕು ಎಂದು ಕರೆ ನೀಡಿದರು.



ದಕ್ಷಿಣ ಪದವೀಧರ ಕ್ಷೇತ್ರದ ಅಭ್ಯರ್ಥಿ ಮಧು ಜಿ.ಮಾದೇಗೌಡ ಮಾತನಾಡಿ, ಹಲವು ದಶಕಗಳ ಹೋರಾಟದ ಮೂಲಕ ಸಾಮಾಜಿಕ ಮತ್ತು ಶೈಕ್ಷಣಿಕ ಸೇವೆಯನ್ನು ಸಲ್ಲಿಸಿರುವ ಜಿ.ಮಾದೇಗೌಡರ ಸಮಾಜಮುಖಿ ಕೆಲಸವನ್ನು ಪರಿಗಣಿಸಿ ನನಗೆ ಪದವೀಧರರು ಸ್ವಾಭಿಮಾನದ ಮತವನ್ನು ನೀಡಬೇಕು. ಶಿಕ್ಷಣ ಸಂಸ್ಥೆಯ ಮೂಲಕ ಮಕ್ಕಳ ಭವಿಷ್ಯ ಹಾಗೂ ವಿದ್ಯಾವಂತರಿಗೆ ಉದ್ಯೋಗವನ್ನು ನೀಡಿದ್ದೇವೆ. ಶೈಕ್ಷಣಿಕ ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕವಾಗಿ ದುಡಿಯುತ್ತೇನೆ. ಚುನಾವಣೆಯಲ್ಲಿ ಗೆಲ್ಲುವ ಸಂಪೂರ್ಣ ಭರವಸೆಯಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಸತಿ ಜಾಗೃತಿ ಮಾಜಿ ಅಧ್ಯಕ್ಷ ಸುನಿಲ್ ಬೋಸ್ ಮಾತನಾಡಿ, ಶಿಕ್ಷಣ ಕ್ಷೇತ್ರದ ಕಾಳಜಿಯಿರುವ ಮಧು ಜಿ.ಮಾದೇಗೌಡರು ಪ್ರಸಕ್ತ ಚುನಾವಣೆಯಲ್ಲಿ ಗೆಲ್ಲುವುದನ್ನು ಕಾರ್ಯಕರ್ತರು ಸವಾಲಾಗಿ ಸ್ವೀಕರಿಸಬೇಕು. ಮುಂಬರುವ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈಗಿನಿಂದಲೇ ಕಾರ್ಯಪ್ರವೃತ್ತರಾಗಬೇಕು. ಪ್ರತಿಯೊಬ್ಬ ಮತದಾರರ ವಿಶ್ವಾಸವನ್ನು ಗಳಿಸಿ, ಪ್ರಾಶಸ್ತ್ಯದ ಮತವನ್ನು ಪಡೆಯಲು ಶ್ರಮಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಜಿಪಂ ಮಾಜಿ ಸದಸ್ಯೆ ಎಂ.ಸುಧಾ ಮಹದೇವಯ್ಯ, ಮೈಮುಲ್ ನಿರ್ದೇಶಕ ಆರ್.ಚೆಲುವರಾಜು, ಮಾಜಿ ನಿರ್ದೇಶಕ ಕೇತುಪುರ ಪ್ರಭಾಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಡಿ.ಬಸವರಾಜು, ಬೀಡನಹಳ್ಳಿ ಚನ್ನಕೇಶವ, ಪುರಸಭೆ ಅಧ್ಯಕ್ಷ ಎಸ್.ಮದನ್‌ರಾಜ್, ಸದಸ್ಯರಾದ ಟಿ.ಎಂ.ನಂಜುಂಡಸ್ವಾಮಿ, ಮಂಜು ಬಾದಾಮಿ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷರಾದ ಕೆ.ವಜ್ರೇಗೌಡ, ಎಂ.ಎಸ್.ಶಿವಮೂರ್ತಿ, ಮಾಜಿ ಪ್ರಧಾನ ಹೆಮ್ಮಿಗೆ ಶೇಷಾದ್ರಿ, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕಿ ಲತಾ ಜಗದೀಶ್, ತಾಪಂ ಮಾಜಿ ಅಧ್ಯಕ್ಷರಾದ ಎಂ.ಮಲ್ಲಿಕಾರ್ಜುನಸ್ವಾಮಿ, ಹೆಚ್.ಎನ್.ಉಮೇಶ್, ಮಾಜಿ ಸದಸ್ಯ ರಾಮಲಿಂಗಯ್ಯ, ಕುಕ್ಕೂರು ಗಣೇಶ್, ಗ್ರಾಪಂ ಅಧ್ಯಕ್ಷ ಕೃಷ್ಣೇಗೌಡ, ಮಾಜಿ ಅಧ್ಯಕ್ಷ ಚಿಕ್ಕಣ್ಣ, ಕುರುಬರ ಸಂಘದ ಕಾರ್ಯದರ್ಶಿ ಬಸವರಾಜು, ಜಿಲ್ಲಾ ಕಾಂಗ್ರೆಸ್ ವಕ್ತಾರ ಹುಣಸೂರು ಬಸವಣ್ಣ, ಮುಖಂಡರಾದ ಎ.ಬಿ.ಮಂಜುನಾಥ್, ಕೇತಹಳ್ಳಿ ಸಿದ್ದಶೆಟ್ಟಿ, ಮಹದೇವಸ್ವಾಮಿ, ಉಕ್ಕಲಗೆರೆ ಬಸವಣ್ಣ, ರಾಜು, ಎಂ.ಬಿ.ಚಂದ್ರಶೇಖರ್, ಸೋಸ್ಲೆ ಮಹದೇವಸ್ವಾಮಿ, ವಿಓ ಹುಂಡಿ ಬಸವರಾಜು, ಬನ್ನಳ್ಳಿ ಹುಂಡಿ ಪುಟ್ಟಸುಬ್ಬಯ್ಯ, ಜೆ.ಅನೂಪ್‌ಗೌಡ, ಪಿ.ಎ. ಗೋಪಾಲ್, ಬಸವರಾಜು ಇನ್ನಿತರರು ಹಾಜರಿದ್ದರು.

> ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ತಿ.ನರಸೀಪುರದಲ್ಲಿ ಹಲವು ಅಭಿವೃದ್ಧಿ ಕೆಲಸಗಳಿಗೆ ಚಾಲನೆ ನೀಡುವ ಮೂಲಕ ರಾಜ್ಯಕ್ಕೆ ಮಾದರಿ ಕ್ಷೇತ್ರವಾಗಿ ರೂಪಿಸಲಾಗಿದೆ. ಜೊತೆಗೆ ರಾಜ್ಯದ ಅಭಿವೃದ್ಧಿಗೆ ಜನಪರ ಯೋಜನೆಗಳನ್ನು ಜಾರಿಗೊಳಿಸಲಾಗಿತ್ತು. ಆದರೆ, ಬಿಜೆಪಿ ಇದು ನಮ್ಮ ಸಾಧನೆ ಎಂದು ಹೇಳುತ್ತಿದೆ.
>
> –ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವರು

ಪದವೀಧರರ ಸಮಸ್ಯೆ ನಿವಾರಣೆಗೆ ಬಿಜೆಪಿಯ ರವಿಶಂಕರ್ ಗೆಲ್ಲಿಸಿ



ದೇವನೂರು, ಜೂ.6(ಮೋಹನ್)– ಪದವೀಧರರ ಸಮಸ್ಯೆ ನಿವಾರಣೆಗಾಗಿ ಪದವೀಧರರ ಸಮಸ್ಯೆಗಳ ಅರಿವಿರುವ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರಿಗೆ ಈ ಬಾರಿ ಮತ ಚಲಾಯಿಸುವ ಮೂಲಕ ಒಮ್ಮೆ ಅವಕಾಶ ನೀಡಿ ಎಂದು ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸುರೇಶ್ ಬಾಬು ಹೇಳಿದರು.

ನಂಜನಗೂಡು ತಾಲೂಕಿನ ದೇವನೂರು, ಕವಲಂದೆ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಬಿಜೆಪಿ ಪಕ್ಷದ ಅಭ್ಯರ್ಥಿ ಮೈ ವಿ ರವಿಶಂಕರ್ ಪರ ಮತಯಾಚಿಸಿ ಅವರು ಮಾತನಾಡಿದರು. ಮೈ.ವಿ. ರವಿಶಂಕರ್ ಅವರು ನಾಲ್ಕು ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಪದವೀಧರರ ಸಮಸ್ಯೆಗಳನ್ನು ಆಲಿಸಿದ್ದಾರೆ. ಸರ್ಕಾರದ ಹಂತದಲ್ಲಿ ಪದವೀಧರರ ಸಮಸ್ಯೆ ನಿವಾರಿಸಲು ಮೈ.ವಿ. ರವಿಶಂಕರ್ ಅರ್ಹ ಅಭ್ಯರ್ಥಿಯಾಗಿದ್ದಾರೆ. ಅಲ್ಲದೆ ಕಳೆದ ಬಾರಿ ಅವರು ಕಡಿಮೆ ಅಂತರದಿಂದ ಸೋತಿದ್ದಾರೆ. ಈ ಬಾರಿ ಬಿಜೆಪಿ ಅಭ್ಯರ್ಥಿ ಪರ ಎಲ್ಲೆಡೆ ಉತ್ತಮ ವಾತಾವರಣವಿದ್ದು ಪದವೀಧರರ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಅವರಿಗೆ ಈ ಬಾರಿ ಒಮ್ಮೆ ಅವಕಾಶ ನೀಡಿ ಅವರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸುವಂತೆ ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಸಣ್ಣಯ್ಯ, ಗುರುಪಾದ, ಚಂದ್ರು, ಅವಿನಾಶ್, ರವಿ, ಸುರೇಶ್ ಮಾದಪ್ಪ ಸೇರಿದಂತೆ ಬಿಜೆಪಿ ಕಾರ್ಯಕರ್ತರು ಇದ್ದರು.

ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಗೆಲುವಿಗೆ ಶ್ರಮಿಸಿ

ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮನವಿ



ಕೆ.ಆರ್.ನಗರ, ಜೂ.6(ಕೆಟಿಆರ್)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಮುಂದಿನ ವಿಧಾನಸಭೆ ಚುನಾವಣೆಯ ದಿಕ್ಸೂಚಿಯಾಗಿದ್ದು, ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿ ಪಕ್ಷದ ಅಭ್ಯರ್ಥಿ ಮಧು.ಜಿ.ಮಾದೇಗೌಡ ಅವರ ಗೆಲುವಿಗೆ ದುಡಿಯಬೇಕು ಎಂದು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಹೇಳಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯ ಪ್ರಚಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಜನರ ಅನುಕೂಲಕ್ಕಾಗಿ ಜಾರಿಗೊಳಿಸಿದ ಯೋಜನೆಗಳ ಬಗ್ಗೆ ಮತದಾರರಿಗೆ ಮನವರಿಕೆ ಮಾಡಿಕೊಡಬೇಕು ಎಂದು ತಿಳಿಸಿದರು.

4 ಜಿಲ್ಲೆಗಳಿಂದ 1.33ಲಕ್ಷ ಮತದಾರರಿದ್ದು, ಕಾಂಗ್ರೆಸ್ ಅಭ್ಯರ್ಥಿ ಮಧು. ಜಿ. ಮಾದೇಗೌಡರು 48 ಸಾವಿರಕ್ಕೂ ಹೆಚ್ಚು ಮಂದಿ ನೋಂದಣಿ ಮಾಡಿಸಿರುವುದರ ಜೊತೆಗೆ ಅವರ ಸಂಪರ್ಕದಲ್ಲಿದ್ದ ಅಷ್ಟು ಮಂದಿಯ ಮೊದಲ ಪ್ರಾಶಸ್ತ್ಯದ ಮತಗಳನ್ನು ಪಡೆಯುವ ಮೂಲಕ ಜಯಗಳಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ 4,700 ಮತದಾರರಿದ್ದು, ಕನಿಷ್ಠ 3 ಸಾವಿರ ಮೊದಲ ಪ್ರಾಶಸ್ತ್ಯದ ಮತ ಪಡೆಯಲು ಕಾಂಗ್ರೆಸ್ ಮುಖಂಡರು ಪ್ರಯತ್ನಿಸಬೇಕು ಎಂದ ಅವರು, ಇದಕ್ಕೆ ಪಕ್ಷದ ಮುಖಂಡ ಡಿ.ರವಿಶಂಕರ್ ಎಲ್ಲಾ ರೀತಿಯ ಸಹಕಾರ ನೀಡಲಿದ್ದಾರೆ ಎಂದು ಭರವಸೆ ನೀಡಿದರು.

ಸಾಲಿಗ್ರಾಮ ಮತ್ತು ಕೆ.ಆರ್.ನಗರ ವ್ಯಾಪ್ತಿಯ 34 ಗ್ರಾಪಂಗಳಿಗೆ ತಲಾ 5 ಮಂದಿ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರನ್ನು ನೇಮಕ ಮಾಡಲಾಗಿದ್ದು, ಇವರು ನೋಂದಣಿಯಾಗಿರುವ ಪದವೀಧರ ಮತದಾರರನ್ನು ಗುರುತಿಸಿ ಕೆ.ಆರ್.ನಗರ ಪಟ್ಟಣಕ್ಕೆ ಜೂ.13 ರಂದು ಕರೆತಂದು ಪಕ್ಷದ ಅಭ್ಯರ್ಥಿ ಮಧು.ಜಿ. ಮಾದೇಗೌಡರಿಗೆ ಮತದಾನ ಮಾಡಿಸಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಮಾತನಾಡಿದರು. ಈ ವೇಳೆ ಪುರಸಭೆ ಅಧ್ಯಕ್ಷ ಕೋಳಿ ಪ್ರಕಾಶ್, ಸ್ಥಾಯಿ ಸಮಿತಿ ಅಧ್ಯಕ್ಷ ಶಂಕರ್, ಸದಸ್ಯರಾದ ಜಾವೀದ್ ಪಾಷ, ನಟರಾಜು, ಮಾಜಿ ಅಧ್ಯಕ್ಷೆ ಗೀತಾ ಮಹೇಶ್, ಜಿಪಂ ಮಾಜಿ ಸದಸ್ಯ ಶಿವರಾಮು, ಮುಖಂಡರಾದ ಸಿ.ಪಿ.ರಮೇಶ್, ಎಸ್.ಪಿ. ತಮ್ಮಯ್ಯ, ಶ್ರೀನಿವಾಸ್, ತೋಟಪ್ಪನಾಯಕ, ರಾಜನಾಯಕ, ಕೆ.ಬಿ.ನಟರಾಜು, ರಾಮಾಚಾರಿ, ಮುತ್ತುರಾಜ್, ಚಂದ್ರಶೇಖರ್, ಶಾಂತಿರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯಶಂಕರ್, ವಕ್ತಾರ ಸೈಯದ್ ಜಾಬೀರ್, ನಗರಾಧ್ಯಕ್ಷ ಎಂ.ಜೆ.ರಮೇಶ್, ಸಾಮಾಜಿಕ ಜಾಲತಾಣದ ಮುಖ್ಯಸ್ಥರಾದ ಹರಂಬಳ್ಳಿ ನವೀನ್, ಸರಿತಾ ಜವರಪ್ಪ ಇದ್ದರು.

ಬಿಜೆಪಿ ಅಭ್ಯರ್ಥಿ ಪರ ಮತಯಾಚನೆ



ಹೆಚ್.ಡಿ.ಕೋಟೆ, ಜೂ.6(ಮಂಜು)– ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ಪದವೀಧರ ಮತದಾರರ ಮನೆಗಳಿಗೆ ಬಿಜೆಪಿ ಮುಖಂಡ ಡಾ.ಹೆಚ್.ವಿ. ಕೃಷ್ಣಸ್ವಾಮಿ ಭೇಟಿ ನೀಡಿ, ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರವಾಗಿ ಮತ ಯಾಚಿಸಿದರು. ಈ ವೇಳೆ ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಪುಟ್ಟರಾಜು, ತಾಪಂ ಮಾಜಿ ಸದಸ್ಯರಾದ ರವಿಕುಮಾರ್, ಹನುಮಂತ ನಾಯಕ, ರಾಜೇಶ್, ಮಲ್ಲೇಗೌಡ, ಶಿವಕುಮಾರ್, ಶಿವು ಇದ್ದರು.

ಪರಿಸರ ಸಂರಕ್ಷಣೆಗೆ ಮುಂದಾಗಲು ಸಲಹೆ



ಮಲ್ಕುಂಡಿ, ಜೂ.6(ಚನ್ನಪ್ಪ)– ವಿಶ್ವ ಪರಿಸರ ದಿನದ ಅಂಗವಾಗಿ ಸೋಮವಾರ ನಂಜನಗೂಡು ತಾಲೂಕಿನ ಹರತಲೆ ಗ್ರಾಮದ ಮಹದೇಶ್ವರ ದೇವಸ್ಥಾನ ಹಾಗೂ ವಾಲ್ಮೀಕಿ ಭವನ ಆವರಣದಲ್ಲಿ ಗಿಡ ನೆಡಲಾಯಿತು.

ಈ ವೇಳೆ ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ ಮಾತನಾಡಿ, ಜಾಗತಿಕ ತಾಪಮಾನಗಳ ವೈಪರೀತ್ಯದಿಂದ ಉಸಿರಾಡಲು ಸಮರ್ಪಕವಾಗಿ ಶುದ್ಧವಾದ ಗಾಳಿ ಸಿಗದಂತಹ ಪರಿಸ್ಥಿತಿ ಉಂಟಾಗಿದೆ. ಈ ನಿಟ್ಟಿನಲ್ಲಿ ಎಲ್ಲರೂ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.


ಈ ವೇಳೆ ಗ್ರಾಮ ಪಂಚಾಯಿತಿ ಸದಸ್ಯ ಗೋವಿಂದರಾಜು, ಮುಖಂಡರಾದ ಮರಿಗಂಡನಾಯಕ, ಪ್ರಸನ್ನ, ಮಹದೇವು, ಮಂಜು ಸೇರಿದಂತೆ ಪ್ರಮುಖರು ಹಾಜರಿದ್ದರು.

'ಇರುವುದೊಂದೇ ಭೂಮಿ' ಪರಿಸರ ಜಾಗೃತಿ ಕಾರ್ಯಕ್ರಮ



ನಂಜನಗೂಡು, ಜೂ.6(ಸುದರ್ಶನ್)– ಪಟ್ಟಣದಲ್ಲಿ ಸೋಮವಾರ ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ ಸಂಘಟನೆಯಿಂದ 'ಇರುವುದೊಂದೇ ಭೂಮಿ' ಎಂಬ ಶೀರ್ಷಿಕೆಯಡಿ ಪರಿಸರ ಜಾಗೃತಿ ಕಾರ್ಯಕ್ರಮ ನಡೆಯಿತು. ಈ ವೇಳೆ 'ನಮ್ಮ ಭಾರತ' ಸಂಸ್ಥೆ ಉದ್ಘಾಟಿಸಲಾಯಿತು. ಬಳಿಕ ಸಾರ್ವಜನಿಕರಿಗೆ ಉಚಿತವಾಗಿ ಸಸಿ ವಿತರಿಸಲಾಯಿತು.

ಈ ವೇಳೆ ರಂಗಕರ್ಮಿ ಸಂತೋಷ ಗುಡ್ಡಿಯಂಗಡಿ, ಸಬ್‌ಇನ್‌ಸ್ಪೆಕ್ಟರ್ ರಾಮ್ ಕುಮಾರ್, ಮುಖಂಡರಾದ ಕೆ.ಆರ್. ಗೋಪಾಲಕೃಷ್ಣ, ಬಿ.ಜಿ.ಕಾತ್ಯಾಯಿನಿ, ಪಿ.ಸೋಮಶೇಖರ್, ಶೇಷಣ್ಣ, ಶ್ರೀಧರ್ ಬುದ್ಧ, ಮುದ್ದುಸ್ವಾಮಿ, ಎಂ.ವಿಜಯ್ ಕುಮಾರ್, ಎನ್.ಎಸ್.ಅಶೋಕ್, ಟಿ.ಆರ್.ನಾರಾಯಣ್ ಹಾಜರಿದ್ದರು.



ಸರಗೂರು ಹಾಗೂ ಹೆಚ್.ಡಿ.ಕೋಟೆ ತಾಲೂಕು ಘಟಕದ ಬಿಜೆಪಿ ಕಾರ್ಯಕರ್ತರು ಮಂಗಳವಾರ ಕರ್ನಾಟಕ ರಾಜ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ ಅಧ್ಯಕ್ಷ ಎಂ.ಅಪ್ಪಣ್ಣ ಅವರ ನಿವಾಸಕ್ಕೆ ತೆರಳಿ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಮುಖಂಡರಾದ ಹಂಚೀಪುರ ಗಣಪತಿ, ಕಾಟವಾಳು ನಟರಾಜು, ಶಂಕರೇಗೌಡ, ಎಂ.ಪಿ.ಮಂಜುನಾಥ್, ಸುನಂದರಾಜು, ಮಂಜುಳಾ ದೇವಣ್ಣ, ಹೆಚ್.ಸಿ.ಲಕ್ಷ್ಮಣ್, ಪಪಂ ಅಧ್ಯಕ್ಷೆ ರಾಧಿಕಾ, ದಾಸಪ್ಪ, ವಿನಾಯಕ ಪ್ರಸಾದ್, ಕೇಶವ, ಮಹೇಶ್‌ಗೌಡ, ರವಿ, ಕೃಷ್ಣಕುಮಾರ್ ಇನ್ನಿತರರಿದ್ದರು.

ಮಾಹಿತಿ ಆಯೋಗದಿಂದ ಹುಣಸೂರು ನಗರಸಭೆ ಕಂದಾಯಾಧಿಕಾರಿಗೆ 20 ಸಾವಿರ ರೂ. ದಂಡ

ಮೈಸೂರು, ಜೂ.6– ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದ ಅರ್ಜಿದಾರರಿಗೆ ನಿಗದಿತ ಸಮಯದಲ್ಲಿ ಮಾಹಿತಿ ಒದಗಿಸಲು ವಿಫಲರಾದ ಹುಣಸೂರು ನಗರಸಭೆ ಕಂದಾಯಾಧಿಕಾರಿ ಸಿದ್ದರಾಜು ಅವರಿಗೆ ಕರ್ನಾಟಕ ಮಾಹಿತಿ ಆಯೋಗವು ಎರಡು ಪ್ರಕರಣಗಳಲ್ಲಿ ಒಟ್ಟು 20 ಸಾವಿರ ರೂ.ದಂಡ ವಿಧಿಸಿದೆ.

ಹುಣಸೂರಿನ ಮುಸ್ಲಿಂ ಬ್ಲಾಕ್ ನಿವಾಸಿ ಜೆ.ಬಿ.ಒಬೇದುಲ್ಲಾ ಎಂಬುವರು 10 ಖಾತೆದಾರರು 2014–15ರಿಂದ 2016–17ರ ವರೆಗೆ ನಮೂನೆ–3 ಪಡೆಯಲು ನಗರಸಭೆಗೆ ಪಾವತಿಸಿದ್ದ ಶುಲ್ಕದ ರಶೀದಿ ನಕಲು ನೀಡುವಂತೆ 2021ರ ಫೆ.12 ಮತ್ತು ಮಾ.18ರಂದು ಎರಡು ಪ್ರತ್ಯೇಕ ಅರ್ಜಿಗಳನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಿದ್ದರು.

ನಗರಸಭೆಯ ಸಾರ್ವಜನಿಕ ಮಾಹಿತಿ ಅಧಿಕಾರಿಯೂ ಆದ ಕಂದಾಯಾಧಿಕಾರಿ ಸಿದ್ದರಾಜು ಸಕಾಲಕ್ಕೆ ಮಾಹಿತಿ ಒದಗಿಸದ ಕಾರಣ ಎರಡೂ ಪ್ರಕರಣಗಳಿಗೆ ಸೇರಿ ಒಟ್ಟು 20 ಸಾವಿರ ರೂ. ದಂಡ ವಿಧಿಸಲಾಗಿದ್ದು, ದಂಡ ಮೊತ್ತವನ್ನು 2022ರ ಜೂನ್ ಮತ್ತು ಜುಲೈನಲ್ಲಿ ತಲಾ 10 ಸಾವಿರ ರೂ.ಗಳಂತೆ ಅವರ ವೇತನದಲ್ಲಿ ಕಡಿತಗೊಳಿಸಿ ಸರ್ಕಾರದ ಆರ್‌ಟಿಐ ಖಾತೆಗೆ ಜಮೆ ಮಾಡಬೇಕು ಎಂದು ಹುಣಸೂರು ನಗರಸಭೆ ಆಯುಕ್ತ ರವಿಕುಮಾರ್ ಅವರಿಗೆ ನಿರ್ದೇಶಿಸಲಾಗಿದೆ

ರಸ್ತೆ ತುಂಬೆಲ್ಲಾ ಗುಂಡಿ: ದುಸ್ತರವಾದ ಸಂಚಾರ



ಹನಗೋಡು, ಜೂ.6(ಮಹೇಶ್)– ಪ್ರವಾಸಿಗರ ಅಚ್ಚುಮೆಚ್ಚಿನ ತಾಣಗಳಲ್ಲಿ ಒಂದಾಗಿರುವ ನಾಗರಹೊಳೆ ರಾಷ್ಟ್ರೀಯ ಉದ್ಯಾನವನಕ್ಕೆ ಸಂಪರ್ಕ ಕಲ್ಪಿಸುವ ಕಿರಂಗೂರು– ಹರಳಹಳ್ಳಿ ಮಾರ್ಗದ ರಸ್ತೆ ಹದಗೆಟ್ಟು ಗುಂಡಿಮಯವಾಗಿದ್ದು, ವಾಹನ ಸಂಚಾರ ಬಲು ದುಸ್ತರ ಎನಿಸಿದೆ.

ಹುಣಸೂರು ತಾಲೂಕಿನ ಹನಗೋಡು ಸಮೀಪದ ಕಿರಂಗೂರು– ಹರಳಹಳ್ಳಿ ರಸ್ತೆಯೂ ಹಲವು ವರ್ಷಗಳಿಂದ ಅಭಿವೃದ್ಧಿಯನ್ನು ಕಾಣದೆ ಸಂಪೂರ್ಣವಾಗಿ ಹದಗೆಟ್ಟಿದೆ ಇದರಿಂದ ರಸ್ತೆಯಲ್ಲಿ ಯಮಸ್ವರೂಪಿ ಗುಂಡಿಗಳು ಸೃಷ್ಟಿಯಾಗಿವೆ.

ಹನಗೋಡುನಿಂದ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ, ಹೆಚ್.ಡಿ.ಕೋಟೆ, ಹುಣಸೂರು ಸೇರಿದಂತೆ ನಾಗಾಪುರ, ಹೊಸೂರು, ಗುರುಪುರ, ಟಿಬೆಟ್ ಕ್ಯಾಂಪ್ ಸೇರಿದಂತೆ ಹಲವು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಇದಾಗಿದ್ದು, ಪ್ರತಿನಿತ್ಯ ನೂರಾರು ವಾಹನಗಳು ಈ ರಸ್ತೆಯಲ್ಲಿ ಸಂಚರಿಸುತ್ತವೆ. ಆದರೆ, ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಇದನ್ನು ಸರಿಪಡಿಸುವಂತೆ ಹಲವು ಬಾರಿ ಜನಪ್ರತಿನಿಧಿಗಳು, ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎನ್ನುತ್ತಾರೆ ಸಾರ್ವಜನಿಕರು.

ಇತ್ತೀಚೆಗೆ ಸುರಿದ ಭಾರೀ ಮಳೆಯಿಂದಾಗಿ ರಸ್ತೆಯಲ್ಲಿದ್ದ ಗುಂಡಿಗಳು ಮತ್ತಷ್ಟು ಹೆಚ್ಚಾಗುವ ಜೊತೆಗೆ, ಅವುಗಳ ಆಳವೂ ಹೆಚ್ಚಾಗಿದೆ. ಅಲ್ಲದೆ ಮಳೆಯ ವೇಳೆ ನೀರು ತುಂಬಿಕೊಂಡು ಗುಂಡಿ ಕಾಣದೆ ಸಾಕಷ್ಟು ಬೈಕ್ ಸವಾರರು ಬಿದ್ದು ಗಾಯಗೊಂಡಿರುವ ನಿದರ್ಶನಗಳಿವೆ. ಶಾಲಾ ಮಕ್ಕಳು ಸೇರಿದಂತೆ ಸಾಕಷ್ಟು ಮಂದಿ ಈ ರಸ್ತೆಯಲ್ಲಿ ಸಂಚರಿಸುವುದರಿಂದ ದೊಡ್ಡ ಅನಾಹುತ ಸಂಭವಿಸುವ ಮೊದಲೇ ರಸ್ತೆ ಸರಿಪಡಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಬಸ್ ಸಂಚಾರ ಸ್ಥಗಿತ: ದಿನದಿಂದ ದಿನಕ್ಕೆ ರಸ್ತೆ ಸಂಪೂರ್ಣವಾಗಿ ಹಾಳಾಗುತ್ತಿರುವುದರಿಂದ ಮೂರು ಗ್ರಾಮಗಳಿಗೆ ಸರ್ಕಾರಿ ಬಸ್‌ಗಳ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಈ ರಸ್ತೆಯಲ್ಲಿ ಬಸ್ ಚಾಲನೆ ಮಾಡಲು ಕಷ್ಟವಾಗುತ್ತದೆ ಎಂದು ಚಾಲಕರು ಕಲ್ಲೂರಪ್ಪನಬೆಟ್ಟದ ರಸ್ತೆ ಮೂಲಕ ಹೋಗುವುದರಿಂದ ಕಿರಂಗೂರು, ಅಂಬೇಡ್ಕರ್ ಹೊಸೂರು, ಮಾದಳ್ಳಿ ಗ್ರಾಮಗಳಿಗೆ ಬಸ್ ಸಂಪರ್ಕ ಸ್ಥಗಿತವಾಗಿದೆ. ಹಾಗಾಗಿ, ಸುಮಾರು 4ರಿಂದ 5 ಕಿ.ಮೀ. ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ನಡೆದುಕೊಂಡೇ ಓಡಾಡುವಂತಾಗಿದೆ.



> ಈ ರಸ್ತೆಯು ಹಿಂದೆ ಜಿಲ್ಲಾ ಪಂಚಾಯಿತಿಗೆ ಸೇರಿತ್ತು. ಆದರೆ, ದೊಡ್ಡ ಮಟ್ಟದ ರಸ್ತೆ ಕಾಮಗಾರಿ ನಡೆಸಲು ಅನುದಾನದ ಕೊರತೆಯಿಂದ ಅಭಿವೃದ್ಧಿಯಾಗಲಿಲ್ಲ. ಹಾಗಾಗಿ, ಸತತ ಪ್ರಯತ್ನದಿಂದ ಲೋಕೋಪಯೋಗಿ ಇಲಾಖೆಗೆ ಈ ರಸ್ತೆಯನ್ನು ಸೇರ್ಪಡೆ ಮಾಡುವ ಮೂಲಕ ಸರ್ಕಾರಕ್ಕೆ ಉತ್ತಮ ರಸ್ತೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸದ್ಯದಲ್ಲೇ ಮಂಜೂರಾತಿ ನೀಡಲಾಗುತ್ತದೆ.
>
> -ಹೆಚ್.ಪಿ.ಮಂಜುನಾಥ್, ಶಾಸಕರು.

> ಹನಗೋಡಿನಿಂದ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಈ ಹಿಂದೆ ಜಿಲ್ಲಾ ಪಂಚಾಯಿತಿಗೆ ಸೇರಿತ್ತು. ಪ್ರಸ್ತುತ ಇದರ ನಿರ್ವಹಣೆಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದ್ದು, ಅಭಿವೃದ್ಧಿಗಾಗಿ ಪ್ರಸ್ತಾವನೆ ಸಿದ್ಧಪಡಿಸುತ್ತಿದ್ದೇನೆ. ಶೀಘ್ರವೇ ಅಭಿವೃದ್ಧಿ ಮಾಡಲಾಗುವುದು.
>
> -ಭೋಜರಾಜ್, ಸಹಾಯಕ ಅಭಿಯಂತರರು, ಪಿಡಬ್ಲ್ಯೂಡಿ

> ನಾಗರಹೊಳೆ ರಾಷ್ಟ್ರೀಯ ಉದ್ಯಾನವನಕ್ಕೆ ತೆರಳುವ ರಸ್ತೆ ಹಲವು ವರ್ಷಗಳಿಂದ ಹದಗೆಟ್ಟಿದೆ. ಜೊತೆಗೆ ಇಲ್ಲಿ ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದೇ ಇರುವುದರಿಂದ ಸಣ್ಣ ಮಳೆಗೂ ರಸ್ತೆ ತುಂಬೆಲ್ಲ ನೀರು ಹರಿಯುತ್ತದೆ. ಹೆಚ್ಚಿನ ಮಳೆಯಾದರೆ ಇಲ್ಲಿ ಓಡಾಡುವುದೇ ಸವಾಲಿನ ಕೆಲಸ. ಅಲ್ಲದೆ ಇಲ್ಲಿನ ಗುಂಡಿಗಳು ಸಹ ದಿನಕಳೆದಂತೆ ಆಳವಾಗುತ್ತಿವೆ. ಜನರ ಅನುಕೂಲಕ್ಕಾಗಿ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಿ ಶೀಘ್ರವೇ ರಸ್ತೆ ಸರಿಪಡಿಸಬೇಕು.
>
> -ಶಿವು, ಗ್ರಾಮಸ್ಥ

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.10.40ಕ್ಕೆ, ಬೂಲ್ ಬುಲಾಯ್ಯ (ಹಿಂ): ಮ.1.15ಕ್ಕೆ, ವಿಕ್ರಂ (ತ): ಸಂ.4ಕ್ಕೆ, ಮೇಜರ್ (ತೆ): ರಾ.7.20ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಮೆಟಡೊರ್ (ಕ): ಬೆ.11ಕ್ಕೆ, ಗಜಾನನ ಅಂಡ್ ಗ್ಯಾಂಗ್ (ಕ): ಮ.1.45ಕ್ಕೆ, ರಾಜ್ ಸೌಂಡ್ಸ್ ಅಂಡ್ ಲೈಟ್ಸ್ (ತು): ಸಂ.4.05ಕ್ಕೆ, ಪೃಥ್ವಿರಾಜ್ (ಹಿಂ): ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಮೇಜರ್ (ತೆ): ಬೆ.10.15ಕ್ಕೆ, ಕೆಜಿಎಫ್ 2(ಕ): ಮ.1.10ಕ್ಕೆ, ಪೃಥ್ವಿರಾಜ್ (ಹಿಂ): ಸಂ.4.20ಕ್ಕೆ, ಮೇಜರ್ (ಹಿಂ): ರಾ.7ಕ್ಕೆ, ಮೇಜರ್ (ಮ): ರಾ.10ಕ್ಕೆ.
ಸ್ಕ್ರೀನ್ 4	ವಿಕ್ರಂ (ತ): ಬೆ.9.45ಕ್ಕೆ, ಮ. 1ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಟಾಪ್‌ಗನ್ (ಇಂ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1	ವಿಕ್ರಂ (ತ): ಬೆ.11.35ಕ್ಕೆ, ಮ.3.10ಕ್ಕೆ, ಸಂ.6.45ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ವಿಕ್ರಂ (ತ): ಬೆ.9.40ಕ್ಕೆ, ಸಾಮ್ರಾಟ್ ಪೃಥ್ವಿರಾಜ್ (ಹಿಂ): ಮ.1.10ಕ್ಕೆ, ರಾ.7.15ಕ್ಕೆ, ಮೇಜರ್ (ತೆ): ಸಂ.4.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 3	ಸಾಮ್ರಾಟ್ ಪೃಥ್ವಿರಾಜ್ (ಕ): ಬೆ.9.50ಕ್ಕೆ, ರಾ.10.30ಕ್ಕೆ, ಮೆಟಡೊರ್ (ಕ): ಮ.12.45ಕ್ಕೆ, ಮನಸ್ಮಿತ (ಕ): ಮ.3.40ಕ್ಕೆ, ವಿಕ್ರಂ (ತ): ಸಂ.6.55ಕ್ಕೆ.
ಸ್ಕ್ರೀನ್ 4	ಮೇಜರ್ (ತೆ): ಬೆ.9.55ಕ್ಕೆ, ಗಜಾನನ ಅಂಡ್ ಗ್ಯಾಂಗ್ (ಕ): ಮ.1ಕ್ಕೆ, ಮೇಜರ್ (ಹಿಂ): ಸಂ.6.50ಕ್ಕೆ, ಕೆಜಿಎಫ್ 2(ಕ): ಮ.3.25ಕ್ಕೆ, ಬೂಲ್ ಬುಲಾಯ್ಯ 2(ಹಿಂ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ.10.30ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ರಾ.9.25ಕ್ಕೆ, ಮೆಟಡೊರ್ (ಕ): ಮ.1.15ಕ್ಕೆ
ಸ್ಕ್ರೀನ್ 2	ವಿಕ್ರಂ (ತ): ಬೆ.10ಕ್ಕೆ, ರಾ.9.30ಕ್ಕೆ, ಮೇಜರ್ (ಹಿಂ): ಸಂ.4ಕ್ಕೆ
ಸ್ಕ್ರೀನ್ 3	ವಿಕ್ರಂ (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಮೇಜರ್ (ತೆ): ಬೆ.10.25ಕ್ಕೆ, ಮ.1.20ಕ್ಕೆ, ಸಂ.6.35ಕ್ಕೆ, ಗಜಾನನ ಅಂಡ್ ಗ್ಯಾಂಗ್ (ಕ): ಸಂ.4.15ಕ್ಕೆ, ಮೇಜರ್ (ಹಿಂ): ರಾ.9.30ಕ್ಕೆ

ಪಿವಿಆರ್ ಸಿನಿಮಾಸ್

ಮೊ.ನಂ: 8951357088

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2(ಕ): ಸಂ.5.35ಕ್ಕೆ, ರಾಜ್ ಸೌಂಡ್ಸ್ ಅಂಡ್ ಲೈಟ್ಸ್ (ತು): ಸಂ.6.05ಕ್ಕೆ, ಮೆಟಡೊರ್ (ಕ): ಬೆ.11.45ಕ್ಕೆ, ಟಾಪ್ ಗನ್ (ಇಂ): ಮ.2.45ಕ್ಕೆ, ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಬೂಲ್‌ಬುಲಯ್ಯ 2(ಹಿಂ): ಮ.12.30ಕ್ಕೆ, ಸಂ.6.40ಕ್ಕೆ, ಮೇಜರ್ (ಹಿಂ): ಮ.1.05ಕ್ಕೆ, ರಾ.7.15ಕ್ಕೆ, ರಾ.9.20ಕ್ಕೆ, ವಿಕ್ರಮ್ (ತ): ಬೆ.8.30ಕ್ಕೆ, ಬೆ.9.30ಕ್ಕೆ, ಬೆ.11ಕ್ಕೆ, ಮ.12ಕ್ಕೆ, ಮ.2.35ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.9ಕ್ಕೆ, ರಾ.10.30ಕ್ಕೆ, ಮೇಜರ್ (ತೆ): ಬೆ.9.25ಕ್ಕೆ, ಸಂ.4.10ಕ್ಕೆ, ರಾ.10.20ಕ್ಕೆ, F3 (ತೆ): ಮ.3.35ಕ್ಕೆ, ಸರ್ಕಾರು ವಾರಿ ಪಾಠ (ತೆ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಿಕ್ರಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ರಂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿಕ್ರಂ (ತ)	4 ಪ್ರದರ್ಶನಗಳು
ಗಾಯಿತ್ರಿ	
ಮೇಜರ್ (ಹಿಂ)	4 ಪ್ರದರ್ಶನಗಳು
ರಾಜ್‌ಕಮಲ್	
ಪೃಥ್ವಿರಾಜ್ (ಹಿಂ)	4 ಪ್ರದರ್ಶನಗಳು
ಸಂಗಂ	
ವಿಕ್ರಂ (ತ)	4 ಪ್ರದರ್ಶನಗಳು
ಲಿಡೋ	
ಮೇಜರ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಮೇಜರ್ (ಹಿಂ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಮೇಜರ್ (ತೆ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಗಜಾನನ ಅಂಡ್ ಗ್ಯಾಂಗ್ (ಕ)	4 ಪ್ರದರ್ಶನಗಳು